بِسۡمِ اللّٰہِ الرَّحۡمٰنِ الرَّحِیۡمِ    نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ    وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.

## ಅಲ್ಲಾಹನ ಉಪದೇಶ

### ದೃಢವಿಶ್ವಾಸ ಮತ್ತು ದೈವಜ್ಞಾನ

فَسَبِّحۡ بِحَمۡدِ رَبِّکَ وَ کُنۡ مِّنَ السّٰجِدِیۡنَ ﴿۹۹﴾ وَ اعۡبُدۡ رَبَّکَ حَتّٰی یَاۡتِیَکَ الۡیَقِیۡنُ ﴿۱۰۰﴾

(ಅಲ್‌ಹಿಜ್‌ರ್ : 99–100)

ಅಂದರೆ: ನೀನು ನಿನ್ನ ಪ್ರಭುವನ್ನು ಸ್ತುತಿಸುತ್ತಾ ಅವನ ಮಹತ್ವದ ಕೀರ್ತನೆ ಮಾಡು ಮತ್ತು ಅವನಿಗೆ ಸಾಷ್ಟಾಂಗವೆರಗುವವರಲ್ಲಿ ನೀನಾಗು. ನಿನಗೆ ಮರಣ ಬರುವ ವರೆಗೆ ನೀನು ನಿನ್ನ ಪ್ರಭುವನ್ನೇ ಆರಾಧಿಸು.

ಸಂಪುಟ: 07, ಸಂಚಿಕೆ: 39, 24 ಸೆಪ್ಟೆಂಬರ್ 2026, 24 ತಬೂಕ್ 1405 ಹಿಜರಿ ಶಮ್‌ಸಿ,
12 ರಬೀಉಸ್ಸಾನಿ 1448 ಹಿಜರಿ ಖಮರಿ. (www.akhbarbadr.in)



## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ನೀವು ಅಲ್ಲಾಹನಲ್ಲಿ ದುವಾ (ಪ್ರಾರ್ಥನೆ) ಮಾಡುವಾಗ, ನಿಮ್ಮ ದುವಾ ಖಂಡಿತವಾಗಿಯೂ ಸ್ವೀಕರಿಸಲ್ಪಡುತ್ತದೆ ಎಂಬ ದೃಢವಾದ ವಿಶ್ವಾಸದೊಂದಿಗೆ ಪ್ರಾರ್ಥಿಸಿರಿ

عَنۡ أَبِي هُرَيۡرَةَ قَالَ: قَالَ رَسُولُ اللّٰهِ صَلَّى اللّٰهُ عَلَيۡهِ وَسَلَّمَ: "ادۡعُوا اللّٰهَ وَأَنۡتُمۡ مُوقِنُونَ بِالۡإِجَابَةِ، وَاعۡلَمُوا أَنَّ اللّٰهَ لَا يَسۡتَجِيبُ دُعَاءً مِنۡ قَلۡبٍ غَافِلٍ لَاهٍ"

[سنن ترمذی/ کتاب الدعوات عن رسول اللہ صلی اللہ علیہ وسلم/حدیث: 3479]

ಹಝ್ರತ್ ಅಬೂ ಹುರೈರಾ (ರ.ಅ) ಅವರು ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಅಲ್ಲಾಹನಲ್ಲಿ ದುವಾ (ಪ್ರಾರ್ಥನೆ) ಮಾಡುವಾಗ, ನಿಮ್ಮ ದುವಾ ಖಂಡಿತವಾಗಿಯೂ ಸ್ವೀಕರಿಸಲ್ಪಡುತ್ತದೆ ಎಂಬ ದೃಢವಾದ ವಿಶ್ವಾಸದೊಂದಿಗೆ ಪ್ರಾರ್ಥಿಸಿರಿ. ಮತ್ತು ಚೆನ್ನಾಗಿ ತಿಳಿದುಕೊಳ್ಳಿರಿ: ಅಲಕ್ಷ್ಯ, ನಿರ್ಲಕ್ಷ್ಯ ಹಾಗೂ ಆಟ–ಮನರಂಜನೆಯಲ್ಲಿ ಮುಳುಗಿರುವ ಹೃದಯದಿಂದ, ನಿರ್ಲಕ್ಷ್ಯಪೂರ್ವಕವಾಗಿ ಸಲ್ಲಿಸಲಾದ ದುವಾವನ್ನು ಅಲ್ಲಾಹನು ಸ್ವೀಕರಿಸುವುದಿಲ್ಲ."

عَنۡ عُمَرَ بۡنِ الۡخَطَّابِ، قَالَ: قَالَ رَسُولُ اللّٰهِ صَلَّى اللّٰهُ عَلَيۡهِ وَسَلَّمَ "لَوۡ أَنَّكُمۡ كُنۡتُمۡ تَوَكَّلُونَ عَلَى اللّٰهِ حَقَّ تَوَكُّلِهِ لَرُزِقۡتُمۡ كَمَا تُرۡزَقُ الطَّيۡرُ تَغۡدُو خِمَاصًا وَتَرُوحُ بِطَانًا

[سنن ترمذی/ کتاب الزهد عن رسول اللہ صلی اللہ علیہ وسلم/حدیث: 2344]

ಹಝ್ರತ್ ಉಮರ್ ಬಿನ್ ಖತ್ತಾಬ್ (ರ.ಅ) ಅವರು ಹೇಳುತ್ತಾರೆ: ಹಝ್ರುರತ್ ಪೈಗಂಬರ್(ಸ) ಹೇಳಿದರು: "ನೀವು ಅಲ್ಲಾಹನ ಮೇಲೆ ಭರವಸೆ ಇಡಬೇಕಾದ ರೀತಿಯಲ್ಲಿ ನಿಜವಾದ ಭರವಸೆಯನ್ನು ಇಟ್ಟರೆ, ಆತನು ನಿಮಗೆ ಪಕ್ಷಿಗಳಿಗೆ ನೀಡುವ ರೀತಿಯಲ್ಲಿ ಜೀವನೋಪಾಯವನ್ನು ನೀಡುವನು. ಅವು ಬೆಳಿಗ್ಗೆ ಹಸಿದ ಹೊಟ್ಟೆಯಿಂದ ಹೊರಡುತ್ತವೆ ಮತ್ತು ಸಂಜೆ ಹೊಟ್ಟೆತುಂಬಿಕೊಂಡು ಹಿಂದಿರುಗುತ್ತವೆ."



## ಹಝ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ

### ಅಮಲ್‌ನ ದುರ್ಬಲತೆ, ತಕ್ವಾದ ದುರ್ಬಲತೆ ಹಾಗೂ ಇತರ ಆಧ್ಯಾತ್ಮಿಕ ರೋಗಗಳೆಲ್ಲವೂ ಕಾಣಿಸಿಕೊಳ್ಳುವುದರ ಮೂಲ ಕಾರಣ ಮಅರಿಫತ್‌ನ ದುರ್ಬಲತೆಯೇ ಆಗಿದೆ.

ಹಝ್ರತ್ ಮಸೀಹ್ ಮೌಊದ್ (ಅ.ಸ) ಅವರು ಹೇಳುತ್ತಾರೆ:

"ಈಮಾನ್‌ಗೆ ಬಲವರ್ಧನೆ ನೀಡುವ ಅಗತ್ಯ ಅತ್ಯಂತ ಮಹತ್ತರವಾಗಿದೆ. ಈಮಾನ್ ಇಲ್ಲದೆ, ಅಮಲ್‌ಗಳು ಸತ್ತ ದೇಹದಂತಿರುತ್ತವೆ. ಈಮಾನ್ ಇದ್ದಾಗ ಮಾತ್ರ ಮನುಷ್ಯನಿಗೆ ಅಂತಹ ಮಅರಿಫತ್ (ದೈವಿಕ ಜ್ಞಾನ ಮತ್ತು ಪರಿಚಯ) ದೊರೆಯುತ್ತದೆ; ಅದರ ಮೂಲಕ ಅವನು ಆಧ್ಯಾತ್ಮಿಕವಾಗಿ ಆಕಾಶದತ್ತ ಏರಲು ಸಾಧ್ಯವಾಗುತ್ತದೆ. ಆದರೆ ಈಮಾನ್ ಮತ್ತು ಮಅರಿಫತ್ ಇಲ್ಲದಿದ್ದರೆ, ಅಲ್ಲಾಹನ ಬರಕಾತ್‌ಗಳೂ ದೊರೆಯುವುದಿಲ್ಲ, ನಿಜವಾದ ಸಂತೋಷವೂ ಲಭಿಸುವುದಿಲ್ಲ. ಅಲ್ಲಾಹನನ್ನು ಅರಿತು, ಆತನ ಸಾನ್ನಿಧ್ಯದ ಅರಿವಿನೊಂದಿಗೆ ಯಾವುದೇ ಅಮಲ್ ಮಾಡಲ್ಪಟ್ಟಾಗ, ಆ ಅಮಲ್‌ನ ಮಹತ್ವ ಮತ್ತು ಶ್ರೇಷ್ಠತೆ ಎಂತಹದ್ದಾಗಿರುತ್ತದೆ! ಅಂತಹ ಅಮಲ್ ಮತ್ತೊಬ್ಬರದ್ದಾಗಿರಲು ಸಾಧ್ಯವೇ? ಖಂಡಿತವಾಗಿಯೂ ಇಲ್ಲ. ಅಮಲ್‌ನ ದುರ್ಬಲತೆ, ತಕ್ವಾದ ದುರ್ಬಲತೆ ಹಾಗೂ ಇತರ ಆಧ್ಯಾತ್ಮಿಕ ರೋಗಗಳೆಲ್ಲವೂ ಕಾಣಿಸಿಕೊಳ್ಳುವುದರ ಮೂಲ ಕಾರಣ ಮಅರಿಫತ್‌ನ ದುರ್ಬಲತೆಯೇ ಆಗಿದೆ. ಒಂದು ಸಣ್ಣ ಹುಳುವಿನ ಸ್ವಭಾವ ಮತ್ತು ಸಾಮರ್ಥ್ಯದ ಅರಿವು ಮನುಷ್ಯನಲ್ಲಿದ್ದರೂ, ಅವನು ಅದರಿಂದ ಭಯಪಡುತ್ತಾನೆ. ಹಾಗಾದರೆ ಖುದಾ ತಆಲಾದ ಮಅರಿಫತ್ ಅವನಿಗೆ ದೊರೆತಿದ್ದರೆ, ಆತನು ಅಲ್ಲಾಹನಿಗೆ ಏಕೆ ಭಯಪಡಬಾರದು?

ಆದ್ದರಿಂದ, ಮಅರಿಫತ್‌ನ ಅಗತ್ಯವು ಅತ್ಯಂತ ಮಹತ್ತರವಾಗಿದೆ. ನಾನು ನೋಡುತ್ತಿರುವುದೇನೆಂದರೆ, ನಮ್ಮ ಜಮಾಅತ್ ಸಂಖ್ಯೆಯಲ್ಲಿ ಹೆಚ್ಚುತ್ತಿದೆ. ಆದರೆ ಸದ್ಯಕ್ಕೆ ಕೇವಲ ಅದರ ಮೇಲ್ಮೈಯಷ್ಟೇ ವೃದ್ಧಿಯಾಗುತ್ತಿರುವಂತೆ ಕಾಣುತ್ತದೆ; ಅದರ ಒಳಗಿನ ಸಾರಭೂತ ಭಾಗವಾದ 'ಮಗ್ಝ್' (ಸಾರ) ವೃದ್ಧಿಯಾದರೆ ಮಾತ್ರ ನಿಜವಾದ ವಿಷಯವಾಗಿದೆ. ನನ್ನ ಮನಸ್ಸಿಗೆ ಪದೇಪದೇ ಈ ವಿಚಾರ ಬರುತ್ತದೆ: ಹಝ್ರತ್ ಪೈಗಂಬರ್(ಸ) ಅವರ ದೈವಿಕ ಶಕ್ತಿಯ ಪ್ರಭಾವವು ಎಷ್ಟು ಅದ್ಭುತವಾದುದಾಗಿತ್ತು! ಸಹಾಬಾ–ಎ–ಕಿರಾಮ್ (ರ.ಅ) ಅವರು ಆ ಪವಿತ್ರ ನಬಿಯವರ ಮೇಲೆ ಈಮಾನ್ ತಂದ ತಕ್ಷಣವೇ, ಒಂದೇ ಬಾರಿ ಲೋಕದ ತೀರ್ಪನ್ನೇ ಬದಲಾಯಿಸಿದರು. ಮನುಷ್ಯನಿಗೆ ತನ್ನ ಪ್ರಾಣಕ್ಕಿಂತ ಅಮೂಲ್ಯವಾದದ್ದು ಇನ್ನೇನು ಇರಬಹುದು? ಆದರೆ ಅವರು ತಮ್ಮ ರಕ್ತದಿಂದಲೇ ದೀನ್‌ನ ಮೇಲೆ ಮುದ್ರೆ ಒತ್ತಿದರು. ಇಂದಿನ ಜನರು ಬೈಅತ್ ಮಾಡಿಕೊಳ್ಳುವಾಗ, ಅವರೊಂದಿಗೆ ಕೆಲವು ಗುಪ್ತ ಲೌಕಿಕ ಉದ್ದೇಶಗಳೂ ಬಂದಿವೆಯೇ ಎಂದು ಕಾಣಬೇಕಾಗುತ್ತದೆ, 'ಈ ಲೌಕಿಕ ಕೆಲಸ ನೆರವೇರಲಿ', 'ಅದು ದೊರಕಲಿ' ಎಂಬ ಆಶೆಗಳೊಂದಿಗೆ. ಇದು ಸತ್ಯವೇ ಸರಿ: ಒಬ್ಬನು ನಿಜವಾದ ಮುಮಿನ್ ಆದಾಗ, ಸರ್ವಶಕ್ತನಾದ ಅಲ್ಲಾಹನು ಅವನ ಪ್ರತಿಯೊಂದು ಕಷ್ಟವನ್ನೂ ಸುಲಭಗೊಳಿಸುತ್ತಾನೆ. ಆದರೆ ಎಲ್ಲಕ್ಕಿಂತ ಮೊದಲು ಮಅರಿಫತ್ ಅತ್ಯಾವಶ್ಯಕ. ನಂತರ ಅಲ್ಲಾಹನು ಸ್ವತಃ ಅವನ ಪ್ರತಿಯೊಂದು ಅಗತ್ಯದ ಕಫೀಲನಾಗುವನು."

**(ಮಲ್ಫೂಝಾತ್, ಸಂಪುಟ 5, ಪುಟ 222–223)**

––––––––––––––*****––––––––––––––




## ತಫ್ಸೀರ್ ಕಬೀರ್‌ನಿಂದ ಉಲ್ಲೇಖ

### 'ಯಕೀನ್' ಎಂಬ ಪದದ ಪ್ರಸಿದ್ಧ ಮತ್ತು ನಿಜವಾದ ಅರ್ಥವೇನು?

ಸೂರತುಲ್ ಹಿಜ್ರ್‌ನ ಆಯತ್ **ವಅಬುದ್ ರಬ್ಬಕ ಹತ್ತಾ ಯತಿಯಕಲ್ ಯಖೀನ್** ನ ವ್ಯಾಖ್ಯಾನದಲ್ಲಿ ಹಝ್ರುತ್ ಮುಸ್ಲಿಹ್ ಮೌಊದ್ (ರ.ಅ.) ಅವರು ಹೀಗೆ ವಿವರಿಸುತ್ತಾರೆ:

"'ಯಕೀನ್' ಎಂಬ ಪದದ ಅರ್ಥವನ್ನು ಇಲ್ಲಿ ಮರಣವೆಂದು ತೆಗೆದುಕೊಳ್ಳಬಹುದು. ಅಂದರೆ, 'ಈಗ ನೀನು ಮರಣವು ನಿನ್ನ ಬಳಿಗೆ ಬರುವವರೆಗೆ ನಮ್ಮ ಇಬಾದತ್‌ನಲ್ಲಿ ತೊಡಗಿಕೊಂಡಿರು.' ಇದರ ಅರ್ಥವೇನೆಂದರೆ, ಇಸ್ಲಾಂಗೆ ದೊರೆಯಲಿರುವ ಪ್ರಗತಿಯಲ್ಲಿ ಇನ್ನು ಯಾವುದೇ ಅಡ್ಡಿಯುಂಟಾಗುವುದಿಲ್ಲ. ಮತ್ತು ನೀನು ನಿನ್ನ ಮರಣದವರೆಗೆ ಸಂಪೂರ್ಣ ಸ್ವಾತಂತ್ರ್ಯದಿಂದ, ಬಹಿರಂಗವಾಗಿ ಅಲ್ಲಾಹ್ ತಆಲಾ ಅವರ

*(ಪುಟ ಸಂಖ್ಯೆ–08 ರಲ್ಲಿ ಮುಂದುವರಿಸಲಾಗಿದೆ)*

**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

## ಮಜ್ಲಿಸ್–ಎ–ಇರ್ಫಾನ್ ಒಂದು ಜಾಗತಿಕ ಆಧ್ಯಾತ್ಮಿಕ ಮಾರ್ಗದರ್ಶನ ಕಾರ್ಯಕ್ರಮ

ಜಮಾಅತ್ ಅಹ್ಮದೀಯಾದ ಸ್ಥಾಪನೆಯಾದ ದಿನದಿಂದಲೇ, ಸರ್ವಶಕ್ತನಾದ ಅಲ್ಲಾಹನ ಅನುಮತಿಯಿಂದ ಸ್ಥಾಪಿತವಾದ ಈ ಪವಿತ್ರ ಜಮಾಅತ್‌ನ ಸದಸ್ಯರ ತರಬಿಯತ್‌ಗಾಗಿ "ಮಜ್ಲಿಸ್–ಎ–ಇರ್ಫಾನ್" ಒಂದು ಮೂಲಭೂತ ಮತ್ತು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಈ ಮಜ್ಲಿಸ್–ಎ–ಇರ್ಫಾನ್‌ನ ಆರಂಭವು ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಯುಗದಲ್ಲಿಯೇ ಆಯಿತು. ಹಝ್ರತ್ ಮಸೀಹ್ ಮೌಊದ್(ಅ) ಅವರ ಪವಿತ್ರ ಉಪದೇಶಗಳನ್ನು ತಕ್ಷಣವೇ ದಾಖಲಿಸಲಾಗುತ್ತಿತ್ತು ಮತ್ತು ನಂತರ ಅವುಗಳನ್ನು ಅಖ್‌ಬಾರ್ ಅಲ್–ಹಕಮ್ ಮತ್ತು ಅಲ್–ಬದರ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತಿತ್ತು. ಈ ಮಜ್ಲಿಸ್‌ಗಳ ಸಂಗ್ರಹವು ಇಂದು "ಮಲ್ಫೂಝಾತ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್" ಎಂಬ ರೂಪದಲ್ಲಿ ಲಭ್ಯವಿದೆ. ಅದೇ ರೀತಿ ಹಝ್ರತ್ ಖಲೀಫತುಲ್ ಮಸೀಹ್ ಅಲ್–ಅವ್ವಲ್ ರಝಿಯಲ್ಲಾಹು ಅನ್‌ಹು, ಹಝ್ರತ್ ಖಲೀಫತುಲ್ ಮಸೀಹ್ ಅಸ್–ಸಾನಿ ರಝಿಯಲ್ಲಾಹು ಅನ್‌ಹು, ಹಝ್ರತ್ ಖಲೀಫತುಲ್ ಮಸೀಹ್ ಅಸ್–ಸಾಲಿಸ್ ರಹ್ಮಹುಲ್ಲಾಹ್ ಮತ್ತು ಹಝ್ರತ್ ಖಲೀಫತುಲ್ ಮಸೀಹ್ ಅರ್–ರಾಬಿ ರಹ್ಮಹುಲ್ಲಾಹ್ ಅವರ ಪವಿತ್ರ ಕಾಲಘಟ್ಟಗಳ ಮಜ್ಲಿಸ್–ಎ–ಅರ್ಫಾನ್‌ಗಳೂ ಜಮಾಅತ್‌ನ ಪತ್ರಿಕೆಗಳು ಮತ್ತು ಪುಸ್ತಕಗಳಲ್ಲಿ ಪ್ರಕಟಗೊಂಡಿದ್ದು, ಇಂದು ಸಾಮಾಜಿಕ ಮಾಧ್ಯಮಗಳಲ್ಲಿಯೂ ಲಭ್ಯವಿವೆ.

ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಅಲ್–ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರ ಅನುಗ್ರಹದಾಯಕ ಯುಗದಲ್ಲಿ ಈ ಮಜ್ಲಿಸ್–ಎ–ಇರ್ಫಾನ್ ಪ್ರತಿ ವಾರ ಎಂ.ಟಿ.ಎ. ಯ ಕಾರ್ಯಕ್ರಮ "This Week With Huzur Anwar" ಎಂಬ ಹೆಸರಿನಲ್ಲಿ ಪ್ರಸಾರವಾಗುತ್ತಿದೆ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿಯೂ ಲಭ್ಯವಿದೆ.

ಪ್ರತಿಯೊಂದು ಯುಗದಲ್ಲಿಯೂ ಮಜ್ಲಿಸ್–ಎ–ಇರ್ಫಾನ್ ಜಮಾಅತ್ ಸದಸ್ಯರಿಗೆ: ತರಬಿಯತ್ (ಆಧ್ಯಾತ್ಮಿಕ ಶಿಕ್ಷಣ), ತಬ್ಲೀಗ್ (ಇಸ್ಲಾಮಿನ ಸಂದೇಶ ತಲುಪಿಸುವುದು), ಧಾರ್ಮಿಕ ಜ್ಞಾನ, ಆಡಳಿತಾತ್ಮಕ ಮಾರ್ಗದರ್ಶನ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಬೆಳಕಿನ ದೀಪದಂತೆ ಮಾರ್ಗದರ್ಶನ ನೀಡುತ್ತ ಬಂದಿದೆ.

ಕೆಲವೊಮ್ಮೆ ರಾಜಕೀಯ, ಸಾಮಾಜಿಕ ಅಥವಾ ಶೈಕ್ಷಣಿಕ ಕ್ಷೇತ್ರಗಳ ಗಣ್ಯ ವ್ಯಕ್ತಿಗಳೂ ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಭೇಟಿಯಾಗುತ್ತಾರೆ. ಅವರ ದೇಶಗಳ ಪರಿಸ್ಥಿತಿ, ಅವರ ಜ್ಞಾನ ಕ್ಷೇತ್ರಗಳು ಮತ್ತು ವಿಶ್ವದಲ್ಲಿ ಹರಡಿರುವ ಅಶಾಂತಿಯನ್ನು ನಿವಾರಿಸುವ ಮಾರ್ಗಗಳ ಕುರಿತು ಹುಝೂರ್ ಅನ್ವರ್(ಅತಬಿಅ) ಅವರು ಅಮೂಲ್ಯ ಮಾರ್ಗದರ್ಶನ ನೀಡುತ್ತಾರೆ. ಆದ್ದರಿಂದ ಈ ಅಂತರರಾಷ್ಟ್ರೀಯ ಕಾರ್ಯಕ್ರಮವನ್ನು ಕೇಳುವ ಪ್ರತಿಯೊಬ್ಬರಿಗೂ ಇದು ಒಂದು ಉಪಯುಕ್ತ ಮಾರ್ಗದರ್ಶಕವಾಗಿದೆ.

ಬದರ್ ಪತ್ರಿಕೆಯ ಓದುಗರಿಗಾಗಿ ಈ ಕಾರ್ಯಕ್ರಮದ ಆಸಕ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ, 2 ಜನವರಿ 2026ರಂದು ಅಮೆರಿಕಾದ ವರ್ಜೀನಿಯಾದ ಖುದಾಮ್‌ಗಳೊಂದಿಗೆ ನಡೆದ ಹುಝೂರ್ ಅನ್ವರ್(ಅತಬಿಅ) ಅವರ ಭೇಟಿಯ ಕೆಲವು ಭಾಗಗಳನ್ನು ಇಲ್ಲಿ ನೀಡಲಾಗಿದೆ.

ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಹೀಗೆ ಕೇಳಲಾಯಿತು:

ಲೌಕಿಕ ಶಿಕ್ಷಣದ ಜೊತೆಗೆ ಜಮಾಅತ್‌ನ ಪುಸ್ತಕಗಳನ್ನು ಹೇಗೆ ಅಧ್ಯಯನ ಮಾಡಬಹುದು?

ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು:

ಒಂದು ದಿನದಲ್ಲಿ 24 ಗಂಟೆಗಳಿವೆ. ಒಬ್ಬ ವ್ಯಕ್ತಿ 6 ಗಂಟೆ ನಿದ್ರೆ ಮಾಡಿದರೂ, 2 ಗಂಟೆ ಊಟಕ್ಕೆ, 2 ಗಂಟೆ ನಮಾಝ್‌ಗಳಿಗೆ, 7 ಗಂಟೆ ವಿಶ್ವವಿದ್ಯಾಲಯದ ಶಿಕ್ಷಣಕ್ಕೆ ಮತ್ತು ಮನೆಗೆ ಬಂದ ನಂತರ 2–3 ಗಂಟೆ ಓದಿಗೆ ಬಳಸಿದರೂ, ಉಳಿದ ಸಮಯದಲ್ಲಿ ಕನಿಷ್ಠ ಅರ್ಧ ಗಂಟೆಯನ್ನು ಅಧ್ಯಯನಕ್ಕಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲವೇ? ನೀವು ಬಯಸಿದರೆ ಸಮಯವನ್ನು ಕಂಡುಕೊಳ್ಳಬಹುದು. "ನಾನು ದಣಿದಿದ್ದೇನೆ" ಎಂದು ಹೇಳಿದರೆ, ಲೋಕವೇ ನಿಮ್ಮ ಮೊದಲ ಆದ್ಯತೆಯಾಗಿದೆ ಎಂದರ್ಥ. ಆದ್ದರಿಂದ ನಿಮ್ಮ ಜೀವನವನ್ನು ಸರಿಯಾದ ರೀತಿಯಲ್ಲಿ ನಿಯಂತ್ರಿಸಿಕೊಳ್ಳಿ. ಅಧ್ಯಯನಕ್ಕಾಗಿ ಅರ್ಧ ಗಂಟೆಯಾದರೂ ಮೀಸಲಿಡಿ. ಆಸಕ್ತಿ ಹೆಚ್ಚಾದಂತೆ ಸಮಯವೂ ಹೆಚ್ಚಾಗುತ್ತದೆ.

ಎರಡನೇ ಪ್ರಶ್ನೆ: ನಾನು ಮುಕರ್ರಮ್ ಮುಲಾನಾ ಅತಾ ಉಲ್ಲಾಹ್ ಕಲೀಮ್ ಸಾಹಿಬ್ ಅವರ ಮೊಮ್ಮಗನಾಗಿದ್ದೇನೆ. ಅವರ ಬಗ್ಗೆ ಹುಝೂರ್ ಅನ್ವರ್(ಅತಬಿಅ) ಅವರಿಗೆ ಯಾವುದಾದರೂ ನೆನಪುಗಳಿವೆಯೇ?

ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು:

ನಾನು ಅವರೊಂದಿಗೆ ನೇರವಾಗಿ ಕೆಲಸ ಮಾಡಿಲ್ಲ. ಆದರೆ ನಾನು ಕಂಡದ್ದು ಮತ್ತು ಕೇಳಿದ ಪ್ರಕಾರ ಅವರು ಅತ್ಯಂತ ನಿಸ್ವಾರ್ಥ ವಕ್ಫ್–ಎ–ಝಿಂದಗಿ ಸೇವಕರಾಗಿದ್ದರು. ಅವರು ಪ್ರತಿದಿನ ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು ಮತ್ತು ಜಮಾಅತ್‌ಗಾಗಿ ದುವಾ ಮಾಡುತ್ತಿದ್ದರು. ನೀವು ಸಹ ದುವಾ ಮಾಡಿರಿ: "ಅಲ್ಲಾಹ್ ತಆಲಾ ನನಗೂ ಉತ್ತಮ ವ್ಯಕ್ತಿಯಾಗುವ ತೌಫೀಕ್ ನೀಡಲಿ." ಘಾನಾದಲ್ಲಿ ಅವರು ಸೇವೆ ಸಲ್ಲಿಸಿದ ದಿನಗಳಲ್ಲಿ ಪರಿಸ್ಥಿತಿಗಳು ಸುಲಭವಾಗಿರಲಿಲ್ಲ. ಆದರೆ ಅವರು ಎಂದಿಗೂ ದೂರು ನೀಡಲಿಲ್ಲ. ಯಾವಾಗಲೂ ನಗುಮುಖದಿಂದ ಮಾತನಾಡುತ್ತಿದ್ದರು. ಇದೇ ಕಾರಣದಿಂದ ಅವರು ಇಂದು ಈ ಸ್ಥಾನದಲ್ಲಿದ್ದಾರೆ. ಆದ್ದರಿಂದ ಅಲ್ಲಾಹ್ ತಆಲಾ ಮೇಲೆ ತವಕ್ಕುಲ್, ನಮಾಝ್ ಮತ್ತು ದುವಾ ಅತ್ಯಂತ ಅಗತ್ಯ.

ಪ್ರಶ್ನೆ: ನಾನು ಪ್ರಾದೇಶಿಕ ನಾಝಿಮ್ ವಖಾರೆ ಅಮಲ್ ಆಗಿ ಸೇವೆ ಮಾಡುತ್ತಿದ್ದೇನೆ. ಕೆಲವು ಖುದಾಮ್‌ಗಳು ಶ್ರಮದ ಕೆಲಸಗಳನ್ನು ಮಾಡಲು ಅಥವಾ ಕೈಗಳು ಮಲಿನವಾಗುವ ಕೆಲಸಗಳನ್ನು ಮಾಡಲು ಹಿಂಜರಿಯುತ್ತಾರೆ. ಅವರಲ್ಲಿ ವಖಾರೆ ಅಮಲ್‌ನ ಆತ್ಮವನ್ನು ಹೇಗೆ ಬೆಳೆಸಬಹುದು?

ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು:

ವಖಾರೆ ಅಮಲ್ ಅನ್ನು ಇಂಗ್ಲಿಷ್‌ನಲ್ಲಿ Dignity of Labour ಎಂದು ಕರೆಯುತ್ತಾರೆ.

ಅವರಿಗೆ ತಿಳಿಸಿ: "ಇದರಲ್ಲಿ ನಿಮ್ಮ ಗೌರವವಿದೆ." ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರ ಉದಾಹರಣೆಯನ್ನು ಅವರ ಮುಂದೆ ಇಡಿ. ಅಹ್ಝಾಬ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್ ಸ್ವತಃ ಮಣ್ಣು ಅಗೆಯುತ್ತಿದ್ದರು ಮತ್ತು ಅವರ ದೇಹದ ಮೇಲೂ ಮಣ್ಣು ಬಿದ್ದಿತ್ತು. ಆದ್ದರಿಂದ ಅವರಿಗೆ ತಿಳಿಸಿ: ಈ ಕೆಲಸದಿಂದ ಸವಾಬ್ ದೊರೆಯುತ್ತದೆ ಮತ್ತು ಆರೋಗ್ಯವೂ ಉತ್ತಮವಾಗುತ್ತದೆ.

ಪ್ರಶ್ನೆ: ನಾನು ಭವಿಷ್ಯದಲ್ಲಿ ವೈದ್ಯನಾಗಲು ಬಯಸುತ್ತೇನೆ. ಶಿಕ್ಷಣ ಹಾಗೂ ವೃತ್ತಿಜೀವನದಲ್ಲಿ ಯಶಸ್ಸಿನೊಂದಿಗೆ ಧರ್ಮ ಮತ್ತು ಸರ್ವಶಕ್ತನಾದ ಅಲ್ಲಾಹನೊಂದಿಗೆ ಗಾಢವಾದ ಸಂಬಂಧವನ್ನು ಹೇಗೆ ಕಾಪಾಡಿಕೊಳ್ಳಬಹುದು?

ಹುಝೂರ್ ಅನ್ವರ್(ಅತಬಿಅ) ಅವರು ಉತ್ತರಿಸುತ್ತಾ ಹೀಗೆ ಹೇಳಿದರು:

ಜಮಾಅತ್‌ನಲ್ಲಿ ಅನೇಕ ಅಹ್ಮದಿ ವೈದ್ಯರು ಇದ್ದಾರೆ. ಅವರು ತಮ್ಮ ವೃತ್ತಿಯಲ್ಲಿ ಯಶಸ್ವಿಗಳಾಗಿರುವುದರ ಜೊತೆಗೆ, ನಮಾಝ್ ಪಾಲಿಸುವವರು, ತಹಜ್ಜುದ್ ನಮಾಝ್‌ನ್ನು ನಿರ್ವಗಹಿಸುವವರು ಹಾಗೂ ಅಲ್ಲಾಹ್ ತಆಲಾ ಅವರೊಂದಿಗೆ ದೃಢವಾದ ಸಂಬಂಧ ಹೊಂದಿರುವವರೂ ಆಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಲ್ಲಿ ಡಾ. ಅಬ್ದುಸ್ಸತ್ತಾರ್ ಶಾಹ್ ಸಾಹಿಬ್ ಒಬ್ಬ ವೈದ್ಯರಾಗಿದ್ದರು. ಅವರು ಆಸ್ಪತ್ರೆಯಲ್ಲಿ ತಮ್ಮ ವೃತ್ತಿಪರ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರೂ, ಅದೇ ಸಮಯದಲ್ಲಿ ಇಸ್ಲಾಮಿನ ಸಂದೇಶವನ್ನು ಜನರಿಗೆ ತಲುಪಿಸುವ ತಬ್ಲೀಗ್ ಸೇವೆಯನ್ನೂ ಅತ್ಯಂತ ನಿಷ್ಠೆಯಿಂದ ಮಾಡುತ್ತಿದ್ದರು. ಅವರು ಹಝ್ರತ್ ಖಲೀಫತುಲ್ ಮಸೀಹ್ ಅರ್–ರಾಬಿ ರಹ್ಮಹುಲ್ಲಾಹ್ ಅವರ ತಾಯಿಯ ತಂದೆಯವರಾಗಿದ್ದರು. ಒಮ್ಮೆ ಅವರು ಮಸೀದಿಯಲ್ಲಿ ತಬ್ಲೀಗ್ ಮಾಡುತ್ತಿದ್ದಾಗ, ಒಬ್ಬ ವಿರೋಧಿ ವ್ಯಕ್ತಿ ಮಣ್ಣಿನ ಲೋಟವನ್ನು ಎಸೆದು ಅವರ ತಲೆಗೆ ಗಾಯಪಡಿಸಿದನು. ಅವರು ತಕ್ಷಣ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದು ಹಿಂದಿರುಗಿದರು. ಅವರ ಮೇಲೆ ದಾಳಿ ಮಾಡಿದ ವ್ಯಕ್ತಿ ನಂತರ ತುಂಬಾ ಭಯಗೊಂಡು ಕ್ಷಮೆ ಕೇಳಲು ಬಂದನು. ಆಗ ಡಾ. ಸಾಹಿಬ್ ಅತ್ಯಂತ ಸೌಮ್ಯತೆಯಿಂದ ಹೇಳಿದರು: ನಾನು ನಿನ್ನನ್ನು ಕ್ಷಮಿಸಿದ್ದೇನೆ. ಈಗ ನನ್ನ ಮಾತನ್ನು ಶಾಂತಿಯಿಂದ ಕೇಳು. ಅವರ ಕ್ಷಮಾಶೀಲತೆ, ಉದಾರತೆ ಮತ್ತು ಉತ್ತಮ ನಡತೆಯಿಂದ ಆ ವ್ಯಕ್ತಿ ಎಷ್ಟೋ ಪ್ರಭಾವಿತನಾದನು; ಕೊನೆಯಲ್ಲಿ ಅವನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೈಅತ್ ಮಾಡಿ ಜಮಾಅತ್ ಅಹ್ಮದೀಯಾಕ್ಕೆ ಸೇರಿಕೊಂಡನು. ನೀವು ವೈದ್ಯರಾದ ನಂತರ ನಿಮ್ಮ ರೋಗಿಗಳೊಂದಿಗೆ ಉತ್ತಮ ನೈತಿಕತೆ, ಕರುಣೆ ಮತ್ತು ಸಹಾನುಭೂತಿಯಿಂದ ವರ್ತಿಸಿ. ನಿಮ್ಮ ಉನ್ನತ ಚರಿತ್ರೆಯೇ ಅತ್ಯುತ್ತಮ ತಬ್ಲೀಗ್ ಆಗುತ್ತದೆ."

ಹುಝೂರ್ ಅನ್ವರ್(ಅತಬಿಅ) ಅವರು ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಾಹಾಬಿಗಳಲ್ಲಿ ಒಬ್ಬರಾದ ಹಝ್ರತ್ ಖಲೀಫಾ ರಶೀದುದ್ದೀನ್ ಸಾಹಿಬ್ ರಝಿಯಲ್ಲಾಹು ಅನ್‌ಹು ಅವರ ಉದಾಹರಣೆಯನ್ನು ನೀಡಿದರು. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಅವರು ಸಿವಿಲ್ ಸರ್ಜನ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಜಮಾಅತ್‌ಗಾಗಿ ಅವರು ಅಪಾರ ಆರ್ಥಿಕ ತ್ಯಾಗ ಮಾಡುತ್ತಿದ್ದರು. ಅವರ ತ್ಯಾಗ ಎಷ್ಟೋ ಹೆಚ್ಚಾಗಿದ್ದರಿಂದ, ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಪ್ರೀತಿಯಿಂದ ಹೀಗೆ ಹೇಳಿದರು: ಸ್ವಲ್ಪ ನಿಮ್ಮ ಅಗತ್ಯಗಳನ್ನೂ ಗಮನಿಸಿ. ನೀವು ಈಗಾಗಲೇ ಅಷ್ಟೊಂದು ಆರ್ಥಿಕ ತ್ಯಾಗ ಮಾಡಿದ್ದೀರಿ; ಇನ್ನು ಮುಂದೆ ಕೊಡದಿದ್ದರೂ ಯಾವುದೇ ಕೊರತೆ ಉಂಟಾಗುವುದಿಲ್ಲ.

ಅದೇ ಈತಿ ಹಝ್ರತ್ ಖಲೀಫತುಲ್ ಮಸೀಹ್ ಅಲ್–ಅವ್ವಲ್,

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*



# ಖುತ್‌ಬ ಜುಮುಅ

## ಜಲ್ಸಾ ಸಾಲಾನಾಗೆ ಆಗಮಿಸಿದ ಗೌರವಾನ್ವಿತ ಅತಿಥಿಗಳ ಅನಿಸಿಕೆಗಳು ಹಾಗೂ ಸೇವೆ ಸಲ್ಲಿಸಿದವರಿಗೆ ಕೃತಜ್ಞತಾ ನುಡಿಗಳು

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **31-07-2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಲ್ಲಾಹನ ಕೃಪೆಯಿಂದ ಕಳೆದ ಭಾನುವಾರದಂದು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟನಿನ ಮೂರು ದಿನಗಳ ಜಲ್ಸ ಸಾಲಾನ ಅಲ್ಲಾಹನ ಅನುಗ್ರಹಗಳನ್ನು ಗಳಿಸುತ್ತಾ ಮುಕ್ತಾಯಗೊಂಡಿತು. ಜಲ್ಸದ ಸಿದ್ಧತೆಗಾಗಿ ತಿಂಗಳುಗಳೇ ಬೇಕಾಗುತ್ತವೆ, ವಾಸ್ತವದಲ್ಲಿ, ಹಿಂದಿನ ವರ್ಷದ ಜಲ್ಸ ಮುಗಿದ ತಕ್ಷಣವೇ ಮುಂದಿನ ಜಲ್ಸದ ಸಿದ್ಧತೆ ಪ್ರಾರಂಭವಾಗುತ್ತದೆ. ಜಲ್ಸಗೆ ಕೆಲವು ವಾರಗಳಿರುವಾಗ ಅದರ ಸಿದ್ಧತೆಗಳು ವೇಗವಾಗಲು ಪ್ರಾರಂಭವಾಗುತ್ತದೆ ಮತ್ತು ಒಂದೆರಡು ವಾರಗಳು ಇರುವಾಗಲಂತೂ ಇದು ತೀವ್ರಗೊಳ್ಳುತ್ತದೆ. ಜಲ್ಸದ ದಿನಗಳಲ್ಲಿ ಸಾವಿರಾರು ಸ್ವಯಂಸೇವಕರು, ಪುರುಷರು-ಮಹಿಳೆಯರು, ವಯಸ್ಕರು-ಯುವಕರು, ತಮ್ಮೆಲ್ಲ ಸಾಮರ್ಥ್ಯಗಳೊಂದಿಗೆ ಮತ್ತು ನಿಷ್ಠೆಯಿಂದ ಸದಾ ಸೇವೆಯಲ್ಲಿ ನಿರತರಾಗಿರುತ್ತಾರೆ. ಇವರು ಅಹ್ಮದಿ ಅತಿಥಿಗಳಿಗೆ ಮಾತ್ರವಲ್ಲ, ಜಗತ್ತಿನ ವಿವಿಧ ಮೂಲೆಗಳಿಂದ ಬಂದಿರುವ ಅಹ್ಮದಿಯೇತರ ಮತ್ತು ಮುಸ್ಲಿಮೇತರ ಅತಿಥಿಗಳ ಅಗತ್ಯಗಳನ್ನು ಪೂರೈಸುವ ಮೂಲಕ ಇಸ್ಲಾಮಿನ ನೈಜ ಚಿತ್ರಣವನ್ನು ಪ್ರಸ್ತುತಪಡಿಸುತ್ತಾ ಮೌನವಾಗಿ ಧರ್ಮಪ್ರಚಾರವನ್ನು ಮಾಡುತ್ತಿರುತ್ತಾರೆ.

ಹಾಗಾಗಿ ಈ ದೃಷ್ಟಿಯಿಂದ, ಜಲ್ಸದ ಯಾವುದೇ ವಿಭಾಗದಲ್ಲಿ ಸೇವೆ ಸಲ್ಲಿಸಿದ ಎಲ್ಲ ಕಾರ್ಯಕರ್ತರೂ ಕೃತಜ್ಞತೆಗೆ ಅರ್ಹರಾಗಿದ್ದಾರೆ. ಅಲ್ಲಾಹನು ಅವರಿಗೆ ಈ ಸೇವೆಗಾಗಿ ಅತ್ಯುತ್ತಮ ಪ್ರತಿಫಲ ನೀಡಲಿ. ಅದೇ ರೀತಿ ಜಲ್ಸದಲ್ಲಿ ನೇರವಾಗಿ ಸೇವೆ ಸಲ್ಲಿಸಿದ ಕಾರ್ಯಕರ್ತರ ಹೊರತಾಗಿ, ಎಂ.ಟಿ.ಎ. ಕಾರ್ಯಕರ್ತರಿದ್ದಾರೆ, ಅವರಲ್ಲಿ ಹೆಚ್ಚಿನವರು ಸ್ವಯಂಸೇವಕರಾಗಿದ್ದಾರೆ. ಇವರು ಸಹ ಕೃತಜ್ಞತೆಗೆ ಅರ್ಹರಾಗಿದ್ದಾರೆ, ಏಕೆಂದರೆ ಇವರು ಜಲ್ಸದ ಕಾರ್ಯಕ್ರಮಗಳನ್ನು ವಿಶ್ವದ ಮೂಲೆಮೂಲೆಗೆ ಅತ್ಯುತ್ತಮ ರೀತಿಯಲ್ಲಿ ತಲುಪಿಸಲು ಶ್ರಮಿಸಿದ್ದಾರೆ. ಇದು ಸಹ ಧರ್ಮಪ್ರಚಾರದ ಒಂದು ದೊಡ್ಡ ಮಾಧ್ಯಮವಾಗಿದೆ.

ಅದೇ ರೀತಿ ಪತ್ರಿಕಾ ಮತ್ತು ಮಾಧ್ಯಮದ ತಂಡವಿದೆ, ಕೇಂದ್ರ ಮಾಧ್ಯಮ ವಿಭಾಗ ಮತ್ತು ಯು.ಕೆ. ಪತ್ರಿಕಾ ವಿಭಾಗವೂ ಸೇರಿದೆ, ಇವರು ಸುದ್ದಿಗಳನ್ನು ಕೋಟ್ಯಂತರ ಜನರಿಗೆ ತಲುಪಿಸುವಲ್ಲಿ ತಮ್ಮ ಪಾತ್ರವನ್ನು ವಹಿಸಿದ್ದಾರೆ. ಇದರಲ್ಲಿ ಮಹಿಳೆಯರು ಮತ್ತು ಪುರುಷರು ಸೇರಿದ್ದಾರೆ. ಪ್ರತಿ ವರ್ಷದಂತೆ, ಈ ವರ್ಷವೂ ಕಾರ್ಯಕರ್ತರಿಗೆ ಸಹಾಯ ಮಾಡಲು ಖುದ್ದಾಮುಲ್ ಅಹ್ಮದಿಯಾ ಕೆನಡಾದ ಅನೇಕ ಸ್ವಯಂಸೇವಕರು ಬಂದಿದ್ದರು, ಅವರು ಜಲ್ಸದ ನಂತರ ವೈಂಡ್ ಅಪ್ ಕಾರ್ಯದಲ್ಲಿ ಸೇವೆ ಸಲ್ಲಿಸಿದರು. ಈಗ ಆಸ್ಟ್ರೇಲಿಯಾದವರೂ ಬರಲು ಪ್ರಾರಂಭಿಸಿದ್ದಾರೆ; ಇವರೆಲ್ಲರೂ ಅತ್ಯಂತ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಇವರೆಲ್ಲರೂ ಕೃತಜ್ಞತೆಗೆ ಅರ್ಹರಾಗಿದ್ದಾರೆ. ಅಲ್ಲಾಹನು ಅವರಿಗೂ ಉತ್ತಮ ಪ್ರತಿಫಲವನ್ನು ಕರುಣಿಸಲಿ.

ಏನೇ ಆಗಲಿ, ಕಾರ್ಯಕರ್ತರ ಸೇವೆಯು ಇತರರ ಮೇಲೆ ಬೀರುವ ಪ್ರಭಾವವು ಜಮಾಅತ್ ಮತ್ತು ಇಸ್ಲಾಮಿನ ನೈಜ ಚಿತ್ರಣವನ್ನು ಅವರ ಮುಂದೆ ಪ್ರಸ್ತುತಪಡಿಸುತ್ತದೆ ಮತ್ತು ಅದರಿಂದ ಅವರು ಅತ್ಯಂತ ಪ್ರಭಾವಿತರಾಗುತ್ತಾರೆ. ಅಸಂಖ್ಯಾತ ಅಭಿಪ್ರಾಯಗಳನ್ನು ಅವರು ಬರೆದು ಕಳುಹಿಸುತ್ತಾರೆ ಮತ್ತು ಕೃತಜ್ಞತೆಯನ್ನೂ ಸಲ್ಲಿಸುತ್ತಾರೆ. ಆ ಅಭಿಪ್ರಾಯಗಳಲ್ಲಿ ಕೆಲವನ್ನು ನಾನೀಗ ಪ್ರಸ್ತುತಪಡಿಸುತ್ತೇನೆ, ಕೆಲವೊಂದು ಪ್ರಸ್ತುತಪಡಿಸಲು ಸಾಧ್ಯವಾಗದಿರಬಹುದು, ಆದರೆ ಕೆಲವನ್ನು ಖಂಡಿತವಾಗಿಯೂ ಮಂಡಿಸುತ್ತೇನೆ. ಅದೇ ರೀತಿ, ಎಲ್ಲ ಕಾರ್ಯಕರ್ತರು ಮತ್ತು ಕಾರ್ಯಕರ್ತೆಯರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ, ಅವರು ನಿಸ್ವಾರ್ಥವಾಗಿ ಸೇವೆ ಸಲ್ಲಿಸಿದ್ದಾರೆ. ಆದರೆ ಇದರೊಂದಿಗೆ, ಹಝ್ರತ್ ಮಸೀಹ್ ಮೌಊದ್(ಅ)ರ ಅತಿಥಿಗಳ ಸೇವೆ ಮಾಡಲು ಅಲ್ಲಾಹನು ಅವರೆಲ್ಲರಿಗೂ ಸೌಭಾಗ್ಯ ಕರುಣಿಸಿದ್ದಾನೆ ಎಂಬ ಕಾರಣಕ್ಕಾಗಿ ಅವರು ಸಹ ಅಲ್ಲಾಹನಿಗೆ ಕೃತಜ್ಞರಾಗಿರಬೇಕು ಎಂಬುದನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು. ಜನರ ಕೃತಜ್ಞತೆಯ ಮಾತುಗಳನ್ನು ಕೇಳಿ ನೀವು ಇನ್ನಷ್ಟು ಅಲ್ಲಾಹನ ಮುಂದೆ ತಲೆಬಾಗಬೇಕು, ಇನ್ನಷ್ಟು ವಿನಮ್ರರಾಗಬೇಕು ಮತ್ತು ಅವನಿಗೆ ಕೃತಜ್ಞರಾಗಿರಬೇಕು. ಅಲ್ಲಾಹನು ನಿಮಗೆ ಇದರ ಸೌಭಾಗ್ಯವನ್ನು ದಯಪಾಲಿಸಲಿ.

ನಾನು ಹೇಳಿದಂತೆ, ಅಭಿಪ್ರಾಯಗಳನ್ನು ಪ್ರಸ್ತುತಪಡಿಸುತ್ತೇನೆ. ಮೊದಲನೆಯದಾಗಿ, ಗ್ಯಾಂಬಿಯಾದ ಸಂವಹನ ಮತ್ತು ಡಿಜಿಟಲ್ ಆರ್ಥಿಕತೆಯ ಸಚಿವರಾದ ಲಮಿನ್ ಜಾಬಿ ಸಾಹಿಬ್‌ರ ಅಭಿಪ್ರಾಯವಿದೆ. ಅವರು ಹೇಳುತ್ತಾರೆ: 'ಜಲ್ಸ ಸಾಲಾನದ ಆಳವಾದ ವಾಸ್ತವವನ್ನು ಕಂಡು ನಾನು ಬೆರಗಾದೆ. ಇದು ನಿಸ್ವಾರ್ಥ ಸೇವೆ ಮತ್ತು ಮೌನ, ದೃಢವಾದ ತ್ಯಾಗದ ತಳಹದಿಯ ಮೇಲೆ ನಿಂತಿರುವ ಒಂದು ಭವ್ಯವಾದ ಜಾಗತಿಕ ಸಮ್ಮೇಳನವಾಗಿದೆ. ಖಾದಿಯಾನ್‌ನಲ್ಲಿ ಕೇವಲ 75 ಜನರಿಂದ ಪ್ರಾರಂಭವಾದ ಈ ಭವ್ಯ ಸಮ್ಮೇಳನವು ಇಂದು ಆಡಳಿತಾತ್ಮಕವಾಗಿ ಒಂದು ಅದ್ಭುತ ಮೇರುಕೃತಿಯಾಗಿ ರೂಪುಗೊಂಡಿದೆ ಎಂದು ತಿಳಿಯಲು ಹೃದಯವು ಆಳವಾಗಿ ಪ್ರಭಾವಿತವಾಗುತ್ತದೆ. ಉಪಗ್ರಹದ ಮೂಲಕ ಇದನ್ನು ವಿಶ್ವದ ಇನ್ನೂರು ದೇಶಗಳಿಗೆ ಪ್ರಸಾರ ಮಾಡಲಾಗುತ್ತದೆ, ಇದರ ವ್ಯವಸ್ಥೆಗಾಗಿ ಯಾವುದೇ ಪೊಲೀಸರ ಅಗತ್ಯವಿಲ್ಲ ಎಂಬುದು ನನಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಯಾವುದೇ ಭೌತಿಕ ಆಮಿಷವಿಲ್ಲ. ಕಾರ್ಪೊರೇಟ್ ಅಧಿಕಾರಿಗಳು, ವೈದ್ಯರು, ಯುವಕರು ತಮ್ಮ ಲೌಕಿಕ ಹುದ್ದೆಗಳನ್ನು ಬದಿಗಿಟ್ಟು ಸ್ವಯಂಪ್ರೇರಿತರಾಗಿ ನೆಲವನ್ನು ಸ್ವಚ್ಛಗೊಳಿಸುತ್ತಿದ್ದರು, ಬೆಂಕಿಯ ಮೇಲೆ ಅಡುಗೆ ಮಾಡುತ್ತಿದ್ದರು, ಟ್ರಾಫಿಕ್ ನಿಯಂತ್ರಿಸುತ್ತಿದ್ದರು. ನಮಾಝ್‌ಗೆ ಅಝಾನ್ ಆದಾಗ, ವಿವಿಧ ಸಮುದಾಯದವರಾದ ಈ ಉತ್ಸಾಹಭರಿತ ಜನಸಮೂಹವು ತಕ್ಷಣವೇ ಸಂಪೂರ್ಣ ಮೌನವಾಯಿತು, ಸೂಜಿ ಬಿದ್ದರೂ ಸದ್ದು ಕೇಳಿಸುವಷ್ಟರ ಮಟ್ಟಿಗೆ ನಿಶ್ಶಬ್ದವಾಯಿತು. ಈ ದೃಶ್ಯವು ನನಗೆ ಸಾಮೂಹಿಕ ಶಿಸ್ತು ಮತ್ತು ಆಧ್ಯಾತ್ಮಿಕ ಬದ್ಧತೆಯ ಜೀವಂತ ಅನುಭವವನ್ನು ನೀಡಿತು, ಇದು ಇಂದಿನ ಭೌತಿಕ ಜಗತ್ತಿನಲ್ಲಿ ವಾಸ್ತವಿಕವಾಗಿ ಇಲ್ಲವಾಗಿದೆ'. ಅವರು ಹೇಳುತ್ತಾರೆ: 'ಜಾಗತಿಕ ಬೈಅತ್‌ನಲ್ಲಿ ಭಾಗವಹಿಸುವುದು, ಕಣ್ಣೀರು ತುಂಬಿದ ಮಾನವ ಸರಪಳಿಯು ಸಾವಿರಾರು ಜನರನ್ನು ತಮ್ಮ ಇಮಾಮ್‌ನೊಂದಿಗೆ ಸಂಪರ್ಕಿಸುತ್ತದೆ, ಈ ವಿಶಿಷ್ಟ ಸಂಬಂಧವು ನನಗೆ ನಂಬಲಸಾಧ್ಯವಾಗಿತ್ತು. ಜಮಾಅತ್‌ನ ಈ ಅಪಾರ ಜಾಗತಿಕ ಪ್ರಭಾವವು ಯಾವುದೇ ಭೌತಿಕ ಸಂಪತ್ತು ಅಥವಾ ರಾಜಕೀಯ ಮಹತ್ವಾಕಾಂಕ್ಷೆಯ ಫಲಿತಾಂಶವಲ್ಲ, ಬದಲಾಗಿ ಪರಿಪೂರ್ಣ ದೇವಭಯ (ತಖ್ವ) ಮತ್ತು ಶಾಂತಿಯ ನೈಜ ಪ್ರಾಯೋಗಿಕ ಸಂದೇಶದ ಬದ್ಧತೆಯ ಫಲವಾಗಿದೆ ಎಂಬುದು ನನ್ನ ಅನಿಸಿಕೆಯಾಗಿದೆ'.

ನೈಜೀರಿಯಾದಿಂದ ಒಂದು ರಾಜ್ಯದ ರಾಜರೊಬ್ಬರು ಬಂದಿದ್ದರು, ಸುಮಾರು ಅರ್ಧದಷ್ಟು ರಾಜ್ಯ ಅವರ ಆಡಳಿತದ ಅಡಿಯಲ್ಲಿದೆ, ಅವರ ಹೆಸರು ಕೋಬಾ ಕಹಂದೆ ವೋಲೆ ಬಾಡೆ ವೋಲೆ. ಅವರು ಹೇಳುತ್ತಾರೆ: 'ನಾನು ಯು.ಕೆ.ಯ ಜಲ್ಸ ಸಾಲಾನಾಗೆ ಹೊರಟಾಗ, ನನ್ನ ಜೀವನದ ಮೇಲೆ ಇಷ್ಟೊಂದು ಆಳವಾದ ಪ್ರಭಾವ ಬೀರುವ ಇಂತಹ ಭವ್ಯವಾದ, ವ್ಯವಸ್ಥಿತ ಮತ್ತು ಆಧ್ಯಾತ್ಮಿಕ ಸಮ್ಮೇಳನದ ಭಾಗವಾಗಲಿದ್ದೇನೆ ಎಂದು ನಾನು ಊಹಿಸಿರಲಿಲ್ಲ. ಇಲ್ಲಿಗೆ ತಲುಪಿದಾಗ ನಾನು ಅಸಾಧಾರಣ ಶಿಸ್ತು, ಸಹೋದರತ್ವ ಮತ್ತು ಮಾನವ ಸೇವೆಯ ಪ್ರಾಯೋಗಿಕ ಮಾದರಿಯನ್ನು ನೋಡಿದ್ದಲ್ಲದೆ, ಲೋಕದ ವಿವಿಧ ದೇಶಗಳು ಮತ್ತು ಸಮುದಾಯಗಳಿಗೆ ಸೇರಿದ ಜನರು ಪ್ರೀತಿ, ಗೌರವ ಮತ್ತು ಸಹೋದರತ್ವದ ಬಾಂಧವ್ಯದಲ್ಲಿ ಬಂಧಿತರಾಗಿರುವುದನ್ನು ಕಂಡೆ. ನಮಗೆ ಅತ್ಯಂತ ಪ್ರಾಮಾಣಿಕವಾಗಿ ಆತಿಥ್ಯ ನೀಡಲಾಯಿತು, ಅದು ಸದಾ ನಮ್ಮ ನೆನಪಿನಲ್ಲಿರುತ್ತದೆ'. ಇಲ್ಲಿ ಕಲಿಯಲು ನನಗೆ ಬಹಳಷ್ಟು ಅವಕಾಶ ಸಿಕ್ಕಿತು, ಆದರೆ ಅತ್ಯಂತ ಸ್ಮರಣೀಯ ಕ್ಷಣವೆಂದರೆ ಜಮಾಅತಿನ ಇಮಾಮ್ ಅವರೊಂದಿಗಿನ ಭೇಟಿ ಮತ್ತು ಅವರ ಭಾಷಣಗಳಾಗಿದ್ದವು, ಅದನ್ನು ಕೇಳಿ ನಾನು ಬಹಳಷ್ಟು ಪಾಠಗಳನ್ನು ಕಲಿತೆ ಮತ್ತು ಅಹ್ಮದಿಯಾ ಜಮಾಅತಿನ ಜಾಗತಿಕ ಪ್ರಗತಿಯ ಕುರಿತಾದ ವರದಿಯನ್ನೂ ಕೇಳಿದೆ. ಇದು ಕೂಡ ಬಹಳ ಆಶ್ಚರ್ಯಕರವಾಗಿತ್ತು. ಅವರು ಹೇಳುತ್ತಾರೆ: 'ನಿಮ್ಮ 'ಐಲಿತಜ ಜಿಂಡಿ ಂಟಟ, ಊಚಿಣಡಿಜಜ ಜಿಂಡಿ ಓಿಟಿಜ' (ಪ್ರೀತಿ ಎಲ್ಲರೊಂದಿಗೂ, ದ್ವೇಷವಿಲ್ಲ ಯಾರೊಂದಿಗೂ) ಘೋಷಣೆಯು ಕೇವಲ ಒಂದು ಘೋಷಣೆಯಾಗಿರದೆ ಅಹ್ಮದಿಯಾ ಜಮಾಅತಿನ ಪ್ರಾಯೋಗಿಕ ಗುರುತಾಗಿದೆ. ಪ್ರಪಂಚವು ಈ ಪ್ರೀತಿ, ಸಹಿಷ್ಣುತೆ ಮತ್ತು ಮಾನವೀಯತೆಯ ಗೌರವದ ಮನೋಭಾವವನ್ನು ಅಳವಡಿಸಿಕೊಂಡರೆ, ನಿಸ್ಸಂದೇಹವಾಗಿ ಪ್ರಪಂಚವು ಶಾಂತಿಯ ತೊಟ್ಟಿಲಾಗಬಹುದು'. ಅವರು ಹೇಳುತ್ತಾರೆ: 'ವಿಶ್ವದ ವಿವಿಧ ಭಾಷೆಗಳಲ್ಲಿ

ಪ್ರಸಾರವಾಗುತ್ತಿದ್ದ ನೇರ ಕಾರ್ಯಕ್ರಮಗಳು ಕೂಡ ನನಗೆ ಬಹಳ ಆಶ್ಚರ್ಯವನ್ನು ಉಂಟುಮಾಡಿದವು'. ಅದೇ ರೀತಿ ಅವರ ಪತ್ನಿಯಾಗಿದ್ದ ರಾಜಕುಮಾರಿ ಕೂಡ ಇದೇ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ ಮತ್ತು ಹೇಳುತ್ತಾರೆ: 'ಮಹಿಳೆಯರಿಗಾಗಿ ಮಾಡಲಾದ ಮಾದರಿ ಏರ್ಪಾಡುಗಳು, ಅವರ ಗೌರವ, ಸ್ವಾತಂತ್ರ್ಯ ಮತ್ತು ಘನತೆಯುತ ವಾತಾವರಣವನ್ನು ನೋಡಿ ನನಗೆ ಅತ್ಯಂತ ಆಶ್ಚರ್ಯವಾಯಿತು. ಸಾವಿರಾರು ಮಹಿಳೆಯರು ಅತ್ಯಂತ ಘನತೆಯಿಂದ ವ್ಯವಸ್ಥಿತವಾಗಿ ಜಲ್ಸಗೆ ಬಂದು ಹೋಗುವುದನ್ನು ನೋಡಿ ಇಸ್ಲಾಮಿನ ಬಗೆಗಿನ ನನ್ನ ಅನೇಕ ಕಲ್ಪನೆಗಳು ಬದಲಾಗಿವೆ. ಅಹ್ಮದಿಯಾ ಜಮಾಅತ್ ಇಸ್ಲಾಮಿಕ ಬೋಧನೆಗಳ ಪ್ರಕಾರ ಮಹಿಳೆಯರ ಗೌರವ ಮತ್ತು ಅವರ ಹಕ್ಕುಗಳನ್ನು ಪ್ರಾಯೋಗಿಕ ರೂಪದಲ್ಲಿ ಪ್ರಸ್ತುತಪಡಿಸಿದೆ ಎಂದು ನಾನು ಭಾವಿಸುತ್ತೇನೆ'.

ಸೆನೆಗಲ್‌ನಿಂದ ಅತಿಥಿಯೊಬ್ಬರಿದ್ದರು, ಸೇಂಟ್ ಲೂಯಿಸ್‌ನ ಮಾಜಿ ಗವರ್ನರ್ ಅಲಿಯೂನ್ ಬದ್ರಾ ಸಾವ್ ಸಾಹಿಬ್. ಅವರು ಹೇಳುತ್ತಾರೆ: 'ನನ್ನನ್ನು ಅತ್ಯಂತ ಹೆಚ್ಚು ಪ್ರಭಾವಿಸಿದ್ದು ಅದರ ಅತ್ಯುತ್ತಮ ವ್ಯವಸ್ಥೆಯಾಗಿದೆ. ಭಾಗವಹಿಸುವವರ ದೊಡ್ಡ ಸಂಖ್ಯೆಯ ಹೊರತಾಗಿಯೂ, ಜಲ್ಸದ ಆಡಳಿತವು ಅತ್ಯಂತ ಅತ್ಯುತ್ತಮವಾಗಿ ಮಾಡಲಾಗಿದೆ ಎಂಬುದು ಸ್ಪಷ್ಟವಾಗಿತ್ತು. ಸಾರಿಗೆ ವ್ಯವಸ್ಥೆಯೂ ಉತ್ತಮವಾಗಿತ್ತು, ಸ್ವಯಂಸೇವಕರು ಸಭ್ಯರಾಗಿದ್ದರು, ಸದಾ ಲಭ್ಯವಿದ್ದರು' ಅವರು ಹೇಳುತ್ತಾರೆ 'ನಾನು ಎಲ್ಲ ಭಾಷಣಗಳನ್ನು ಗಮನವಿಟ್ಟು ಕೇಳಿದೆ'.

ಈಗ ಅನ್ಯರು ಭಾಷಣಗಳ ಸಮಯದಲ್ಲಿ ಕೇವಲ ಕುಳಿತಿರುವುದಿಲ್ಲ, ಬದಲಾಗಿ, 'ನಾವು ಗಮನವಿಟ್ಟು ಕೇಳಿದೆವು' ಎಂದು ಹೇಳುತ್ತಾರೆ. 'ವಿವಿಧ ಭಾಷೆಗಳ ವ್ಯವಸ್ಥೆ ಅತ್ಯುತ್ತಮವಾಗಿತ್ತು, ಇದರಿಂದಾಗಿ ನಮಗೆ ಎಲ್ಲ ಭಾಷಣಗಳು ಮತ್ತು ಸಂದೇಶಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಸಂಪೂರ್ಣ ಜಲ್ಸದ ಅವಧಿಯಲ್ಲಿ ಪದೇ ಪದೇ ಎದ್ದು ಕಂಡ ಸಂದೇಶವೆಂದರೆ ಪ್ರೀತಿ, ಶಾಂತಿ ಮತ್ತು ಸಹೋದರತ್ವದ ಸಂದೇಶವಾಗಿದೆ'.

ಅದೇ ರೀತಿ ರಾಡು ದುಟಾ ಸಾಹಿಬ್ ಲಕ್ಸೆಂಬರ್ಗ್‌ನಲ್ಲಿ ವಕೀಲರಾಗಿದ್ದಾರೆ. ಬ್ಯಾರಿಸ್ಟರ್ ಆಗಿದ್ದಾರೆ, ತಮ್ಮ ಮಗನೊಂದಿಗೆ ಮೊದಲ ಬಾರಿಗೆ ಪಾಲ್ಗೊಂಡಿದ್ದರು. ಅವರು ಹೇಳುತ್ತಾರೆ: 'ಜಲ್ಸದ ಮೂರು ದಿನಗಳು ನನ್ನ ಜೀವನದ ಅತಿ ಮುಖ್ಯವಾದ ಮೂರು ದಿನಗಳಾಗಿವೆ. ನನ್ನ ಜೀವನದಲ್ಲಿ ಮೊದಲ ಬಾರಿಗೆ ಇಷ್ಟೊಂದು ದೊಡ್ಡ, ವ್ಯವಸ್ಥಿತ ಇಸ್ಲಾಮಿಕ ಸಮ್ಮೇಳನವನ್ನು ನಾನು ನೋಡುತ್ತಿದ್ದೇನೆ. ಇಷ್ಟು ದೊಡ್ಡ ಸಂಖ್ಯೆಯ ಹೊರತಾಗಿಯೂ ಸಂಪೂರ್ಣ ವ್ಯವಸ್ಥೆಯು ಸ್ವಯಂಸೇವಕರ ಮೂಲಕ ಅತ್ಯಂತ ಉತ್ತಮ ರೀತಿಯಲ್ಲಿ ನಡೆಯುತ್ತಿತ್ತು. ವಿವಿಧ ದೇಶಗಳಿಂದ ಬಂದಿರುವ ಜನರು ಒಂದೇ ಕುಟುಂಬದ ಸದಸ್ಯರಂತೆ ನನಗೆ ಅನಿಸುತ್ತಿತ್ತು. ಪ್ರತಿಯೊಬ್ಬ ಸ್ವಯಂಸೇವಕನು ಕೂಡ ನಗುನಗುತ್ತಾ ಅತಿಥಿಗಳ ಸೇವೆಯಲ್ಲಿ ನಿರತನಾಗಿದ್ದನು. ಕರ್ತವ್ಯದಲ್ಲಿದ್ದ ಪ್ರತಿಯೊಬ್ಬ ಕಾರ್ಯಕರ್ತನೂ ಪ್ರತಿಯೊಬ್ಬ ಅತಿಥಿಯೊಂದಿಗೆ, ಅವರೇ ಅತ್ಯಂತ ಪ್ರಮುಖರು ಮತ್ತು ಗೌರವಾನ್ವಿತರು ಎಂಬಂತೆ ಪ್ರೀತಿ ಮತ್ತು ಗೌರವದಿಂದ ವರ್ತಿಸುತ್ತಿದ್ದರು'. ಅವರು ಹೇಳುತ್ತಾರೆ, ಜಾಗತಿಕ ಬೈಅತ್‌ನ ದೃಶ್ಯವು ಅತಿಥಿಗಳನ್ನು ಬಹಳವಾಗಿ ಪ್ರಭಾವಿಸುತ್ತದೆ. 'ಜಾಗತಿಕ ಬೈಅತ್‌ನ ಆಧ್ಯಾತ್ಮಿಕ ದೃಶ್ಯವು ನನಗೆ ಮರೆಯಲಾಗದ್ದು ಆಗಿತ್ತು. ವಿಶ್ವದ ವಿವಿಧ ದೇಶಗಳಿಂದ ಬಂದಿದ್ದ ಸಾವಿರಾರು ಜನರು ಒಂದೇ ಇಮಾಮ್‌ರ ಕೈಯಲ್ಲಿ ಬೈಅತ್ ಮಾಡುವುದನ್ನು ಮತ್ತು ಅತ್ಯಂತ ವಿನಯದಿಂದ ದೇವನ ಸನ್ನಿಧಿಯಲ್ಲಿ ಪ್ರಾರ್ಥಿಸುವುದನ್ನು ನೋಡುವುದು ಒಂದು ವಿಶ್ವಾಸವರ್ಧಕ ಮತ್ತು ಆಧ್ಯಾತ್ಮಿಕ ಅನುಭವವಾಗಿತ್ತು, ಅದು ನನ್ನ ಹೃದಯದ ಮೇಲೆ ಆಳವಾದ ಪ್ರಭಾವ ಬೀರಿದೆ'. ಅವರು ಹೇಳುತ್ತಾರೆ, 'ಜಮಾಅತಿನ ಇಮಾಮ್‌ರೊಂದಿಗೆ ನನ್ನ ಭೇಟಿಯಾಯಿತು, ಮೊದಲು ನನಗೆ ಗಾಬರಿಯಿತ್ತು, ಆದರೆ ಅವರನ್ನು ಭೇಟಿಯಾದ ನಂತರ ನನ್ನ ಗಾಬರಿ ದೂರವಾಯಿತು. ಅದೇ ರೀತಿ ನನ್ನ ಮನಸ್ಸಿನಲ್ಲಿದ್ದ ಮತ್ತು ನಾನು ಕೇಳಬೇಕೆಂದಿದ್ದ ವಿಷಯಗಳನ್ನು, ನಾನು ಕೇಳುವ ಮೊದಲೇ ಅವರೇ ನನ್ನನ್ನು ಕೇಳಿದರು ಮತ್ತು ಉತ್ತರಿಸಿದರು'.

ನಂತರ ಒಬ್ಬ ನವ ಅಹ್ಮದಿಯಿದ್ದಾರೆ, ಎಲಿಜಾ ಗೇಬ್ರಿಯಲ್ ಸಾಹಿಬ್, ಅವರು ಹೇಳುತ್ತಾರೆ: 'ಇಸ್ಲಾಮ್ ಸ್ವೀಕರಿಸುವ ಮೊದಲು ನಾನು ಕ್ರೈಸ್ತ ಧರ್ಮಕ್ಕೆ ಸೇರಿದ್ದೆ. ಈಮಾನಿನ ಸಂಬಂಧವು ಸಂಗೀತದೊಂದಿಗೆ ಆಗಿದೆ ಎಂದು ನಮಗೆ ಸದಾ ಕಲಿಸಲಾಗುತ್ತಿತ್ತು; (ಇಂದಿನ ದಿನಗಳಲ್ಲಿ ಪ್ರಪಂಚದಲ್ಲಿ ಸಂಗೀತ ಅಗತ್ಯವೆಂಬುದು ಬಹಳ ಪ್ರಚಲಿತವಾಗಿದೆ) ಆದರೆ ನನಗೆ ಎಂದೂ ಈ ರೀತಿಯಲ್ಲಿ ಆಧ್ಯಾತ್ಮಿಕ ನೆಮ್ಮದಿ ಮತ್ತು ದೇವನ ಸಾಮೀಪ್ಯವನ್ನು ಅನುಭವಿಸಲು ಸಾಧ್ಯವಾಗಲಿಲ್ಲ. ಮುಸಲ್ಮಾನನಾದ ಮೇಲೂ ನಾನು ನವಾಝ್ ನಿರ್ವಹಿಸುತ್ತಿದ್ದೆ, ಆದರೆ ಎಂದಿಗೂ ಕಣ್ಣೀರು ಸುರಿಸುವ, ಅಳುವ ಸೌಭಾಗ್ಯ ಸಿಕ್ಕಿರಲಿಲ್ಲ. ಆದರೆ ಜಲ್ಸ ಸಾಲಾನದಲ್ಲಿ ಬೈಅತ್‌ನಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಾಗ ನನ್ನ ಮೇಲೆ ಎಂತಹ ಆಧ್ಯಾತ್ಮಿಕ ಸ್ಥಿತಿ ಆವರಿಸಿತೆಂದರೆ ಅದನ್ನು ನಾನು ಪದಗಳಲ್ಲಿ ವಿವರಿಸಲಾರೆ. ನಿರಂತರವಾಗಿ ನನ್ನ ಪಾಪಗಳಿಗಾಗಿ ಪಶ್ಚಾತ್ತಾಪ ಪಡುತ್ತಾ ಇಸ್ತಿಗ್ಫಾರ್ (ಕ್ಷಮೆಯಾಚನೆ) ಮಾಡುತ್ತಿದ್ದೆ. ಪ್ರಾರ್ಥನೆಗಳನ್ನು ಮಾಡುತ್ತಿದ್ದೆ ಮತ್ತು ನನ್ನ ಕಣ್ಣುಗಳಿಂದ ನಿರಂತರವಾಗಿ ಕಣ್ಣೀರು ಹರಿಯುತ್ತಿತ್ತು. ನನ್ನ ಒಂದು ಆಧ್ಯಾತ್ಮಿಕ ಸಂಬಂಧವು ಖಿಲಾಫತ್‌ನೊಂದಿಗೆ ಸ್ಥಾಪನೆಯಾಯಿತು, ಅಲ್ಲಾಹನೊಂದಿಗೆ ಒಂದು ಆಧ್ಯಾತ್ಮಿಕ ಸಂಬಂಧ ಸ್ಥಾಪನೆಯಾಯಿತು. ನಮಾಝ್‌ನಲ್ಲಿಯೂ ಈ ಆಧ್ಯಾತ್ಮಿಕ ಸ್ಥಿತಿ ನನ್ನ ಮೇಲೆ ಆವರಿಸಿತ್ತು ಮತ್ತು ಅದೇ ಸ್ಥಿತಿಯಲ್ಲಿ ನಾನು ಜಲ್ಸಗಾಹ್‌ನಿಂದ ಹೊರಬಂದೆ ಮತ್ತು ನನ್ನ ಬೂಟುಗಳನ್ನು ಧರಿಸಲು ಮರೆತಿದ್ದೇನೆ ಎಂಬುದರ ಅರಿವೂ ಇರಲಿಲ್ಲ. ಅದೇ ಸ್ಥಿತಿಯಲ್ಲಿ ಸ್ನಾನಗೃಹಕ್ಕೆ ಹೋದೆ ಮತ್ತು ಅಲ್ಲಿ ನಿಂತಿದ್ದ ಓರ್ವ ಸ್ವಯಂಸೇವಕ ನನ್ನ ಪಾದಗಳನ್ನು ನೋಡಿ, ತನ್ನ ಬೂಟುಗಳನ್ನು ತೆಗೆದು ನನಗೆ ನೀಡಿ, ನೀವು ಇದನ್ನು ಧರಿಸಿ, ಬರಿಗಾಲಿನಲ್ಲಿ ಒಳಗೆ ಹೋದರೆ ನಿಮಗೆ ತೊಂದರೆಯಾಗಬಹುದು ಎಂದರು. ಈ ಸಣ್ಣ ಘಟನೆಯು ನನ್ನ ವಿಶ್ವಾಸವನ್ನು ಇನ್ನಷ್ಟು ಬಲಪಡಿಸಿತು, ವಾಸ್ತವದಲ್ಲಿ ಇದು ದೇವನಿಂದ ಸ್ಥಾಪಿಸಲ್ಪಟ್ಟ ಒಂದು ದೈವಿಕ ಜಮಾಅತ್ ಆಗಿದ್ದು, ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಹೋದರನಿಗೆ ಸಹಾಯ ಮಾಡಲು ಸದಾ ಸಿದ್ಧನಾಗಿರುತ್ತಾನೆ'. ಅತಿಥಿಗಳ ಬಗ್ಗೆ ಕಾಳಜಿ ವಹಿಸುವ ಅಹ್ಮದಿ ಸ್ವಯಂಸೇವಕರು ಮತ್ತು ಕಾರ್ಯಕರ್ತರ ಮೂಲಕವೂ ಜನರ ವಿಶ್ವಾಸವೂ ಬಲಗೊಳ್ಳುತ್ತದೆ.

ಚೆಕ್ ರಿಪಬ್ಲಿಕ್‌ನಿಂದ ಓರ್ವ ಪ್ರೊಫೆಸರ್ ಯಾರೋಸ್ಲಾವ್ ಫ್ರಾಂಕ್ ಬಂದಿದ್ದರು ಮತ್ತು ಇನ್ನೊಬ್ಬ ಪ್ರೊಫೆಸರ್ ಮಾರ್ಕ್ ಚೈಕಾ ಸಾಹಿಬ್. ಅವರು ಹೇಳುತ್ತಾರೆ: 'ನಮಗೆ ಜಲ್ಸ ಸಾಲಾನ ಎಷ್ಟೊಂದು ಇಷ್ಟವಾಯಿತೆಂದರೆ ನಾವು ನಮ್ಮ ಭಾವನೆಗಳನ್ನು ವಿವರಿಸಲಾರೆವು. ಮರಳಿ ಚೆಕ್ ರಿಪಬ್ಲಿಕ್‌ಗೆ ಹೋಗಿ, ನೀವು ಸ್ವತಃ ಹೋಗಿ ಆಧ್ಯಾತ್ಮಿಕತೆಯಿಂದ ತುಂಬಿದ ಮತ್ತು ಅತ್ಯುನ್ನತ ವ್ಯವಸ್ಥೆಗಳಿಂದ ಅಲಂಕರಿಸಲ್ಪಟ್ಟ ಈ ಭವ್ಯವಾದ ಸಭೆಯನ್ನು ವೀಕ್ಷಿಸಿ ಎಂದು ನಾವು ನಮ್ಮ ಸಹೋದ್ಯೋಗಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಹೇಳುವೆವು. ಪ್ರಪಂಚದ ವಿವಿಧ ಮೂಲೆಗಳಿಂದ ಸೇರಿದ ಜನರು ಪ್ರೀತಿ, ಶಾಂತಿ ಮತ್ತು ಸಹೋದರತ್ವದ ಮನೋಭಾವದಿಂದ ಒಂದೆಡೆ ಸೇರಿದ್ದರು. ಪ್ರಾರ್ಥನೆಯ ನಂತರ ಜನರನ್ನು ಭೇಟಿಯಾಗುವ ಅನುಭವವು ನನಗೆ ಅತ್ಯಂತ ಆಹ್ಲಾದಕರ ಮತ್ತು ಪ್ರಭಾವಶಾಲಿಯಾಗಿತ್ತು. ಒಂದು ನಂಬಿಕೆಯು ಪ್ರಪಂಚದಾದ್ಯಂತದ ಜನರನ್ನು ಪ್ರೀತಿ, ಶಾಂತಿ ಮತ್ತು ಒಗ್ಗಟ್ಟಿನ ಬಂಧದಲ್ಲಿ ಹೇಗೆ ಬೆಸೆಯುತ್ತಿದೆ ಎಂಬುದನ್ನು ನೋಡಿ ಬಹಳ ಸಂತೋಷವಾಯಿತು'. ಅವರು ಹೇಳುತ್ತಾರೆ, 'ಖಲೀಫತುಲ್ ಮಸೀಹ್‌ರ ಭಾಷಣದ ನಂತರ ನಮಗೆ ಇಸ್ಲಾಮ್ ಮತ್ತು ತಖ್ವದ ನೈಜ ಅರಿವು ಲಭಿಸಿತು. ನಮಗೆ ಈ ವಿಷಯದ ಬಗ್ಗೆ ಆಳವಾದ ತಿಳುವಳಿಕೆ ಮತ್ತು ಜ್ಞಾನ ಲಭಿಸಿತು, ಮತ್ತು ಎಂ.ಟಿ.ಎ. ಮೂಲಕ ಪ್ರಪಂಚದಾದ್ಯಂತ ನೀಡಲಾದ ಪ್ರಸಾರವೂ ಆಶ್ಚರ್ಯಕರವಾಗಿತ್ತು'.

ಕಝಾಕಿಸ್ತಾನ್‌ನಿಂದ ಸೌಲ್ ಸಾಹಿಬಾ ಜಲ್ಸದಲ್ಲಿ ಪಾಲ್ಗೊಂಡಿದ್ದರು. ಅವರು ಹೇಳುತ್ತಾರೆ: 'ಇದು ಎಂತಹ ಆಧ್ಯಾತ್ಮಿಕ ಮತ್ತು ಸ್ಮರಣೀಯ ಸಭೆಯಾಗಿತ್ತೆಂದರೆ, ಅದು ನನ್ನ ಹೃದಯದ ಮೇಲೆ ಅತ್ಯಂತ ಆಹ್ಲಾದಕರ ಮತ್ತು ಆಳವಾದ ಪ್ರಭಾವವನ್ನು ಬೀರಿದೆ. ಜಮಾಅತಿನ ಇಮಾಮ್ ಮತ್ತು ಇತರ ಭಾಷಣಕಾರರ ಭಾಷಣಗಳಲ್ಲಿ ಸತ್ಯವಿಶ್ವಾಸ, ಉನ್ನತ ನೈತಿಕತೆ, ಶಾಂತಿ, ಪರಸ್ಪರ ಸೌಹಾರ್ದತೆ, ಕೌಟುಂಬಿಕ ಮೌಲ್ಯಗಳು, ಯುವಕರ ತರಬೇತಿ ಮತ್ತು ಸಮಾಜದ ಸೇವೆಯಂತಹ ಪ್ರಮುಖ ವಿಷಯಗಳ ಮೇಲೆ ಬೆಳಕು ಚೆಲ್ಲಲಾಯಿತು. ನನ್ನನ್ನು ಅತ್ಯಂತ ಹೆಚ್ಚು ಪ್ರಭಾವಿಸಿದ್ದು ವಿವಿಧ ಸಮುದಾಯಗಳ ಜನರ ನಡುವಿನ ಸಹೋದರತ್ವದ ವಾತಾವರಣ ಮತ್ತು ಅವರು ಶಾಂತಿ ಹಾಗೂ ಭದ್ರತೆಯ ಕುರಿತು ಮಾತನಾಡುತ್ತಿದ್ದುದು'.

ನಂತರ ಅಮೆರಿಕದಿಂದ ಡಾಕ್ಟರ್ ಪ್ರೊಫೆಸರ್ ಬ್ರಾಡ್ ಶಾ, ಕಾನೂನು ಪ್ರಾಧ್ಯಾಪಕರು ಸಹ ಬಂದಿದ್ದರು. ಅವರು ಹೇಳುತ್ತಾರೆ: 'ನನಗೆ ಪ್ರಪಂಚದಾದ್ಯಂತ ವಿವಿಧ ಅಂತರರಾಷ್ಟ್ರೀಯ ಸಮ್ಮೇಳನಗಳು ಮತ್ತು ಸಮಾವೇಶಗಳಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿದೆ, ಆದರೆ ಯು.ಕೆ. ಜಲ್ಸ ಸಾಲಾನದ ಅನುಭವವು ಅವೆಲ್ಲಕ್ಕಿಂತಲೂ ವಿಶಿಷ್ಟವಾಗಿದೆ. ನೂರಕ್ಕೂ ಹೆಚ್ಚು ದೇಶಗಳಿಂದ ಬಂದಿದ್ದ ಜನರು, ವಿವಿಧ ಧರ್ಮಗಳು, ಸಮುದಾಯಗಳು ಮತ್ತು ಜೀವನದ ವಿವಿಧ ಕ್ಷೇತ್ರಗಳಿಗೆ ಸೇರಿದ ಅತಿಥಿಗಳನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಅವರೆಲ್ಲರ ಅಭಿಪ್ರಾಯ ಒಂದೇ ಆಗಿತ್ತು: ಇಲ್ಲಿ ಕಂಡುಬಂದ ಪ್ರೀತಿ, ಗೌರವ, ಶಾಂತಿ ಮತ್ತು ಪರಸ್ಪರ ಸಹೋದರತ್ವದ ವಾತಾವರಣವು ನಿಜಕ್ಕೂ ಅಸಾಧಾರಣವಾಗಿದೆ. ಅದೇ ರೀತಿ ಹ್ಯುಮಾನಿಟಿ ಫಸ್ಟ್ ಮತ್ತು ವಿವಿಧ ಶೈಕ್ಷಣಿಕ ಹಾಗೂ ಐತಿಹಾಸಿಕ ಪ್ರದರ್ಶನಗಳು ನನ್ನ ಮೇಲೆ ಬಹಳ ಪ್ರಭಾವ ಬೀರಿದವು. ಜಮಾಅತ್ ತನ್ನ ಸ್ವಂತ ಸಂಪನ್ಮೂಲಗಳಿಂದ ಪ್ರಪಂಚದಾದ್ಯಂತ, ಯಾವುದೇ ಧರ್ಮ ಅಥವಾ ಸಮುದಾಯಕ್ಕೆ ಸೇರಿರಲಿ, ಅಗತ್ಯವುಳ್ಳವರ ಸೇವೆ ಮಾಡುತ್ತಿರುವುದನ್ನು ನೋಡಿ ಸಂತೋಷವಾಯಿತು. ಎಲ್ಲ ಸುಶಿಕ್ಷಿತ ಜನರು, ಉನ್ನತ ಶಿಕ್ಷಣ ಪಡೆದ ವೈದ್ಯರು, ಇಂಜಿನಿಯರ್‌ಗಳು, ವಕೀಲರು ಮತ್ತು ಇತರ ಪರಿಣಿತರು ಅತ್ಯಂತ ವಿನಮ್ರತೆಯಿಂದ ಸ್ವಯಂಪ್ರೇರಿತವಾಗಿ ಸೇವೆ ಸಲ್ಲಿಸುತ್ತಿರುವುದು ನನ್ನ ಮೇಲೆ ಅಪಾರ ಪ್ರಭಾವ ಬೀರಿತು'.

ಬ್ರೆಜಿಲ್‌ನಿಂದ ಟೆಲಿವಿಷನ್ ವರದಿಗಾರ ಎರಿಕ್ ಪೋರ್ಟಿಲೊ ಸಾಹಿಬ್ ಹೇಳುತ್ತಾರೆ: 'ಈ ಕಾರ್ಯಕ್ರಮದ ಭವ್ಯವಾದ ಪ್ರಮಾಣ ಮತ್ತು ವಿಸ್ತಾರವನ್ನು ನೋಡಿ ನಾನು ಆಶ್ಚರ್ಯಚಕಿತನಾಗಿದ್ದೇನೆ ಎಂದು ಹೇಳದೆ ಇರಲಾರೆ. ವಿಶೇಷವಾಗಿ ಲಂಗರ್‌ಖಾನೆಯ ಗಾತ್ರ ಮತ್ತು ಊಟ ತಯಾರಿಸುವ ಎಲ್ಲ ಜಾಗಗಳು. ಆಧುನಿಕ, ವಿಸ್ತಾರ, ವ್ಯವಸ್ಥಿತ ಮತ್ತು ಅತ್ಯಂತ ಸ್ವಚ್ಛವಾಗಿವೆ.

ಪ್ರತಿಯೊಬ್ಬ ಸ್ವಯಂಸೇವಕನ ಶ್ರಮ, ಅಚ್ಚುಕಟ್ಟುತನ ಮತ್ತು ಸಮರ್ಪಣೆಯನ್ನು ನೋಡುವುದು ಅತ್ಯಂತ ಸುಂದರವಾದ ಅನುಭವವಾಗಿದೆ, ಅದು ನನ್ನ ಹೃದಯವನ್ನು ಶಾಂತಿ ಮತ್ತು ಸಂತೋಷದಿಂದ ತುಂಬುತ್ತದೆ'.

ಫಿಲಿಪೈನ್ಸ್‌ನಿಂದ ಪ್ರೊಫೆಸರ್ ಯೂಸುಫ್ ಮೊರೇಲ್ಸ್, ತಮ್ಮ ಪತ್ನಿಯೊಂದಿಗೆ ಬಂದಿದ್ದರು, ಅವರು ಸಹ ಪ್ರೊಫೆಸರ್ ಆಗಿದ್ದಾರೆ. ಪ್ರೊಫೆಸರ್ ಶರೀಮಾ ಮೊರೇಲ್ಸ್. ಅವರು ಕ್ರೈಸ್ತ ಧರ್ಮದಿಂದ ಇಸ್ಲಾಮ್ ಸ್ವೀಕರಿಸಿದ್ದಾರೆ ಮತ್ತು ನ್ಯಾಷನಲ್ ಕಮಿಷನ್ ಆಫ್ ಮುಸ್ಲಿಂ ಫಿಲಿಪಿನೋಸ್‌ನ ಅಧ್ಯಕ್ಷರೂ ಆಗಿದ್ದಾರೆ. ಅವರು ಇನ್ನೂ ಅಹ್ಮದಿಯಾಗಿಲ್ಲ. ಅವರು ಹೇಳುತ್ತಾರೆ: 'ಅಧಿಕೃತವಾಗಿ ಸುಮಾರು ಐವತ್ತು ಸಾವಿರ ಜನರು ಭಾಗವಹಿಸಿದ್ದಾರೆ ಎಂದು ಹೇಳಲಾಗಿದ್ದರೂ, ಜಲ್ಸಗಾಹ್‌ನ ವಿಸ್ತಾರ ಮತ್ತು ವ್ಯವಸ್ಥೆಗಳ ಪ್ರಮಾಣವನ್ನು ನೋಡಿದಾಗ, ಈ ಸಭೆಯು ಅದಕ್ಕಿಂತಲೂ ದೊಡ್ಡದಾಗಿದೆ ಎಂದು ನನಗೆ ಅನ್ನಿಸಿತು. ವಿಶೇಷವಾಗಿ, ತಮ್ಮ ಸಮಯವನ್ನು ನೀಡಿ ಮತ್ತು ಸೇವೆ ಸಲ್ಲಿಸುವ ಮೂಲಕ ಸಂಪೂರ್ಣ ತಾತ್ಕಾಲಿಕ ನಗರವನ್ನು ನಿರ್ಮಿಸಿದ ಸಾವಿರಾರು ಸ್ವಯಂಸೇವಕರ ಪ್ರಯತ್ನಗಳನ್ನು ಕಂಡು ನನಗೆ ಆಶ್ಚರ್ಯವಾಯಿತು, ಅಲ್ಲಿ ಹತ್ತಾರು ಸಾವಿರ ಜನರಿಗೆ ವಸತಿ, ಊಟ, ಸಾರಿಗೆ, ಸ್ವಚ್ಛತೆ ಮತ್ತು ಇತರ ಸೌಲಭ್ಯಗಳು ಲಭ್ಯವಿವೆ. ಆರ್ಥಿಕವಾಗಿ ಸದೃಢರಾಗಿದ್ದರೂ ಸ್ವಯಂಸೇವಕರು ಸೇವೆ ಸಲ್ಲಿಸುತ್ತಾರೆ ಮತ್ತು ಅತ್ಯಂತ ಸರಳ ಹಾಗೂ ದೈಹಿಕ ಶ್ರಮದ ಸೇವೆಯನ್ನು ಮಾಡುತ್ತಾರೆ ಮತ್ತು ಅತ್ಯಂತ ವಿನಯದಿಂದ ಮಾಡುತ್ತಾರೆ, ಇವೇ ಶಾಂತಿಯುತ ಮತ್ತು ಸಾಮರಸ್ಯದ ಸಮಾಜವನ್ನು ನಿರ್ಮಿಸಬಲ್ಲ ಅಂಶಗಳಾಗಿವೆ. ಚಿಕ್ಕ ಮಕ್ಕಳು ನೀರು ಕುಡಿಸುವುದನ್ನು ನೋಡಿದೆ. ಅದೇ ರೀತಿ, ಹದಿನಾಲ್ಕು–ಹದಿನೈದು ವರ್ಷದ ಇಬ್ಬರು ಮಕ್ಕಳಿದ್ದರು, ಅವರಿಗೆ ಊಟದ ಕರ್ತವ್ಯವನ್ನು ನೀಡಲಾಗಿತ್ತು ಮತ್ತು ಅವರು ಎಷ್ಟೊಂದು ಜವಾಬ್ದಾರಿಯಿಂದ ಓಡಾಡಿ ಮುನ್ನೂರು ಜನರಿಗೆ ಊಟ ಬಡಿಸುತ್ತಿದ್ದರೆಂದರೆ, ಆಶ್ಚರ್ಯವಾಗುತ್ತಿತ್ತು. ಸರ್ ಮುಹಮ್ಮದ್ ಝುಫರುಲ್ಲಾ ಖಾನ್ ಸಾಹಿಬ್ ಅಹ್ಮದಿಯಾಗಿದ್ದರು ಎಂಬುದೂ ನನಗೆ ಇಲ್ಲಿಗೆ ಬಂದ ಮೇಲೆಯೇ ತಿಳಿಯಿತು. ಅದೇ ರೀತಿ ಡಾಕ್ಟರ್ ಅಬ್ದುಸ್ಸಲಾಮ್ ಸಾಹಿಬ್‌ರ ಸಾಧನೆಗಳ ಬಗ್ಗೆಯೂ ತಿಳಿಯಿತು. ಅದೇ ರೀತಿ ಜಮಾಅತಿನ ಇಮಾಮ್‌ರ ಭಾಷಣಗಳು ನನ್ನ ಮೇಲೆ ಬಹಳ ಪ್ರಭಾವ ಬೀರಿದವು. ಕಡಿಮೆ ಸಮಯದಲ್ಲಿ ಅವರು ಅನೇಕ ವಿಷಯಗಳನ್ನು ಒಳಗೊಂಡರು ಮತ್ತು ಪ್ರತಿಯೊಂದು ವಿಷಯವನ್ನೂ ವಿವರವಾಗಿ, ಆದರೆ ಸರಳ ಮತ್ತು ಅರ್ಥವಾಗುವ ರೀತಿಯಲ್ಲಿ ಪ್ರಸ್ತುತಪಡಿಸಿದರು'.

ಎಲ್ ಸಾಲ್ವಡಾರ್‌ನಿಂದ ಒಬ್ಬ ಅತಿಥಿ ಸೌಲ್ ಲಿಗಾಡೋ, ಸೆಂಟ್ರಲ್ ಅಮೆರಿಕನ್ ಸಂಸತ್ತಿನಲ್ಲಿ ಎಲ್ ಸಾಲ್ವಡಾರ್‌ನ ಪ್ರತಿನಿಧಿಯಾಗಿದ್ದಾರೆ ಸಹ ಬಂದಿದ್ದರು. ಅವರು ಹೇಳುತ್ತಾರೆ: 'ಇದು ನನ್ನ ಮೊದಲ ಯು.ಕೆ. ಜಲ್ಸ ಸಾಲಾನ ಆಗಿತ್ತು, ಇದರಲ್ಲಿ ನನಗೆ ಅಹ್ಮದಿಯಾ ಮುಸ್ಲಿಮ್ ಜಮಾಅತನ್ನು ಬಹಳ ಹತ್ತಿರದಿಂದ ನೋಡುವ ಅವಕಾಶ ಸಿಕ್ಕಿತು. ನಾನು ಕಲಿತ ಅತಿ ಮುಖ್ಯವಾದ ವಿಷಯವೆಂದರೆ, ನಾವು ದೈನಂದಿನ ಜೀವನವನ್ನು ಹೇಗೆ ನಡೆಸಬೇಕು ಎಂಬುದು. ಅದರ ಪ್ರಮುಖ ಸಂದೇಶವೇನೆಂದರೆ, ಮರದಿಂದ ಬೇರ್ಪಟ್ಟ ಕೊಂಬೆಯು ಹೇಗೆ ಒಣಗಿಹೋಗುತ್ತದೆಯೋ, ಏಕೆಂದರೆ ಮರವೇ ಅದಕ್ಕೆ ಜೀವ ನೀಡುತ್ತಿರುತ್ತದೆ, ಅದೇ ರೀತಿ ನಾವು ಕೂಡ ದೇವನಿಂದ ದೂರವಾದರೆ ಅದು ನಮ್ಮ ಆಧ್ಯಾತ್ಮಿಕ ಮರಣವಾಗಿದೆ. ನಾವು ಕಷ್ಟದಲ್ಲಿರುವಾಗ ಮಾತ್ರ ದೇವನನ್ನು ಹುಡುಕುತ್ತೇವೆ ಎಂದು ಜಮಾಅತಿನ ಖಲೀಫರು–ಇಮಾಮ್ ಹೇಳಿದ್ದು ಸಂಪೂರ್ಣ ಸತ್ಯವಾಗಿದೆ. ಅದೇ ರೀತಿ ಅವರು ಗಂಡ–ಹೆಂಡತಿಯ ಸಂಬಂಧದ ಕುರಿತು ನೀಡಿದ ಉಪದೇಶಗಳನ್ನು ನಾವು ಪಾಲಿಸಿದರೆ ಮತ್ತು ದೃಷ್ಟಿಯನ್ನು ತಗ್ಗಿಸಿಕೊಂಡರೆ, ವೈವಾಹಿಕ ಜೀವನದ ಅನೇಕ ಸಮಸ್ಯೆಗಳಿಂದ ಪಾರಾಗಬಹುದು. ಹಾಗಾಗಿ, ಅನ್ಯರು ಈ ಸಂದೇಶವನ್ನು ಅರ್ಥಮಾಡಿಕೊಳ್ಳಬಹುದಾದರೆ, ಅಹ್ಮದಿಯರು ಈ ಸಂದೇಶವನ್ನು ಅರ್ಥಮಾಡಿಕೊಳ್ಳುವ ಅಗತ್ಯ ಇನ್ನೆಷ್ಟಿದೆ. ಅವರು ಹೇಳುತ್ತಾರೆ: ಅಸಾಧಾರಣ ವ್ಯವಸ್ಥೆಗಳು ನನ್ನ ಮೇಲೆ ಪ್ರಭಾವ ಬೀರಿದವು. ಜಮಾಅತಿನ ಇಮಾಮ್‌ರೊಂದಿಗಿನ ಭೇಟಿಗೆ ಬಹಳ ಕಡಿಮೆ ಸಮಯವಿತ್ತು ಮತ್ತು ನನಗೆ ಹೆಚ್ಚು ಸಮಯ ಬೇಕೆಂಬ ಆಸೆಯಿತ್ತು, ಆದರೆ ಆ ಅಲ್ಪಾವಧಿಯಲ್ಲೂ ಅವರು ಎಲ್ಲವನ್ನೂ ಗಮನಿಸಿದರು ಮತ್ತು ನನ್ನೊಂದಿಗೆ ಮಾತನಾಡಿದರು. ಭೇಟಿಯ ನಂತರ, ಖಲೀಫರಿಗೆ ತಮ್ಮ ಜಮಾಅತಿನ ಬಗ್ಗೆ ಬಹಳಷ್ಟು ಮಾಹಿತಿ ಇರುತ್ತದೆ ಮತ್ತು ಅದು ಎಲ್ಲೆಲ್ಲಿ, ಯಾವ ಮಟ್ಟದಲ್ಲಿದೆ ಎಂಬುದರ ಬಗ್ಗೆ ಆಳವಾದ ಆಸಕ್ತಿಯಿದೆ ಎಂಬುದು ನನಗೆ ಮನವರಿಕೆಯಾಗಿದೆ'.

ಬೆಲೀಝ್‌ನಿಂದ ಒಬ್ಬ ನವ ಅಹ್ಮದಿ ಮಹಿಳೆ ಮೋಝಿ ಕೊರಿಯಾನೋ ಸಾಹಿಬಾ ಹೇಳುತ್ತಾರೆ: 'ನಾವು ಬಹಳ ಚಿಕ್ಕ ದೇಶಕ್ಕೆ ಸೇರಿದವರಾಗಿದ್ದೇವೆ. ನಾನು ವಾಸಿಸುವ ನಗರದ ಜನಸಂಖ್ಯೆ ಕೇವಲ ಐವತ್ತು ಸಾವಿರ. ನೂರು ಜನ ಸೇರಿದರು ಕೂಡ ಜಗಳಗಳು ಪ್ರಾರಂಭವಾಗುತ್ತವೆ; ಆದರೆ ಜಲ್ಸದ ಏರ್ಪಾಡಿನಲ್ಲಿ ಅಸಾಧಾರಣವಾದ ಶಾಂತಿ ಇತ್ತು ಮತ್ತು ಜನರು ಪರಸ್ಪರ ಬಹಳ ಚೆನ್ನಾಗಿ ಬೆರೆಯುತ್ತಿದ್ದರು. ನನ್ನ ಭಾವನೆಗಳನ್ನು ಪದಗಳಲ್ಲಿ ವಿವರಿಸಲು ನನಗೆ ಸಾಧ್ಯವಿಲ್ಲ. ನಾನು ನನ್ನನ್ನು ಅಹ್ಮದಿ ಮುಸ್ಲಿಂ ಎಂದು ಕರೆದುಕೊಳ್ಳಲು ಈಗ ಸಂತೋಷಪಡುತ್ತೇನೆ. ನನ್ನ ಪತಿಯು ಕಳೆದ ವರ್ಷ ಜಲ್ಸ ಸಾಲಾನದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಪಡೆದಿದ್ದರು. ಆ ಸಮಯದಲ್ಲಿ ಖಲೀಫರು, ನಿನ್ನ ಪತ್ನಿಗೂ ಅಹ್ಮದಿಯತ್ತಿನ ಸಂದೇಶವನ್ನು ತಲುಪಿಸು ಎಂದು ಹೇಳಿದ್ದರು. ಅಲ್ಲಾಹನ ಕೃಪೆಯಿಂದ ನಾನು ಇಂದು ಸಂಪೂರ್ಣ ವಿಶ್ವಾಸ ಮತ್ತು ಹೆಮ್ಮೆಯಿಂದ ಹೇಳುತ್ತೇನೆ, ನಾನು ಅಹ್ಮದಿ ಮುಸ್ಲಿಂ ಆಗಿದ್ದೇನೆ'.

ಬಲ್ಗೇರಿಯಾದಿಂದ ಬಂದಿದ್ದ ಸ್ವಿಲೆನ್ ಪೆಂಕೋವ್, ಅವರು ಕಾರ್ಮಿಕ ಮತ್ತು ಸಾಮಾಜಿಕ ನೀತಿ ಸಚಿವಾಲಯದ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಅವರು ಹೀಗೆ ಹೇಳಿದರು: 'ಜರ್ಮನಿಯ ವಿವಿಧ ನಗರಗಳಲ್ಲಿ ನಡೆಯುವ ಜಲ್ಸ ಸಾಲಾನಾಗಳಲ್ಲಿ ನಾನು ಹಲವು ಬಾರಿ ಪಾಲ್ಗೊಂಡಿದ್ದೇನೆ, ಆದರೆ ಬ್ರಿಟನ್‌ನ ಜಲ್ಸ ಸಾಲಾನದ ಅನುಭವವು ಅದರ ವಿಸ್ತಾರ, ಸಂಘಟನೆ ಮತ್ತು ಉನ್ನತ ಗುಣಮಟ್ಟದ ದೃಷ್ಟಿಯಿಂದ ವಿಶಿಷ್ಟ ಮತ್ತು ಸಾಟಿಯಿಲ್ಲದ್ದಾಗಿದೆ. ನನ್ನ ಮೇಲೆ ಪ್ರಭಾವ ಬೀರಿದ ವಿಷಯವೆಂದರೆ ಜಲ್ಸಗಾಹ್‌ನ ಅಸಾಧಾರಣ ವಿಸ್ತಾರ ಮತ್ತು ಅಲ್ಲಿ ಸ್ಥಾಪಿಸಲಾಗಿದ್ದ ತಾತ್ಕಾಲಿಕ ನಗರ. ಎಲ್ಲ ಮೂಲಭೂತ ಸೌಲಭ್ಯಗಳನ್ನು ಅತ್ಯಂತ ಉತ್ತಮವಾಗಿ ಒದಗಿಸಲಾಗಿತ್ತು ಮತ್ತು ಐವತ್ತು ಸಾವಿರಕ್ಕೂ ಹೆಚ್ಚು ಜನರು ಅಲ್ಲಿ ಸೇರಿದ್ದರು. ಜಲ್ಸದಲ್ಲಿ ನಡೆದ ಭಾಷಣಗಳು ಬಹಳಷ್ಟು ಮಾಹಿತಿಯುಕ್ತ, ಜ್ಞಾನಪೂರ್ಣ ಮತ್ತು ಉನ್ನತ ಮಟ್ಟದ್ದಾಗಿದ್ದವು. ಭಾಷಣಕಾರರು ಧಾರ್ಮಿಕ ಮತ್ತು ವೈಜ್ಞಾನಿಕ ವಿಷಯಗಳನ್ನು ಅತ್ಯಂತ ಸುಂದರವಾದ ರೀತಿಯಲ್ಲಿ ಮಂಡಿಸಿದರು, ಇದರಿಂದಾಗಿ ಹಾಜರಿದ್ದವರ ಜ್ಞಾನ ಮತ್ತು ಅರಿವು ಹೆಚ್ಚಾಯಿತು. ವಿವಿಧ ಪ್ರದರ್ಶನಗಳು ನನ್ನ ಮೇಲೆ ಬಹಳ ಪ್ರಭಾವ ಬೀರಿದವು ಮತ್ತು ಅವುಗಳನ್ನು ಆಧುನಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಅತ್ಯಂತ ವೃತ್ತಿಪರ ರೀತಿಯಲ್ಲಿ ಆಯೋಜಿಸಲಾಗಿತ್ತು. ಮಕ್ಕಳಿಗಾಗಿಯೂ ಅಲ್ಲಿ ತರಬೇತಿ ಕಾರ್ಯಕ್ರಮಗಳು ಮತ್ತು ಪ್ರದರ್ಶನಗಳಿದ್ದವು. ಇವು ಮುಂದಿನ ಪೀಳಿಗೆಯ ತರಬೇತಿಗೆ ಉತ್ತಮವಾದ ವಿಷಯಗಳಾಗಿವೆ'.

ಸೆನೆಗಲ್‌ನಿಂದ ಅಹ್ಮದೌ ಬಾ ಸಾಹಿಬ್, ತಿಜಾನಿಯಾ ಪಂಥಕ್ಕೆ ಸೇರಿದವರು ಮತ್ತು ತಮ್ಮ ಪ್ರದೇಶದ ಧಾರ್ಮಿಕ ನಾಯಕರಾಗಿದ್ದಾರೆ. ಅವರು ಹೇಳುತ್ತಾರೆ: 'ಈ ಜಲ್ಸದ ಭವ್ಯವಾದ ಸಂಘಟನೆ ಮತ್ತು ಆಡಳಿತವು ನನ್ನ ಮೇಲೆ ಅಪಾರ ಪ್ರಭಾವ ಬೀರಿದೆ. ಈ ಜಲ್ಸವನ್ನು ಆಯೋಜಿಸಿದ ರೀತಿ, ಅತ್ಯುತ್ತಮ ಭದ್ರತಾ ವ್ಯವಸ್ಥೆ, ಹಾಜರಿದ್ದವರ ಉನ್ನತ ನೈತಿಕತೆ, ಅವರ ವಿವೇಕ, ಸಭ್ಯತೆ, ವಿಶೇಷವಾಗಿ ಅಹ್ಮದಿಯಾ ಜಮಾಅತ್‌ನ ಸದಸ್ಯರ ಉನ್ನತ ನಡವಳಿಕೆ ನನ್ನ ಹೃದಯದ ಮೇಲೆ ಆಳವಾದ ಪ್ರಭಾವ ಬೀರಿದೆ. ಮೊದಲು ಅಹ್ಮದಿಯಾ ಜಮಾಅತಿನ ಬಗ್ಗೆ ಕೇವಲ ಕೇಳುತ್ತಿದ್ದೆ, ಆದರೆ ಇಂದು ಅತ್ಯಂತ ವ್ಯವಸ್ಥಿತ, ಅತ್ಯಂತ ನಿಷ್ಠಾವಂತ ಮತ್ತು ತಮ್ಮ ಖಲೀಫರ ಆದೇಶಗಳನ್ನು ಸಂಪೂರ್ಣವಾಗಿ ಪಾಲಿಸುವ ಜಮಾಅತನ್ನು ನನ್ನ ಕಣ್ಣಾರೆ ಕಂಡು ಬಹಳ ಸಂತೋಷವಾಯಿತು. ನೀವು ಮಾನವೀಯತೆಯ ಸೇವೆಗಾಗಿ, ಉದಾಹರಣೆಗೆ ದೇಣಿಗೆಗಳು, ನೀರಿನ ಬಾವಿಗಳು, ಮಸೀದಿಗಳು, ಆಸ್ಪತ್ರೆಗಳು, ಪರಿಹಾರ ಚಟುವಟಿಕೆಗಳು ಮತ್ತು ಇತರ ಕಲ್ಯಾಣ ಯೋಜನೆಗಳಿಗಾಗಿ ಬಹಳಷ್ಟು ಮಾಡುತ್ತೀರಿ ಎಂಬುದು ನನಗೆ ಮೊದಲೇ ತಿಳಿದಿತ್ತು, ಆದರೆ ಇಂದು ಮಾನವೀಯ ಮೌಲ್ಯಗಳು, ಮಾನವ ಅಭಿವೃದ್ಧಿಗಾಗಿ ನಿಮ್ಮ ಪ್ರಯತ್ನಗಳು, ವಿವೇಕ, ಮೂಲಭೂತ ಶಿಕ್ಷಣದ ಪ್ರಚಾರ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು, ಪ್ರದರ್ಶನಗಳಲ್ಲಿ ಕಂಡು ನಾನು ಇನ್ನಷ್ಟು ಪ್ರಭಾವಿತನಾಗಿದ್ದೇನೆ. ವಾಸ್ತವವೇನೆಂದರೆ, ನಾನು ನಿಮಗೆ ಹೃದಯದ ಅಂತರಾಳದಿಂದ ಗೌರವ ಸಲ್ಲಿಸುತ್ತೇನೆ. ಜಮಾಅತಿನ ಇಮಾಮ್‌ರೊಂದಿಗೆ ನನ್ನ ಭೇಟಿಯಾಯಿತು, ಅದರಿಂದಲೂ ನನಗೆ ಜಮಾಅತನ್ನು ಅರ್ಥಮಾಡಿಕೊಳ್ಳಲು ಬಹಳಷ್ಟು ಅವಕಾಶ ಸಿಕ್ಕಿತು'.

ಅದೇ ರೀತಿ ಸೆನೆಗಲ್‌ನಿಂದ ಮೋರ್ಮನ್ ಕಾಬಾ ಜಾಕಾಟೆ ಸಾಹಿಬ್, ಅವರು ಸಂಸತ್ ಸದಸ್ಯರಾಗಿದ್ದಾರೆ. ಅವರು ಹೇಳುತ್ತಾರೆ: 'ಜನರ ಸೇವೆ, ಆತ್ಮಗೌರವ, ಧೈರ್ಯ ಮತ್ತು ದೃಢಸಂಕಲ್ಪ ನಿಮ್ಮ ಪ್ರಮುಖ ಗುಣಲಕ್ಷಣಗಳಾಗಿವೆ ಎಂಬುದನ್ನು ನಾನು ನನ್ನ ಕಣ್ಣಾರೆ ನೋಡಿದೆ. ಕೇವಲ ಮಾತುಗಳಿಗಿಂತ ಹೆಚ್ಚಾಗಿ ನಾನು ಇಲ್ಲಿ ನೈಜ ಸೇವೆಯ ಇಸ್ಲಾಮನ್ನು ನೋಡಿದೆ. ನೀಡುವಂತಹ ಕೈಗಳನ್ನು ನೋಡಿದೆ, ಕ್ಷಮಿಸುವಂತಹ ಹೃದಯಗಳನ್ನು ನೋಡಿದೆ, ಇತರರಿಗಾಗಿ ಯಾವಾಗಲೂ ತೆರೆದಿರುವ ಬಾಗಿಲುಗಳನ್ನು ನೋಡಿದೆ'.

ಕೊಸೊವೊದಿಂದ ಪ್ರೊಫೆಸರ್ ಡಾಕ್ಟರ್ ಖಲೀಲ್ ಇಬ್ರಾಹಿಮಿ ಸಾಹಿಬ್ ಒಬ್ಬ ಪ್ರಸಿದ್ಧ ಶಿಕ್ಷಣ ತಜ್ಞ, ಸಂಶೋಧಕ ಮತ್ತು ವಿಶ್ವವಿದ್ಯಾಲಯದ ಪ್ರೊಫೆಸರ್ ಆಗಿದ್ದಾರೆ. ಅವರ ಶೈಕ್ಷಣಿಕ ಪ್ರಯತ್ನಗಳು ಮತ್ತು ಸಂಶೋಧನಾ ಚಟುವಟಿಕೆಗಳಿಗಾಗಿ ಕೊಸೊವೊದಲ್ಲಿ ಅವರನ್ನು ಅತ್ಯಂತ ಗೌರವದಿಂದ ಕಾಣಲಾಗುತ್ತದೆ. ಅವರು ಹೇಳುತ್ತಾರೆ: 'ಪ್ರತಿಯೊಂದು ಕ್ಷೇತ್ರದಲ್ಲೂ ಶಿಸ್ತು, ಸಹಕಾರ ಮತ್ತು ತ್ಯಾಗದ ಪ್ರಾಯೋಗಿಕ ಚಿತ್ರಣವನ್ನು ನೋಡುವುದು ನಿಜಕ್ಕೂ ಅಚ್ಚರಿ ಮೂಡಿಸುವಂತಿತ್ತು. ಇದರೊಂದಿಗೆ ಪ್ರತಿಯೊಬ್ಬರಿಂದಲೂ ಸಿಗುತ್ತಿದ್ದ ಪ್ರೀತಿ, ಪ್ರಾಮಾಣಿಕತೆ, ಗೌರವ ಮತ್ತು ಉದಾರ ಆತಿಥ್ಯವು ಈ ಅನುಭವವನ್ನು ನನಗೆ ಮರೆಯಲಾಗದಂತೆ ಮಾಡಿದೆ. ಈ ದಿನಗಳಲ್ಲಿ ವಿವಿಧ ಭಾಷಣಗಳನ್ನು ಕೇಳುವ ಮತ್ತು ವಿಶೇಷವಾಗಿ ಜಮಾಅತಿನ ಇಮಾಮ್‌ರ ಭಾಷಣವನ್ನು ಕೇಳುವ ಅವಕಾಶ ಸಿಕ್ಕಿತು. ಅವರೊಂದಿಗೆ ಭೇಟಿಯೂ ಆಯಿತು. ನನ್ನನ್ನು ಅತ್ಯಂತ ಹೆಚ್ಚು ಪ್ರಭಾವಿಸಿದ ವಿಷಯವೆಂದರೆ ಶಾಂತಿ, ಧರ್ಮಗಳ ನಡುವಿನ ಸೌಹಾರ್ದತೆ, ಮಾನವ ಸಮಾನತೆ, ಪರಸ್ಪರ ಗೌರವ ಮತ್ತು ಸಮಾಜದ

ಪ್ರತಿಯೊಬ್ಬ ವ್ಯಕ್ತಿಯನ್ನೂ ಒಟ್ಟಿಗೆ ಕೊಂಡೊಯ್ಯುವ ಪರಿಕಲ್ಪನೆಯ ಮೇಲೆ ನಿರಂತರ ಮತ್ತು ಅಸಾಧಾರಣ ಒತ್ತು ನೀಡುವುದಾಗಿತ್ತು. ಇಂದಿನ ಯುಗದಲ್ಲಿ ಪ್ರಪಂಚದ ಹಲವು ಭಾಗಗಳಲ್ಲಿ ಧಾರ್ಮಿಕ ತಪ್ಪುಗ್ರಹಿಕೆಗಳು, ಉಗ್ರವಾದ ಮತ್ತು ಅಸಹಿಷ್ಣುತೆ ಗಂಭೀರ ಸವಾಲಾಗಿ ಪರಿಣಮಿಸಿರುವಾಗ, ಈ ಸಂದೇಶಗಳು ಅತ್ಯಂತ ಸಕಾಲಿಕ, ಭರವಸೆದಾಯಕ ಮತ್ತು ಮಾನವೀಯತೆಗೆ ಮಾರ್ಗದರ್ಶನ ನೀಡುವಂತಿವೆ ಎಂದು ನನಗೆ ಅನಿಸಿತು’.

ಸ್ಪೇನಿನ ಜುವಾನ್ ಆಂಟೋನಿಯೊ ರೆಜೆಸ್ ಅವರು ಪೆಡ್ರೊ ಅಬಾದ್‌ನ ಮೇಯರ್ ಆಗಿದ್ದಾರೆ. ಅವರು ಹೇಳುತ್ತಾರೆ: ‘ಇದು ಕೇವಲ ನಂಬಿಕೆಯ ಆಚರಣೆಯಲ್ಲ, ಬದಲಾಗಿ ವಿವಿಧ ದೇಶಗಳು, ಸಂಸ್ಕೃತಿಗಳು ಮತ್ತು ಆದರ್ಶಗಳಿಗೆ ಸೇರಿದ ಜನರ ನಡುವಿನ ಸಹಬಾಳ್ವೆಯ ಒಂದು ಅಸಾಧಾರಣ ಪ್ರದರ್ಶನವಾಗಿದೆ ಎಂಬುದನ್ನು ನೋಡುವ ಅವಕಾಶವನ್ನು ಜಲ್ಸ ಸಾಲಾನವು ನಮಗೆ ನೀಡಿದೆ. ಇದು ಶಾಂತಿ, ಗೌರವ ಮತ್ತು ಸಹೋದರತ್ವದ ಹಂಚಿಕೆಯ ಮೌಲ್ಯಗಳಿಂದ ಒಂದಾಗಿದೆ. ವಿವಿಧ ಪ್ರದರ್ಶನಗಳು ಮತ್ತು ಮಾಹಿತಿ ಕಾರ್ಯಕ್ರಮಗಳ ಮೂಲಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಸೇವೆಗಳ ಬಗ್ಗೆಯೂ ನನಗೆ ತಿಳಿಯಿತು’.

ಆಸ್ಟ್ರೇಲಿಯಾದಿಂದ ಇಬ್ಬರು ಅತಿಥಿ ವಕೀಲರಾದ ಕ್ಯಾರೋಲಿನ್ ಸಾಹಿಬಾ ಮತ್ತು ಹನ್ನಾ ಸಾಹಿಬಾ ಭಾಗವಹಿಸಿದ್ದರು. ಅವರು ಹೇಳುತ್ತಾರೆ: ‘ಜಲ್ಸ ಸಾಲಾನದಲ್ಲಿ ಪಾಲ್ಗೊಳ್ಳುವುದು ನಮ್ಮ ಅದೃಷ್ಟ ಎಂದು ನಾವು ಭಾವಿಸುತ್ತೇವೆ. ವ್ಯವಸ್ಥೆಗಳನ್ನು ನೋಡಿ ಆಶ್ಚರ್ಯವಾಯಿತು. ಎಲ್ಲೆಡೆ ಶಾಂತಿಯ ವಾತಾವರಣವಿತ್ತು. ನಾನು ಜಲ್ಸಗಾಹ್‌ನ ಒಳಗೆ ಮತ್ತು ಹೊರಗೆ ಎಲ್ಲೆಡೆ ಸುತ್ತಾಡಿ ನೋಡಿದೆ. ಯಾವುದೇ ಜಗಳವಿರಲಿಲ್ಲ, ಗದ್ದಲವಿರಲಿಲ್ಲ. ಇಷ್ಟೊಂದು ಶಾಂತಿಯುತ ಮತ್ತು ನೆಮ್ಮದಿಯ ಜನರು ಪ್ರಪಂಚದಲ್ಲಿ ಇಲ್ಲ. ಪ್ರತಿಯೊಬ್ಬರೂ ಇನ್ನೊಬ್ಬರಿಗೆ ಸಹಾಯ ಮಾಡಲು ಸಿದ್ಧರಿದ್ದರು. ಮಕ್ಕಳು ನೀರು ಕೊಡುವುದನ್ನು ನೋಡಿ ಸಂತೋಷವಾಯಿತು ಮತ್ತು ಮಾನವ ಹಕ್ಕುಗಳ ಸಭೆಯಲ್ಲಿ ಭಾಗವಹಿಸಿದೆ. ಪ್ರಪಂಚದಾದ್ಯಂತ ಶಾಂತಿಯನ್ನು ಹರಡುವ ಮತ್ತು ಹಕ್ಕುಗಳನ್ನು ಕಾಪಾಡುವ ಜಮಾಅತಿನ ಕಲ್ಪನೆ, ಅಹ್ಮದಿಗಳಿಗೆ ಮಾತ್ರವಲ್ಲದೆ ಪ್ರತಿಯೊಬ್ಬ ಸಂತ್ರಸ್ತನಿಗಾಗಿಯೂ ಧ್ವನಿ ಎತ್ತುವುದು ದೊಡ್ಡ ವಿಷಯವಾಗಿದೆ, ಇದರಿಂದ ನಾನು ಬಹಳ ಪ್ರಭಾವಿತಳಾಗಿದ್ದೇನೆ. ಅವರೆಷ್ಟರ ಮಟ್ಟಿಗೆ ಪ್ರಭಾವಿತರಾಗಿದ್ದಾರೆಂದರೆ, ಮುಂದಿನ ವರ್ಷವೂ ನಮ್ಮನ್ನು ಇಲ್ಲಿಗೆ ಕರೆತರಬೇಕು ಎಂದು ತಮ್ಮ ಮುಬಲ್ಲಿಗ್‌ರಿಂದ ವಾಗ್ದಾನ ಪಡೆದುಕೊಂಡು ಹೋಗಿದ್ದಾರೆ’.

ಬೊಲಿವಿಯಾದ ಪತ್ರಕರ್ತ ಗೈಡರ್ ಗೈನ್ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹೇಳುತ್ತಾರೆ: ‘ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಲ್ಸ ಸಾಲಾನಾದಲ್ಲಿ ಭಾಗವಹಿಸುವುದು ನನಗೆ ಅದ್ಭುತ ಅನುಭವವಾಗಿತ್ತು. ಅದೇ ರೀತಿ ನಾನು ಭಾಷಣಗಳಿಂದ ಬಹಳ ಪ್ರಭಾವಿತನಾದೆ, ಜಮಾಅತಿನ ಇಮಾಮ್‌ರ ಭಾಷಣದಿಂದ ಪ್ರಭಾವಿತನಾದೆ. ಇದು ನಮ್ಮ ಜೀವನದಲ್ಲಿ ಶಾಶ್ವತವಾಗಿ ಅಚ್ಚೊತ್ತಿ ಉಳಿಯುವ ಮತ್ತು ನಮ್ಮ ಪ್ರಭುವಿಗೆ ಹತ್ತಿರವಾಗುವ ಹಾಗೂ ಅವನ ಕರುಣೆಯನ್ನು ಪಡೆಯುವ ಮಾರ್ಗವನ್ನು ನಮಗೆ ತೋರಿಸುವ ಜಲ್ಸವಾಗಿತ್ತು. ಅಲ್ಲಾಹನು ಅವರಿಗೆ ಇಸ್ಲಾಮಿನ ಸಂದೇಶವನ್ನು ಸ್ವೀಕಾರ ಮಾಡುವ ಸೌಭಾಗ್ಯವನ್ನು ಕರುಣಿಸಲಿ. ಅವರು ಹೇಳುತ್ತಾರೆ: ಹಲವು ವರ್ಷಗಳಿಂದ, ಮುಸ್ಲಿಂ ಮಹಿಳೆ ಶೋಷಿತಳಾಗಿದ್ದಾಳೆ ಮತ್ತು ಒತ್ತಡದಲ್ಲಿದ್ದಾಳೆ ಎಂದು ತಪ್ಪಾಗಿ ಪ್ರಚಾರ ಮಾಡಲಾಗುತ್ತಿದೆ, ಆದರೆ ಅದು ಸಂಪೂರ್ಣ ಸುಳ್ಳು. ಇದಕ್ಕೆ ವ್ಯತಿರಿಕ್ತವಾಗಿ, ಇಸ್ಲಾಮಿನಲ್ಲಿ ಮಹಿಳೆಗೆ ನೀಡಲಾಗುವ ಗೌರವ, ರಕ್ಷಣೆ ಮತ್ತು ಪ್ರಾಮುಖ್ಯತೆಯಿಂದ ನಾನು ಬಹಳ ಪ್ರಭಾವಿತನಾಗಿದ್ದೇನೆ ಎಂಬುದನ್ನು ಸ್ವತಃ ನೋಡುವ ಅವಕಾಶ ನನಗೆ ಸಿಕ್ಕಿತು’.

ಕೊಸೊವೊದಿಂದ ಆವ್ನಿ ಜಾಶರಿ ಸಾಹಿಬ್, ಪ್ರಸ್ತುತ ಅಲಿಜಾನ್‌ನ ಕ್ಯಾಬಿನೆಟ್ ಮುಖ್ಯಸ್ಥರಾಗಿದ್ದಾರೆ, ಅವರು ಹೇಳುತ್ತಾರೆ: ‘ಜಮಾಅತಿನ ಇಮಾಮ್‌ರ ಭಾಷಣವನ್ನು ಕೇಳುವ ಅವಕಾಶ ಸಿಕ್ಕಿತು. ಜಲ್ಸ ಪ್ರಾರಂಭವಾಗುವ ಮೊದಲು ಅವರು ಸ್ವಯಂಸೇವಕರಿಗೆ, ಅತಿಥಿಗಳ ಸೇವೆಯನ್ನು ಒಂದು ದೊಡ್ಡ ಜವಾಬ್ದಾರಿಯೆಂದು ಪರಿಗಣಿಸಿ ಪ್ರೀತಿ, ವಿನಯ, ಪ್ರಾಮಾಣಿಕತೆ ಮತ್ತು ಅತ್ಯುತ್ತಮ ನೈತಿಕತೆಯೊಂದಿಗೆ ನಿರ್ವಹಿಸಿ ಎಂದು ಉಪದೇಶಿಸಿದ್ದರು. (ಇದು ಗುರುವಾರ ರಾತ್ರಿ ನಡೆದ ಘಟನೆ). ಆ ಸಮಯದಲ್ಲಿ ನನಗೆ ಈ ಉಪದೇಶ ಬಹಳ ಇಷ್ಟವಾಯಿತು, ಆದರೆ ಮರುದಿನವೇ ಇದರ ಪ್ರಾಯೋಗಿಕ ಮಾದರಿಯನ್ನು ನನ್ನ ಕಣ್ಣಾರೆ ನೋಡುತ್ತೇನೆ ಎಂದು ನಾನು ಊಹಿಸಿರಲಿಲ್ಲ. ನನ್ನ ಆರೋಗ್ಯ ದಿಢೀರನೆ ಹದಗೆಟ್ಟಿತು. ತಲೆತಿರುಗಲು ಪ್ರಾರಂಭವಾಯಿತು, ವಾಂತಿಯಾಗಲು ಪ್ರಾರಂಭವಾಯಿತು. ತಕ್ಷಣವೇ ಪ್ರಥಮ ಚಿಕಿತ್ಸಾ ಸಿಬ್ಬಂದಿ ನನ್ನನ್ನು ನೋಡಿದರು, ಆರು ವೈದ್ಯರು ನನ್ನ ಸುತ್ತಲೂ ಸೇರಿದರು. ನನ್ನ ಸ್ವಂತ ಮನೆಯಲ್ಲಿರುವಂತೆ ನನಗೆ ಭಾಸವಾಯಿತು. ಖಲೀಫತುಲ್ ಮಸೀಹ್‌ರ ಆದೇಶಗಳು ಕೇವಲ ಮಾತುಗಳಾಗಿರಲಿಲ್ಲ, ಬದಲಾಗಿ ಪ್ರತಿಯೊಬ್ಬ ಸ್ವಯಂಸೇವಕನ ಪ್ರಾಯೋಗಿಕ ಜೀವನದ ಭಾಗವಾಗಿವೆ ಎಂದು ಆ ಕ್ಷಣದಲ್ಲಿ ನನಗೆ ಅನಿಸಿತು’.

ಜಪಾನ್‌ನಿಂದ ಹಿರೋಯುಕಿ ಇವಾಮೋಟೊ ಸಾಹಿಬ್ ಹೇಳುತ್ತಾರೆ: ‘ಇದು ನಮಗೆ ಬಹಳ ಸ್ಮರಣೀಯ ಪ್ರವಾಸವಾಗಿತ್ತು. ಜಲ್ಸದ ವಾತಾವರಣವು ಪ್ರೀತಿ ಮತ್ತು ಆಧ್ಯಾತ್ಮಿಕತೆಯಿಂದ ತುಂಬಿರುವುದನ್ನು ನಾವು ಅನುಭವಿಸಿದೆವು. ಸೇವೆ ಸಲ್ಲಿಸುತ್ತಿದ್ದ ಕಾರ್ಯಕರ್ತರ ಉತ್ಸಾಹ, ನೀರುಣಿಸುತ್ತಿದ್ದ ಮಕ್ಕಳ ಸೇವಾ ಮನೋಭಾವ, ಮತ್ತು ಖಿಲಾಫತ್‌ನೊಂದಿಗೆ ಜಮಾಅತಿನ ನಂಟು ಹಾಗೂ ಅವರನ್ನು ನೋಡುವ ತುಡಿತ, ಇದು ಬಹಳ ಅದ್ಭುತ ಅನುಭವವಾಗಿತ್ತು’.

ಇನ್ನೊಬ್ಬ ಸ್ನೇಹಿತ ಲೆಬನಾನ್‌ನವರಾಗಿದ್ದು, ಬೆಲ್ಜಿಯಂನಲ್ಲಿ ವಾಸಿಸುತ್ತಿದ್ದಾರೆ. ಅವರು ಹೇಳುತ್ತಾರೆ: ‘ನಾನು ರಾಜತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುವುದರಿಂದ, ಪ್ರಪಂಚದಾದ್ಯಂತ ದೊಡ್ಡ ದೊಡ್ಡ ಸಭೆಗಳು ನಡೆಯುವ ವಿವಿಧ ಸ್ಥಳಗಳಿಗೆ ಹೋಗುತ್ತೇನೆ. ಅದು ಕತಾರ್ ಆಗಿರಲಿ, ಬ್ರಸೆಲ್ಸ್ ಆಗಿರಲಿ ಅಥವಾ ಬೇರೆ ಯಾವುದೇ ದೊಡ್ಡ ಸ್ಥಳಗಳಾಗಿರಲಿ, ಆದರೆ ನಾನು ಎಲ್ಲೂ ಈ ಜಲ್ಸದಷ್ಟು ದೊಡ್ಡ ಮತ್ತು ವ್ಯವಸ್ಥಿತ ಕಾರ್ಯಕ್ರಮವನ್ನು ನೋಡಿಲ್ಲ. ಐವತ್ತು ಸಾವಿರಕ್ಕೂ ಹೆಚ್ಚು ಜನರಿದ್ದರೂ ಯಾರೂ ಯಾರನ್ನೂ ತಳ್ಳುತ್ತಿಲ್ಲ, ಯಾರೂ ಬೈಯುತ್ತಿಲ್ಲ. ಪ್ರತಿಯೊಬ್ಬರೂ ಗೌರವ ಮತ್ತು ಪ್ರೀತಿಯಿಂದ ಭೇಟಿಯಾಗುತ್ತಿದ್ದಾರೆ ಮತ್ತು ಇಸ್ಲಾಮಿನ ಸಹೋದರತ್ವದ ಬೋಧನೆಯನ್ನು ನಾನು ಪ್ರಾಯೋಗಿಕವಾಗಿ ಇಲ್ಲಿ ನೋಡಿದ್ದೇನೆ. ಅದೇ ರೀತಿ ಪವಿತ್ರ ಖುರ್‌ಆನಿನ ಬೋಧನೆಯಾದ “ಧರ್ಮದಲ್ಲಿ ಯಾವುದೇ ಬಲವಂತವಿಲ್ಲ” ಎಂಬುದು ನನಗೆ ಇಲ್ಲಿ ಜಲ್ಸದಲ್ಲಿ ಪ್ರಾಯೋಗಿಕವಾಗಿ ಕಂಡುಬಂದಿದೆ. ಇಲ್ಲಿ ಇತರ ಧರ್ಮಗಳವರೂ ಬರುತ್ತಿದ್ದಾರೆ, ಇಲ್ಲಿ ವಾಸಿಸುತ್ತಿದ್ದಾರೆ, ಅವರಿಗೂ ಗೌರವ ನೀಡಲಾಗುತ್ತಿದೆ ಮತ್ತು ಅವರು ಸಂತೋಷದಿಂದ ಮುಕ್ತವಾಗಿ ತಿರುಗಾಡುತ್ತಿದ್ದಾರೆ’.

ಅರ್ಜೆಂಟೀನಾದಿಂದ ಸರ್ಜಿಯೋ ರುಬಿನ್ ಕೂಡ ಇಲ್ಲಿ ಪಾಲ್ಗೊಂಡಿದ್ದರು. ಅವರು ದೇಶದ ಅತಿ ಪ್ರಮುಖ ರಾಷ್ಟ್ರೀಯ ಪತ್ರಿಕೆ ‘ಕ್ಲಾರಿನ್’ನಲ್ಲಿ ಧಾರ್ಮಿಕ ವ್ಯವಹಾರಗಳ ಮುಖ್ಯ ಸಂಪಾದಕರಾಗಿದ್ದಾರೆ. ಅವರು ಹೇಳುತ್ತಾರೆ: ‘ಇಲ್ಲಿಗೆ ಬರುವ ಮುನ್ನ ನಾನು ಈ ಜಲ್ಸದಲ್ಲಿ ಭಾಗವಹಿಸುವ ಬಗ್ಗೆ ನನ್ನ ಪತ್ರಿಕೆಗೆ ಮಾಹಿತಿ ನೀಡಿದಾಗ, ಇಸ್ಲಾಮ್ ವಿರುದ್ಧವಿರುವ ಸಾಮಾನ್ಯ ಪೂರ್ವಾಗ್ರಹಗಳ ಆಧಾರದ ಮೇಲೆ ನನ್ನ ಅನೇಕ ಸಹೋದ್ಯೋಗಿಗಳು ನನ್ನ ನಿರ್ಧಾರವನ್ನು ಮರುಪರಿಶೀಲಿಸುವಂತೆ ಸಲಹೆ ನೀಡಿದರು. ಏನೇ ಆಗಲಿ, ಜಲ್ಸದ ವಾತಾವರಣವನ್ನು ನಾನು ನೇರವಾಗಿ ಗಮನಿಸಿದಾಗ, ಇಸ್ಲಾಮ್ ಒಂದು ಶಾಂತಿಯುತ ಧರ್ಮ ಎಂಬುದಕ್ಕೆ ನಿಮ್ಮ ಜಮಾಅತ್ ಸ್ವತಃ ಉತ್ತಮ ಸಾಕ್ಷಿಯಾಗಿದೆ ಮತ್ತು ನಿಮ್ಮ ಜಲ್ಸದ ಈ ಶಾಂತಿಯುತ ವಾತಾವರಣವು ಅದಕ್ಕೆ ಸಾಕ್ಷಿಯಾಗಿದೆ. ಇಷ್ಟೊಂದು ದೊಡ್ಡ ಮತ್ತು ವಿಸ್ತಾರವಾದ ಜನಸಮೂಹವಿದ್ದರೂ ಎಲ್ಲೆಡೆ ಶಾಂತಿ ಮತ್ತು ಭದ್ರತೆಯ ವಾತಾವರಣವಿತ್ತು. ವೀಕ್ಷಕರಿಗೂ ಈ ವಾತಾವರಣವನ್ನು ತೋರಿಸಲು ಮತ್ತು ಇಸ್ಲಾಮ್ ಶಾಂತಿ ಮತ್ತು ಭದ್ರತೆಯ ಧರ್ಮ ಎಂಬುದನ್ನು ಒತ್ತಿಹೇಳಲು ಜಲ್ಸದ ಕೊನೆಯ ದಿನ ಅವರು ‘ಟಿಎನ್’ ಟಿವಿ ಚಾನೆಲ್‌ನಲ್ಲಿ ಜಲ್ಸದ ನೇರ ಪ್ರಸಾರವನ್ನು ಮಾಡಿದರು ಮತ್ತು ಜಮಾಅತನ್ನು ಉದಾಹರಣೆಯಾಗಿ ಪ್ರಸ್ತುತಪಡಿಸಿದೆವು ಎಂದು ಅವರು ಹೇಳುತ್ತಾರೆ. ಅವರು ಸ್ವತಃ ಕ್ಯಾಥೋಲಿಕ್ ಆಗಿದ್ದಾರೆ ಮತ್ತು ಹೇಳುತ್ತಾರೆ, ‘ಖಲೀಫರು ಜಲ್ಸದ ಉದ್ಘಾಟನಾ ಭಾಷಣದಲ್ಲಿ ದೇವಭಯದ ಬಗ್ಗೆ ಮಾತನಾಡಿದ್ದು ನನಗೆ ಇಷ್ಟವಾಯಿತು, ಇದು ಪ್ರತಿಯೊಂದು ಧರ್ಮದ ಮೂಲವಾಗಿದೆ. ಕ್ರೈಸ್ತನಾಗಿ ಈ ಅಂಶದ ಕುರಿತು ನನ್ನ ಜ್ಞಾನ ಮತ್ತು ಅರಿವನ್ನು ಬಹಳಷ್ಟು ಹೆಚ್ಚಿಸಿಕೊಳ್ಳಲು ನನಗೆ ಅವಕಾಶ ಸಿಕ್ಕಿತು’.

ಲಿಥುವೇನಿಯಾದಿಂದ ಸ್ವೆಟ್ಲಾನಾ ಮಾರ್ಕೆವಿಚೆನ್ ಸಾಹಿಬಾ ಹೇಳುತ್ತಾರೆ: ‘ಜಲ್ಸ ಸಾಲಾನಾದ ಸಂದರ್ಭದಲ್ಲಿ ಮುಸ್ಲಿಮರೊಂದಿಗೆ ಬೆರೆತು ಅವರ ನಡವಳಿಕೆಗಳನ್ನು ಹತ್ತಿರದಿಂದ ನೋಡುವ ಅವಕಾಶ ಸಿಕ್ಕಿತು ಮತ್ತು ಬಹಳಷ್ಟು ಹೊಸ ವಿಷಯಗಳನ್ನು ಕಲಿತೆ. ಮಹಿಳೆಯರನ್ನು ಉದ್ದೇಶಿಸಿ ಜಮಾಅತಿನ ಇಮಾಮ್‌ರ ಭಾಷಣವನ್ನು ಕೇಳಿದಾಗ ಇಸ್ಲಾಮಿನಲ್ಲಿ ಮಹಿಳೆಯ ಸ್ಥಾನಮಾನದ ಬಗ್ಗೆ ನನಗಿದ್ದ ಅನೇಕ ತಪ್ಪು ಕಲ್ಪನೆಗಳು ದೂರವಾದವು. ಇಸ್ಲಾಮ್ ಮಹಿಳೆಗೆ ಗೌರವ, ರಕ್ಷಣೆ ಮತ್ತು ಆಕೆಯ ಮೂಲಭೂತ ಹಕ್ಕುಗಳನ್ನು ಕಲಿಸುತ್ತದೆ ಎಂದು ತಿಳಿದು ಸಂತೋಷವಾಯಿತು. ಭಾಷಣವು ಅತ್ಯಂತ ಸಮತೋಲಿತ, ತಾರ್ಕಿಕ ಮತ್ತು ಹೃದಯವನ್ನು ಸ್ಪರ್ಶಿಸುವಂತಿತ್ತು, ಇದು ಇಸ್ಲಾಮಿನ ಬಗ್ಗೆ ಇನ್ನಷ್ಟು ಸಕಾರಾತ್ಮಕವಾಗಿ ಯೋಚಿಸಲು ನನಗೆ ಅವಕಾಶ ಕಲ್ಪಿಸಿತು’.

ಸ್ವಿಟ್ಜರ್ಲೆಂಡ್‌ನಿಂದ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಲಹೆಗಾರ್ತಿ ಜೂಲಿಯಾ ಪೆರ್ಟಿಸಿ ಹೇಳುತ್ತಾರೆ: ‘ನನಗೆ ಇದು ವಿಶಿಷ್ಟ ಅನುಭವವಾಗಿತ್ತು ಮತ್ತು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಮೂಲಕ ನನಗೆ ಮೊದಲೇ ಸೀಮಿತ ಮಾಹಿತಿ ಇದ್ದ ಧಾರ್ಮಿಕ ಸಮುದಾಯವೊಂದನ್ನು ಹತ್ತಿರದಿಂದ ನೋಡುವ ಮತ್ತು ಅರ್ಥಮಾಡಿಕೊಳ್ಳುವ ಅವಕಾಶ ಸಿಕ್ಕಿತು. ಸ್ವಯಂಸೇವಕರು ಮತ್ತು ಪಾಲ್ಗೊಳ್ಳುವವರ ಆತಿಥ್ಯ, ಸೌಜನ್ಯ ಮತ್ತು ಸಹಕಾರ ನನ್ನನ್ನು ಬಹಳ ಪ್ರಭಾವಿಸಿತು. ಪ್ರತಿಯೊಬ್ಬರೂ ಅತ್ಯಂತ ಹಸನ್ಮುಖರಾಗಿ ಭೇಟಿಯಾಗುತ್ತಿದ್ದರು, ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು ಮತ್ತು ನಮಗೆ ಪ್ರಶ್ನೆಗಳಿಗೆ ಉತ್ತರಿಸಲು ಸದಾ ಸಿದ್ಧರಿದ್ದರು. ಇದರಿಂದಾಗಿ ನನಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಇತಿಹಾಸ, ಸಂಪ್ರದಾಯಗಳು ಮತ್ತು ಮೂಲ ಮೌಲ್ಯಗಳನ್ನು ಉತ್ತಮ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಅವಕಾಶ ಸಿಕ್ಕಿತು. ಅವರು ವಿವಿಧ ಪ್ರದರ್ಶನಗಳನ್ನೂ ಶ್ಲಾಘಿಸಿದ್ದಾರೆ, ಅವು ಬಹಳ ಆಸಕ್ತಿದಾಯಕ ಪ್ರದರ್ಶನಗಳಾಗಿದ್ದವು, ಇದರಲ್ಲಿ

ಇತಿಹಾಸ, ಮಾನವೀಯತೆಯ ಸೇವಾ ಯೋಜನೆಗಳು ಮತ್ತು ಪ್ರತಿಯೊಂದು ಕ್ಷೇತ್ರದಲ್ಲೂ ಅದರ ಸೇವೆಗಳನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಲಾಗಿತ್ತು. ಮಹಿಳೆಯರ ಪಾತ್ರಕ್ಕೆ ಸಂಬಂಧಿಸಿದ ಪ್ರದರ್ಶನವು ನನಗೆ ವಿಶೇಷವಾಗಿ ಮಾಹಿತಿದಾಯಕವಾಗಿತ್ತು, ಏಕೆಂದರೆ ಇದು ಜಮಾಅತಿನ ದೃಷ್ಟಿಕೋನದಿಂದ ಈ ವಿಷಯವನ್ನು ಅರ್ಥಮಾಡಿಕೊಳ್ಳಲು ಅವಕಾಶ ಕಲ್ಪಿಸಿತು'.

ಇಟಲಿಯ ಟುರಿನ್‌ನಿಂದ ಪ್ರೊಫೆಸರ್ ಫೆಡೆರಿಕಾ ಸೋನಾ ಸಾಹಿಬಾ ಹೇಳುತ್ತಾರೆ: 'ಜಲ್ಸ ಸಾಲಾನಾದಲ್ಲಿ ಅವರು ದೂರದೃಷ್ಟಿ ಮತ್ತು ಆಧ್ಯಾತ್ಮಿಕತೆಯ ಸುಂದರ ಸಂಗಮವನ್ನು ಕಂಡರು. ವೈಚಾರಿಕ ದೃಷ್ಟಿಕೋನದಿಂದ ನೋಡಿದಾಗ, ಸಂಪೂರ್ಣ ವ್ಯವಸ್ಥೆಯು ಎಷ್ಟೊಂದು ಸುಗಮವಾಗಿ ನಡೆಯುತ್ತಿತ್ತು ಎಂಬುದು ಆಶ್ಚರ್ಯಕರವಾಗಿತ್ತು. ಗಾಳಿಯು ತನ್ನೊಂದಿಗೆ ಕೊಂಡೊಯ್ಯುತ್ತಿರುವಂತಿತ್ತು. ನೀರುಣಿಸುವ ಕರ್ತವ್ಯದಲ್ಲಿದ್ದ ಚಿಕ್ಕ ಸ್ವಯಂಸೇವಕನಿಂದ ಹಿಡಿದು ವಯಸ್ಸಾದ ಕಾರ್ಯಕರ್ತರ ವರೆಗೆ ಎಲ್ಲರಲ್ಲೂ ಪ್ರಾಮಾಣಿಕತೆ, ಆತಿಥ್ಯ, ಸೌಜನ್ಯ ಮತ್ತು ನಗು ಸಾಮಾನ್ಯವಾಗಿತ್ತು. ಭಾವನಾತ್ಮಕವಾಗಿ, ಒಂದು ದೊಡ್ಡ ಅಂತರರಾಷ್ಟ್ರೀಯ ಕುಟುಂಬಕ್ಕೆ ಸ್ವಾಗತಿಸುತ್ತಿರುವಂತೆ ನನಗೆ ಭಾಸವಾಯಿತು. ಅತಿಥಿಯನ್ನು ಸಂತೋಷದಿಂದ ಸ್ವಾಗತಿಸಲಾಗುತ್ತದೆ ಮತ್ತು ಕಾಳಜಿ ಹಾಗೂ ಪ್ರೀತಿಯಿಂದ ಉಪಚರಿಸಲಾಗುತ್ತದೆ. ನನ್ನ ಭೇಟಿಯಾದ ಅನೇಕ ಪುರುಷರು, ಮಹಿಳೆಯರು ಮತ್ತು ಮಕ್ಕಳು ತಮ್ಮ ನಗುವನ್ನು ಹಂಚಿಕೊಂಡರು, ದಾರಿ ಹುಡುಕಲು ಸಹಾಯ ಮಾಡಿದರು, ತಮ್ಮ ಜೀವನದ ಅನುಭವಗಳನ್ನು, ಕೆಲವೊಮ್ಮೆ ನೋವಿನ, ಕೆಲವೊಮ್ಮೆ ಸಂತೋಷದ, ಮತ್ತು ಕೆಲವೊಮ್ಮೆ ಜ್ಞಾನೋದಯದ ಅನುಭವಗಳನ್ನು ಹಂಚಿಕೊಂಡರು. ವಿಶೇಷವಾಗಿ ಆಧ್ಯಾತ್ಮಿಕ ಮತ್ತು ಸೂಕ್ಷ್ಮ ಅಂಶಗಳನ್ನು ಪ್ರಸ್ತಾಪಿಸುತ್ತಾ ಅವರು ಹೇಳುತ್ತಾರೆ, ಸ್ಪಷ್ಟ ಕನಸುಗಳಲ್ಲಿನ ಮುನ್ಸೂಚನೆಗಳಂತಹ ಘಟನೆಗಳನ್ನು ಕೆಲವು ಸ್ನೇಹಿತರು ಅವರೊಂದಿಗೆ ಹಂಚಿಕೊಂಡಿದ್ದು ಅವರಿಗೇ ಬಹಳ ಪ್ರಭಾವ ಬೀರಿದೆ. ಈ ಜಮಾಅತ್ ಭೌಗೋಳಿಕ ಗಡಿಗಳನ್ನು ಮೀರಿದ ಒಂದು ದೊಡ್ಡ ಮತ್ತು ಒಗ್ಗಟ್ಟಿನ ಕುಟುಂಬವಾಗಿದೆ'.

ರೋಮ್‌ನಲ್ಲಿ ಧರ್ಮಗಳ ಸಮಾಜಶಾಸ್ತ್ರ ವಿದ್ವಾಂಸರಾಗಿರುವ ಐಡಿನ್ ಸಾಹಿಬ್ ಹೇಳುತ್ತಾರೆ: 'ಮೊದಲನೆಯದಾಗಿ ಕಣ್ಣಿಗೆ ಬೀಳುವುದೇನೆಂದರೆ, ಇಷ್ಟೊಂದು ಕೋಮುಗಳು, ಭಾಷೆಗಳು ಮತ್ತು ಸಂಸ್ಕೃತಿಗಳು ಒಂದೇ ಸ್ಥಳದಲ್ಲಿ ಸೇರಿವೆ. ವಿವಿಧ ದೇಶಗಳ ಧ್ವಜಗಳನ್ನು ಜಮಾಅತಿನ ಧ್ವಜದೊಂದಿಗೆ ಹಾರಿಸುವ ಸಮಾರಂಭವು ಈ ಅಂತರರಾಷ್ಟ್ರೀಯ ಒಗ್ಗಟ್ಟನ್ನು ಎತ್ತಿ ತೋರಿಸುತ್ತದೆ, ಅಂದರೆ ವಿವಿಧ ರಾಷ್ಟ್ರಗಳು ತಮ್ಮ ವೈಶಿಷ್ಟ್ಯಗಳನ್ನು ಕಳೆದುಕೊಳ್ಳದೆ ಒಟ್ಟಿಗೆ ವಾಸಿಸುವ ಒಂದು ಸಣ್ಣ ಪ್ರಪಂಚ. ಧಾರ್ಮಿಕ ಸಮಾಜಶಾಸ್ತ್ರದ ವಿದ್ಯಾರ್ಥಿಯಾಗಿ, ಒಂದು ಧಾರ್ಮಿಕ ಜಮಾಅತ್ ಸ್ಥಳೀಯ ಗುರುತು ಮತ್ತು ಜಾಗತಿಕ ಒಗ್ಗಟ್ಟನ್ನು ಹೇಗೆ ಒಟ್ಟಿಗೆ ಕೊಂಡೊಯ್ಯಬಲ್ಲದು ಎಂಬುದನ್ನು ನೋಡುವ ಅವಕಾಶ ಸಿಕ್ಕಿತು. ಅದೇ ರೀತಿ ಅವರು ಆತಿಥ್ಯವನ್ನು ಬಹಳವಾಗಿ ಶ್ಲಾಘಿಸಿದರು, ಕಾರ್ಯಕರ್ತರನ್ನು ಬಹಳವಾಗಿ ಹೊಗಳಿದರು'.

ಕೆನಡಾದ ಸ್ಟೋನಿ ನಕೋಡಾ ಫಸ್ಟ್ ನೇಷನ್‌ನಿಂದ ಬಂದವರ ಹೆಸರು ರಾವೆಂಟೋನಿ ಸ್ನೋ ಸಾಹಿಬ್. ಅವರು ಹೇಳುತ್ತಾರೆ: 'ಇಷ್ಟೊಂದು ದೊಡ್ಡ ಮತ್ತು ವಿಸ್ತಾರವಾದ ಸಮ್ಮೇಳನವನ್ನು ನೋಡುವುದು ನನಗೆ ಬಹಳ ಆಸಕ್ತಿದಾಯಕವಾಗಿತ್ತು. ಇಲ್ಲಿ ಅತ್ಯುತ್ತಮ ವ್ಯವಸ್ಥೆಗಳನ್ನು ಮಾಡಲಾಗಿತ್ತು ಮತ್ತು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸಗಳನ್ನು ನಡೆಸಲು ಸಂಪೂರ್ಣ ಪ್ರಯತ್ನ ಮಾಡುತ್ತಿದ್ದನು. ಈ ಕೆಲಸ ಸುಲಭವಲ್ಲ, ಆದರೆ ಯಾವ ಉತ್ಸಾಹದಿಂದ ಈ ಕೆಲಸ ನಡೆಯುತ್ತಿತ್ತೋ, ಅದರಿಂದ ನಾನು ಬಹಳ ಪ್ರಭಾವಿತನಾಗಿದ್ದೇನೆ'.

ಟರ್ಕಿಯ ಅಹ್ಮದಿಯೇತರ ಅತಿಥಿ, ಡಿಕ್ಲೆ ವಿಶ್ವವಿದ್ಯಾಲಯದ ಪ್ರೊಫೆಸರ್ ಆಗಿರುವ ಪ್ರೊಫೆಸರ್ ಮೆಟಿನ್ ಬೊಜಾನ್ ಸಾಹಿಬ್, ಇಸ್ಲಾಮಿನ ಧರ್ಮಗಳ ಇತಿಹಾಸ ವಿಭಾಗದ ಮುಖ್ಯಸ್ಥರಾಗಿದ್ದಾರೆ ಮತ್ತು ತಮ್ಮ ಮೇಲ್ವಿಚಾರಣೆಯಲ್ಲಿ ಜಮಾಅತಿನ ಬಗ್ಗೆ ವಿದ್ಯಾರ್ಥಿಗಳಿಂದ ಪ್ರಬಂಧಗಳನ್ನು (ಥೀಸಿಸ್) ಬರೆಸಿದ್ದಾರೆ. ಅವರು ಹೇಳುತ್ತಾರೆ: 'ಜಲ್ಸದ ಪ್ರತಿಯೊಂದು ವ್ಯವಸ್ಥೆ ಮತ್ತು ಪ್ರತಿಯೊಂದು ಕೆಲಸದಲ್ಲೂ ಸಂಪೂರ್ಣ ಶಿಸ್ತು ಕಂಡುಬಂದಿತು. ನಮ್ಮ ಮೂಲಭೂತ ಸಿದ್ಧಾಂತವೇನೆಂದರೆ, ಯಾರು ಅಲ್ಲಾಹನನ್ನು, ಪ್ರವಾದಿಯನ್ನು ಮತ್ತು ಪರಲೋಕದಂತಹ ಈಮಾನಿನ ಷರತ್ತುಗಳು ಹಾಗೂ ಇಸ್ಲಾಮಿನ ಷರತ್ತುಗಳನ್ನು ನಂಬುತ್ತಾನೋ, ನಾವು ಅವನನ್ನು ಮುಸ್ಲಿಮನೆಂದು ಪರಿಗಣಿಸುತ್ತೇವೆ ಮತ್ತು ಅವನನ್ನು ಕಾಫಿರ್ ಎಂದು ಕರೆಯುವುದು ಸೂಕ್ತವಲ್ಲ ಎಂದು ಭಾವಿಸುತ್ತೇವೆ. ಆದ್ದರಿಂದ ನಮ್ಮ ದೃಷ್ಟಿಯಲ್ಲಿ ಅಹ್ಮದಿಯರೂ ಮುಸ್ಲಿಮರು.

ಪಾಕಿಸ್ತಾನಿ ಮೌಲ್ವಿಗಳಿಗೆ ಈ ಮಾತು ಅರ್ಥವಾದರೆ ಎಷ್ಟು ಚೆನ್ನಾಗಿತ್ತು. ನಂತರ ಅವರು, ಜಮಾಅತಿನ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗಾಗಿನ ಪ್ರಯತ್ನಗಳನ್ನು ನಾನು ಬಹಳ ಪ್ರಶಂಸಿಸುತ್ತೇನೆ ಎಂದರು. ಅದೇ ರೀತಿ ಅವರು ಪ್ರತಿಯೊಂದು ಸ್ಥಳದಲ್ಲೂ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆಯನ್ನು ನೋಡಿದರು ಮತ್ತು ಜಮಾಅತಿನಲ್ಲಿ ಇಸ್ಲಾಮಿನ ಪರ್ದಾದ ಬೋಧನೆಯ ಬಗ್ಗೆ ವಿಶೇಷ ಕಾಳಜಿ ವಹಿಸಲಾಗುತ್ತದೆ ಎಂಬ ತೀರ್ಮಾನಕ್ಕೆ ಬಂದರು'.

ಫ್ರಾನ್ಸ್‌ನಿಂದ ಬಂದಿದ್ದ ಥಿಯೆರಿ ವ್ಯಾಲೆ ಸಾಹಿಬ್, ಅವರು 'ಫ್ರೀಡಂ ಕಾನ್ಷಿಯಸ್' ಎಂಬ ಸಮನ್ವಯ ಸಂಘದ (ಕೋಆರ್ಡಿನೇಷನ್ ಅಸೋಸಿಯೇಷನ್) ಅಧ್ಯಕ್ಷರಾಗಿದ್ದಾರೆ. ಅವರು ಹೇಳುತ್ತಾರೆ: 'ದೋಷರಹಿತ ವ್ಯವಸ್ಥೆಗಳಿದ್ದವು, ಶಾಂತಿಯುತ ವಾತಾವರಣವಿತ್ತು, ಬಹಳ ನೆಮ್ಮದಿಯಿತ್ತು. ಜಮಾಅತಿನ ಇಮಾಮ್‌ರ ಸಮಾರೋಪ ಭಾಷಣವು ನಿಜಕ್ಕೂ ಒಂದು ದೊಡ್ಡ ಮಾರ್ಗದರ್ಶಕ ಮತ್ತು ಹೃದಯವನ್ನು ಸ್ಪರ್ಶಿಸುವಂತಿತ್ತು. ನಾವು ನಮಗಾಗಿ ಹೊಂದಿಸಿಕೊಳ್ಳಬೇಕಾದ ಉನ್ನತ ಮಾನದಂಡಗಳನ್ನು ಅದು ನಮಗೆ ನೆನಪಿಸಿತು ಮತ್ತು ನಾವೆಲ್ಲರೂ ನಿರ್ಮಿಸಲು ಶ್ರಮಿಸಬೇಕಾದ ಶಾಂತಿಯುತ ಪ್ರಪಂಚದ ಅರಿವನ್ನು ಮೂಡಿಸಿತು. ನಾನು ಬಹಳ ಕೃತಜ್ಞತೆ ಸಲ್ಲಿಸುತ್ತೇನೆ, ಅಹ್ಮದಿಯಾ ಜಮಾಅತ್ ಪ್ರಪಂಚದಲ್ಲಿ ನೀಡುವ ಶಾಂತಿ, ಪ್ರೀತಿ ಮತ್ತು ಸಹೋದರತ್ವದ ಸಂದೇಶದ ಪ್ರಾಯೋಗಿಕ ಪುರಾವೆಯನ್ನು ನಾನು ಇಲ್ಲಿಗೆ ಬಂದು ನೂರು ದೇಶಗಳಿಗಿಂತಲೂ ಹೆಚ್ಚು ಜನರು ಒಂದು ಹೂಗುಚ್ಛದಂತೆ ಸೇರಿರುವ ರೂಪದಲ್ಲಿ ನೋಡಿದೆ ಮತ್ತು ಆ ಸುವಾಸನೆಯನ್ನು ನಾನೇ ಸ್ವತಃ ಅನುಭವಿಸಿದೆ ಎಂಬ ಅರಿವು ನನಗಾಯಿತು'.

ಬೆಲ್ಜಿಯಂನಿಂದ ಒಬ್ಬ ಪತ್ರಕರ್ತರಿದ್ದಾರೆ, ಅವರು ಹೇಳುತ್ತಾರೆ: 'ನಾನು ಮೊದಲೂ ಪಾಲ್ಗೊಂಡಿದ್ದೇನೆ, ಆದರೆ ಈ ವರ್ಷ ಜಮಾಅತಿನ ಇಮಾಮ್‌ರು ಮಹಿಳೆಯರನ್ನು ಉದ್ದೇಶಿಸಿ ಮಾಡಿದ ಭಾಷಣದಿಂದ ನಾನು ಪ್ರಭಾವಿತನಾಗಿದ್ದೇನೆ. ಅದರಲ್ಲಿ ಮಹಿಳೆಯರಿಗೆ ಧಾರ್ಮಿಕ ಜ್ಞಾನವನ್ನು ಮಾತ್ರವಲ್ಲದೆ ಲೌಕಿಕ ಜ್ಞಾನವನ್ನೂ ಪಡೆಯಲು ಮತ್ತು ಲೋಕದ ಪ್ರತಿಯೊಂದು ಕ್ಷೇತ್ರದಲ್ಲೂ ಮುಂದುವರಿಯಲು ಪ್ರೋತ್ಸಾಹಿಸಲಾಯಿತು'.

ಅದೇ ರೀತಿ ಜಪಾನ್‌ನ ಪ್ರೊಫೆಸರ್ ಮಿನೆಸಾಕಿ ಹಿರೊಕೊ ಸಾಹಿಬಾ, ಅಹ್ಮದಿಯಾ ಜಮಾಅತಿನ ಬಗ್ಗೆ ಸಂಶೋಧನಾ ಪುಸ್ತಕವನ್ನೂ ಬರೆದಿದ್ದಾರೆ, ಅದಕ್ಕಾಗಿ ಅವರು ರಬ್ವಾಗೆ ಹೋದರು, ಖಾದಿಯಾನಿಗೂ ಹೋದರು ಮತ್ತು ವಿವಿಧ ಸ್ಥಳಗಳಿಗೂ ಹೋದರು. ಅವರಿಗೆ ಆಳವಾದ ಜ್ಞಾನವಿದೆ. ಅವರು ಹೇಳುತ್ತಾರೆ: 'ನನಗೆ ಜಲ್ಸದಲ್ಲಿ ಒಬ್ಬ ಜರ್ಮನ್ ಯುವಕ ಸಿಕ್ಕಿದ. ಅವನು ಇಂದೇ ಬೈಅತ್ ಮಾಡಿದ್ದನು. ನಾನು ಅವನಿಗೆ, ಬೈಅತ್ ಮಾಡುವತ್ತ ನಿನ್ನನ್ನು ಆಕರ್ಷಿಸಿದ್ದು ಯಾವುದು? ಎಂದು ಕೇಳಿದೆ. ಅವನು ಹೇಳಿದ, ಜಲ್ಸದ ವಾತಾವರಣ, ಅಹ್ಮದಿಯರ ಸಾಹೋದರ್ಯ ಮತ್ತು ಪರಸ್ಪರ ಪ್ರೀತಿಯೇ ನನ್ನನ್ನು ಪ್ರೇರೇಪಿಸಿದೆ. ಅದೇ ರೀತಿ ಅವರು ಡ್ಯೂಟಿಯಲ್ಲಿ ಮಾಡುವವರನ್ನು ಬಹಳವಾಗಿ ಹೊಗಳಿದ್ದಾರೆ'.

ಅದೇ ರೀತಿ ಆರ್ಚಿ ಸಾಹಿಬ್, ಇಂಡೋನೇಷಿಯಾದವರಾಗಿದ್ದು ಗ್ರೀಸ್‌ನಲ್ಲಿ ತಮ್ಮ ಗ್ರೀಕ್ ನವ ಮುಸ್ಲಿಂ ಅಹ್ಮದಿಯೇತರ ಪತ್ನಿಯೊಂದಿಗೆ ವಾಸಿಸುತ್ತಿದ್ದಾರೆ. ಅವರು ಹೇಳುತ್ತಾರೆ: 'ಆಮಂತ್ರಣ ಸಿಕ್ಕಾಗ, ಇದೊಂದು ಆಧ್ಯಾತ್ಮಿಕ ಪ್ರಯಾಣವಾಗಿದೆ ಎಂದು ನಾನು ಭಾವಿಸಿದೆ. ಇದು ನನ್ನನ್ನು ಅಲ್ಲಾಹನಿಗೆ ಹತ್ತಿರ ತರುತ್ತದೆ, ಹಾಗಾಗಿ ನಾನು ಗ್ರೀಸ್ ಬಿಟ್ಟು ಇಲ್ಲಿಗೆ ಬಂದೆ. ಖಲೀಫತುಲ್ ಮಸೀಹ್‌ರ ಭಾಷಣಗಳು ನನ್ನ ಮೇಲೆ ಆಳವಾದ ಪ್ರಭಾವ ಬೀರಿದವು. ಜನರ ಸೇವೆ, ಕಾರ್ಯಕರ್ತರು ಮಾಡುತ್ತಿದ್ದ ಸೇವೆಯು ನನ್ನ ಮೇಲೆ ಆಳವಾದ ಪ್ರಭಾವ ಬೀರಿತು'.

ಲಾಟ್ವಿಯಾದ ಅತಿಥಿ ನಾರ್ಮುಂಡ್ಸ್ ಸನ್ಸ್, ಅವರು ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅವರ ಪ್ರಬಂಧದ ವಿಷಯ ಪಾಕಿಸ್ತಾನದಲ್ಲಿ ಅಹ್ಮದಿಯರ ವಿರುದ್ಧದ ದೌರ್ಜನ್ಯ, ದಬ್ಬಾಳಿಕೆ ಮತ್ತು ಅನ್ಯಾಯ ಆಗಿತ್ತು. ಅವರು ಪಾಲ್ಗೊಂಡಿದ್ದರು. ಅವರು ಹೇಳುತ್ತಾರೆ: 'ಇಸ್ಲಾಮ್ ಮತ್ತು ಅಹ್ಮದಿಯತ್ತಿನ ಬಗ್ಗೆ ನನಗಿದ್ದ ಪ್ರಶ್ನೆಗಳಿಗೆ, ಜಲ್ಸದ ಸಮಯದಲ್ಲಿ ನನಗೆ ನನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರ ಸಿಕ್ಕಿತು'.

ಗ್ರೀಸ್ ನಿಯೋಗದಲ್ಲಿ ಒಬ್ಬ ಮಹಿಳಾ ಅತಿಥಿಯಿದ್ದರು. ಅವರು ಹೇಳುತ್ತಾರೆ: 'ಇದು ಅತ್ಯಂತ ಸುಂದರವಾದ ಅನುಭವವಾಗಿತ್ತು. ಪ್ರತಿಯೊಬ್ಬ ಸ್ವಯಂಸೇವಕನೂ ಅತಿಥಿಗಳೊಂದಿಗೆ ಅತ್ಯಂತ ಸ್ನೇಹಪರ ಮತ್ತು ಸಹಾಯಕರಾಗಿದ್ದರು. ಪ್ರದರ್ಶನಗಳು ಬಹಳ ಚೆನ್ನಾಗಿದ್ದವು, ವಿಶೇಷವಾಗಿ ರಿವ್ಯೂ ಆಫ್ ರಿಲಿಜನ್ಸ್‌ನ ಇಸ್ಲಾಮಿನ ಇತಿಹಾಸದ ಕುರಿತಾದ ಪ್ರದರ್ಶನ. ನಾನು ಅಲ್ಲಿ ಹಲವು ಗಂಟೆಗಳನ್ನು ಕಳೆಯಲು ಬಯಸಿದ್ದೆ. ಪುರಾತತ್ತ್ವ ಶಾಸ್ತ್ರದ ಬಗ್ಗೆ ನನಗೆ ತಿಳಿಸಲಾಯಿತು. ಒಂದು ವಿಷಯವೇನೆಂದರೆ, ಎಲ್ಲವನ್ನೂ ಹೊಗಳಿದ ನಂತರ ಅವರು, ನನಗೆ ಇಷ್ಟವಾಗದ ಒಂದು ವಿಷಯವಿದೆ, ಅದೇನೆಂದರೆ ಕೆಲವು ಮಹಿಳೆಯರು ಇಸ್ಲಾಮಿಕ ಡ್ರೆಸ್ ಕೋಡ್ ಅಂದರೆ ಪರ್ದಾವನ್ನು ಸರಿಯಾಗಿ ಪಾಲಿಸುತ್ತಿರಲಿಲ್ಲ ಮತ್ತು ಕೆಲವು ಪುರುಷರು ಕೂಡ ದೃಷ್ಟಿಯನ್ನು ತಗ್ಗಿಸುವಲ್ಲಿ ದೌರ್ಬಲ್ಯವನ್ನು ತೋರಿಸುತ್ತಿದ್ದರು. ಈ ಬಗ್ಗೆ ನಾನು ವಿಶೇಷವಾಗಿ ಉಪದೇಶ ನೀಡಿದ್ದರೂ ಹೀಗಿತ್ತು. ನಕಾರಾತ್ಮಕ ಅಭಿಪ್ರಾಯಗಳನ್ನು ಕೂಡ ನಮ್ಮ ಸುಧಾರಣೆಗಾಗಿ ನಾವು ಯೋಚಿಸಬೇಕು, ಕೇಳಬೇಕು'.

ಹಾಗಾಗಿ ನಿರ್ಲಕ್ಷ್ಯ ವಹಿಸಿದವರು, ಅನ್ಯರು ನಮ್ಮನ್ನು ಬಹಳ ಆಳವಾದ ದೃಷ್ಟಿಯಿಂದ ನೋಡುತ್ತಾರೆ ಎಂಬುದನ್ನು ನೆನಪಿನಲ್ಲಿಡಬೇಕು ಮತ್ತು ಇಸ್ಲಾಮಿನ ನೈಜ ಚಿತ್ರಣಕ್ಕೆ ಕಳಂಕ ತರುವಂತಹ ಯಾವುದೇ ಅವಕಾಶವನ್ನು ನಾವು ಅವರಿಗೆ ನೀಡಬಾರದು. ಬದಲಾಗಿ ಜಲ್ಸದ ಭಾಷಣಗಳ ಸಮಯದಲ್ಲಿ ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಈ ಉಲ್ಲೇಖವನ್ನೂ ಓದಿದ್ದೆ: ಅನ್ಯರಿಗೆ ನಮ್ಮ ಮೇಲೆ ಬೊಟ್ಟು ಮಾಡುವಂತಹ ಅವಕಾಶವನ್ನು ನೀಡಬೇಡಿ.

(ಮಲ್‌ಫೂಝಾತ್, ಸಂಪುಟ–3, ಪುಟ–143, 2022)

ಪೋಲೆಂಡ್‌ನಿಂದ ಪ್ರೊಫೆಸರ್ ವೊಜ್ಸಿಕ್ ಲಿಮೆಂಟೋವಿಕ್ಜ್, ಇವರು ಮಾನವ ಹಕ್ಕುಗಳ ಪ್ರಾಧ್ಯಾಪಕರಾಗಿದ್ದಾರೆ ಮತ್ತು ವಿಶ್ವವಿದ್ಯಾಲಯದ ಕುಲಪತಿಯೂ ಆಗಿದ್ದರು. ಕಾನೂನು ಕಲಿಸುತ್ತಾರೆ. ಅವರು ಹೇಳುತ್ತಾರೆ: 'ವ್ಯವಸ್ಥೆಗಳನ್ನು ನೋಡಿ ಬಹಳ ಪ್ರಭಾವಿತನಾಗಿದ್ದೇನೆ ಮತ್ತು ಜಮಾಅತಿನ ಇಮಾಮ್‌ರೊಂದಿಗಿನ ನನ್ನ ಭೇಟಿಯ ಅನಿಸಿಕೆಗಳು ಮತ್ತು ಭಾವನೆಗಳನ್ನು ವಿವರಿಸಲು ನನ್ನ ಬಳಿ ಪದಗಳಿಲ್ಲ. ವೈಯಕ್ತಿಕವಾಗಿ ನಾನು ಅವರೊಂದಿಗೆ ಮಾತನಾಡಿದ್ದು ಬಹಳ ಪ್ರಭಾವ ಬೀರಿದೆ. ನಾನು ಇಲ್ಲಿ ಏನು ಕಲಿತಿದ್ದೇನೋ, ಅದನ್ನು ಈಗ ನನ್ನ ವಿದ್ಯಾರ್ಥಿಗಳಿಗೆ ತಲುಪಿಸುತ್ತೇನೆ, ಇದರಿಂದ ಅವರಿಗೆ ಇಸ್ಲಾಮಿಕ ಬೋಧನೆಗಳ ನೈಜ ಅರ್ಥ ತಿಳಿಯುವುದು'.

ನಾನು ತೆಗೆದುಕೊಂಡ ಕೆಲವು ಘಟನೆಗಳು ಇವಾಗಿವೆ, ಅವುಗಳಲ್ಲಿಯೂ ಕೆಲವೇ ಕೆಲವು ಘಟನೆಗಳನ್ನು ಮಾತ್ರ ವಿವರಿಸಿದ್ದೇನೆ.

ಪತ್ರಿಕಾ ಮತ್ತು ಮಾಧ್ಯಮದ ಈ ದಿನಗಳಲ್ಲಿ, ನಾನು ಹೇಳಿದಂತೆ, ಪತ್ರಿಕಾ ವಿಭಾಗದ ಕಡೆಯಿಂದಲೂ ಮತ್ತು ಯು.ಕೆ. ಪತ್ರಿಕಾ ವಿಭಾಗದ ಕಡೆಯಿಂದಲೂ ಸಾಕಷ್ಟು ಕವರೇಜ್ ಸಿಕ್ಕಿದೆ. ಬ್ರಿಟನ್‌ನ ಪ್ರತಿಷ್ಠಿತ ಪತ್ರಿಕೆ 'ದಿ ಟೈಮ್ಸ್' ತನ್ನ ಮುಖಪುಟದಲ್ಲಿ ಸುದ್ದಿಯನ್ನು ಪ್ರಕಟಿಸಿತ್ತು. ಇತರ ಪತ್ರಿಕೆಗಳ ಕಡೆಯಿಂದಲೂ. ಮಾಧ್ಯಮ ಪ್ರಸಾರ: ಮುದ್ರಣ ಲೇಖನಗಳ ಸಂಖ್ಯೆ 16, ಓದುಗರ ಸಂಖ್ಯೆ 1 ಕೋಟಿ. ರೇಡಿಯೋ ಕಾರ್ಯಕ್ರಮಗಳು 35, ಕಳೆದ ವರ್ಷಕ್ಕೆ ಹೋಲಿಸಿದರೆ 10ರ ಹೆಚ್ಚಳ. ಟಿವಿ ಕಾರ್ಯಕ್ರಮಗಳು 6, ಅದನ್ನು ವೀಕ್ಷಿಸಿದವರ ಅಂದಾಜು ಸಂಖ್ಯೆ 72 ಲಕ್ಷ. ಸಾಮಾಜಿಕ ಮಾಧ್ಯಮದಲ್ಲಿ ಐದು ಲಕ್ಷ ಮೂವತ್ತು ಸಾವಿರ ವೀಕ್ಷಣೆಗಳು. ಯು.ಕೆ. ವಿಭಾಗದಲ್ಲಿ ಅವರ ಒಂದು ವರದಿಯ ಪ್ರಕಾರ ಅದು ಕೋಟಿಗಳಲ್ಲಿದೆ. ಒಟ್ಟು ಪ್ರಸಾರ 5 ಕೋಟಿ 28 ಲಕ್ಷ ಜನರನ್ನು ತಲುಪಿದೆ. ಪತ್ರಿಕಾ ಮತ್ತು ಮಾಧ್ಯಮದ ಮೂಲಕ, ಸುಮಾರು 12 ವಿವಿಧ ಪತ್ರಿಕೆಗಳು ಮತ್ತು ಟೆಲಿವಿಷನ್ ಚಾನೆಲ್‌ಗಳು ಕವರ್ ಮಾಡಿವೆ, ಇದರಲ್ಲಿ ಪ್ರಸಿದ್ಧ ರಾಷ್ಟ್ರೀಯ ಚಾನೆಲ್‌ಗಳು ಮತ್ತು ಪತ್ರಿಕೆಗಳು ಸೇರಿದ್ದವು. ಪತ್ರಕರ್ತರ ಅನಿಸಿಕೆಗಳು: ಒಬ್ಬ ಮಹಿಳಾ ಪತ್ರಕರ್ತೆ ಹೇಳುತ್ತಾರೆ: 'ಕೊನೆಯ ದಿನದ ಬೈಅತ್ ನೋಡಿದ ನಂತರ ನಾನು ಬಹಳ ಪ್ರಭಾವಿತಳಾಗಿದ್ದೇನೆ. ಭಾವನೆಗಳಿಂದ ನನ್ನ ಕಣ್ಣುಗಳು ತುಂಬಿಬಂದವು. ಇದು ಲೋಕದಲ್ಲಿ ನಾನೆಂದೂ ನೋಡಿರದಂತಹ ದೃಶ್ಯವಾಗಿತ್ತು. ಲೋಕದಲ್ಲಿ ಬೇರೆ ಯಾರಿಗೂ ಎಂದಿಗೂ ಇಂತಹ ಅನುಭವ ಮತ್ತು ಇಂತಹ ಕಾರ್ಯಕ್ರಮವನ್ನು ಆಯೋಜಿಸಲು ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ಆ ದೃಶ್ಯ ಉಸಿರು ಬಿಗಿಹಿಡಿಯುವಂತಿತ್ತು ಮತ್ತು ನಾನು ಸಂಪೂರ್ಣವಾಗಿ ಅದರ ಮಂತ್ರಮುಗ್ಧತೆಯಲ್ಲಿದ್ದೇನೆ'. ಹೀಗೆ ಇತರ ಜನರ ಅಭಿಪ್ರಾಯಗಳೂ ಇವೆ. ಎಂ.ಟಿ.ಎ. ಆಫ್ರಿಕಾ ಕಡೆಯಿಂದಲೂ ಬಹಳಷ್ಟು ಕೆಲಸ ನಡೆಯುತ್ತಿದೆ. ಇಲ್ಲಿ ಇಪ್ಪತ್ತು ಪತ್ರಕರ್ತರು ಪಾಲ್ಗೊಂಡಿದ್ದರು, ಅವರು 157 ವರದಿಗಳನ್ನು ಕಳುಹಿಸಿದ್ದಾರೆ. ಅವರ ಜಲ್ಸದ ಸುದ್ದಿ 6 ಕೋಟಿ 30 ಲಕ್ಷಕ್ಕೂ ಹೆಚ್ಚು ಮನೆಗಳನ್ನು ತಲುಪಿದೆ. ಆಫ್ರಿಕಾದ ಹದಿನೆಂಟಕ್ಕೂ ಹೆಚ್ಚು ಚಾನೆಲ್‌ಗಳಲ್ಲಿ ಜಲ್ಸ ಸಾಲಾನಾ ಆಫ್ರಿಕಾದ ನೇರ ಪ್ರಸಾರವಾಯಿತು, ಭಾಷಣಗಳು ಪ್ರಸಾರವಾದವು ಮತ್ತು ಪ್ರಸಾರದ ವ್ಯಾಪ್ತಿ ಅಂದಾಜು 3 ಕೋಟಿ 50 ಲಕ್ಷಕ್ಕೂ ಹೆಚ್ಚು ಜನರನ್ನು ತಲುಪಿದೆ. ಆಫ್ರಿಕಾದಲ್ಲಿ ಅಹ್ಮದಿಯೇತರ ವೀಕ್ಷಕರ ಅಭಿಪ್ರಾಯಗಳು ಹೀಗಿದ್ದವು:

ಸಿಯೆರಾ ಲಿಯೋನ್‌ನ ಟೆಂಟಾ ಫೋರ್ ಗ್ರಾಮದಿಂದ ಫಾದರ್ ಜಾರ್ಜ್ ಹೇಳುತ್ತಾರೆ: 'ವೃತ್ತಿಯಲ್ಲಿ ನಾನು ಶಿಕ್ಷಕನಾಗಿದ್ದೇನೆ ಮತ್ತು ಸಿಯೆರಾ ಲಿಯೋನ್‌ನ ಟೆಂಟಾ ಫೋರ್ ಗ್ರಾಮದಲ್ಲಿ ವಾಸಿಸುತ್ತೇನೆ. ನಾನು ಅಹ್ಮದಿ ಮುಸ್ಲಿಮನಲ್ಲ. ಜಲ್ಸ ಸಾಲಾನಾ ಬ್ರಿಟನ್‌ನ ಮೂರು ದಿನಗಳ ಅವಧಿಯಲ್ಲಿ ನನ್ನನ್ನು ಅತ್ಯಂತ ಹೆಚ್ಚು ಪ್ರಭಾವಿಸಿದ ವಿಷಯವೆಂದರೆ, ಅಹ್ಮದಿ ಮುಸ್ಲಿಮರಿಗೆ ಖಿಲಾಫತ್‌ನ ಮೇಲಿರುವ ಆಳವಾದ ಪ್ರೀತಿ ಮತ್ತು ಅವರ ಕಡೆಯಿಂದ ಇಡೀ ಮಾನವಕುಲಕ್ಕಾಗಿ ಶಾಂತಿ, ಪ್ರೀತಿ, ನಿಷ್ಠೆ ಮತ್ತು ಗೌರವದ ಪ್ರದರ್ಶನ, ಅವರು ಯಾವುದೇ ದೇಶಕ್ಕೆ ಸೇರಿದವರಾಗಿರಲಿ. ನಾನು ಭಾನುವಾರ ಚರ್ಚ್‌ಗೆ ಹೋಗಬೇಕಾಗಿತ್ತು, ಆದರೆ ನಾನು ಮಸೀದಿಗೆ ಹೋಗಿ ಜಾಗತಿಕ ಬೈಅತ್ ನೋಡಲು ನಿರ್ಧರಿಸಿದೆ ಮತ್ತು ಅಲ್ಲಿ ನಾನು ನೋಡಿದ್ದೆಲ್ಲವೂ ನನ್ನ ಕಲ್ಪನೆಗಿಂತ ಸಂಪೂರ್ಣ ಭಿನ್ನವಾಗಿತ್ತು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ವಿಶ್ವಾದ್ಯಂತ ಇಷ್ಟೊಂದು ವೇಗವಾಗಿ ಏಕೆ ಹರಡುತ್ತಿದೆ ಎಂಬುದನ್ನು ಈಗ ನಾನು ಅರ್ಥಮಾಡಿಕೊಂಡಿದ್ದೇನೆ'.

ಅದೇ ರೀತಿ, ಇನ್ನೂ ಅನೇಕ ಪಾದ್ರಿಗಳಿದ್ದಾರೆ, ಮತ್ತು ಸುಶಿಕ್ಷಿತ ಜನರಿದ್ದಾರೆ, ಅವರು ತಮ್ಮ ಅನಿಸಿಕೆಗಳನ್ನು ಕಳುಹಿಸಿದ್ದಾರೆ. ಅಲ್ಲಾಹನು ಈ ಜಲ್ಸದ ಉತ್ತಮ ಪ್ರಭಾವಗಳನ್ನು ಜಮಾಅತಿನ ಎಲ್ಲ ಸದಸ್ಯರ ಮೇಲೆ ನೆಲೆನಿಲ್ಲಿಸುವಂತೆಯೇ, ಜನರಿಗೂ ಮಾರ್ಗದರ್ಶನ ನೀಡಲಿ ಮತ್ತು ಅವರನ್ನು ನೈಜ ಇಸ್ಲಾಮ್ ಮತ್ತು ಅಹ್ಮದಿಯತ್ತಿನ ಕಡೆಗೆ ಸೆಳೆಯಲಿ.

—————————————*****—————————————

**"ತನ್ನಿಗಾಗಿ ಇಷ್ಟಪಡುವುದನ್ನೇ ತನ್ನ ಸಹೋದರನಿಗೂ ಇಷ್ಟಪಡುವವರೆಗೆ ಯಾರೂ ಪೂರ್ಣ ವಿಶ್ವಾಸಿಯಾಗುವುದಿಲ್ಲ"**

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed Saheb & Family, Bengaluru, Karnataka**

***(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)***

ಇಬಾದತ್ ಮಾಡಬಲ್ಲೆ. ಈಗ ನಿನ್ನ ಇಬಾದತ್‌ಗೆ ಅಡ್ಡಿಯಾಗುತ್ತಿರುವ ಈ ಜನರನ್ನು ಅಲ್ಲಾಹ್ ತಆಲಾ ಅಂತಹ ರೀತಿಯಲ್ಲಿ ನಾಶಪಡಿಸುವನು; ನಿನ್ನ ಇಡೀ ಜೀವನವು ಇಬಾದತ್‌ನ ಸ್ವಾತಂತ್ರ್ಯದ ದೃಷ್ಟಿಯಿಂದ ಸುಖ ಹಾಗೂ ನೆಮ್ಮದಿಯಲ್ಲಿ ಕಳೆಯುವುದು.

'ಯಕೀನ್' ಎಂಬ ಪದಕ್ಕೆ ಅದರ ಪ್ರಸಿದ್ಧ ಅರ್ಥವಾದ ದೃಢ ನಿಶ್ಚಯ ಅಥವಾ 'ಯಕೀನ್' ಎಂಬ ಅರ್ಥವನ್ನೂ ಇಲ್ಲಿ ತೆಗೆದುಕೊಳ್ಳಬಹುದು. ಆಗ ಇದರ ಅರ್ಥ ಹೀಗಾಗುತ್ತದೆ: 'ಯಾವ ಘಳಿಗೆಯು ಬರಲಿದೆ ಎಂದು ವಾಗ್ದಾನ ಮಾಡಲಾಗಿದೆಯೋ, ಅದು ಬರುವವರೆಗೆ ವಿಶೇಷವಾಗಿ ಇಬಾದತ್‌ನಲ್ಲಿ ತೊಡಗಿಕೊಂಡಿರು.' ಅಂದರೆ, ಅಝಾಬ್ ಅಥವಾ ಆ ಘಳಿಗೆಯ ಚಿಹ್ನೆಗಳು ಪ್ರಕಟವಾಗುವುದನ್ನು 'ಯಕೀನ್' ಎಂದು ಕರೆಯಲಾಗಿದೆ. ಏಕೆಂದರೆ ವಾಗ್ದಾನವು ಪೂರ್ಣಗೊಳ್ಳುವವರೆಗೆ ಅದರ ಸಂಪೂರ್ಣ ವಾಸ್ತವಿಕತೆಯು ಪ್ರಕಟವಾಗುವುದಿಲ್ಲ. ಆದ್ದರಿಂದ, ಅಲ್ಲಾಹ್ ತಆಲಾ ಅವರ ಕಡೆಯಿಂದ ಯಾವುದಾದರೂ ವಾಗ್ದಾನವಿದ್ದಾಗ, ವಿಶೇಷವಾಗಿ ದುಆ ಮತ್ತು ಇಬಾದತ್ನಲ್ಲಿ ತೊಡಗಿಕೊಳ್ಳಬೇಕು; ಇದರಿಂದ ಆ ವಾಗ್ದಾನವು ಎಲ್ಲ ವಿಧದ ಖೈರ್‌ನೊಂದಿಗೆ ಪೂರ್ಣಗೊಳ್ಳುತ್ತದೆ.

ಇದರ ಅರ್ಥ ಇತರ ದಿನಗಳಲ್ಲಿ ಇಬಾದತ್ ಅನ್ನು ಬಿಟ್ಟುಬಿಡಬಹುದು ಎಂದಲ್ಲ. ಏಕೆಂದರೆ ಈ ಆಯತ್ ಅವತರಿಸಿದ ಸಮಯದಲ್ಲಿಯೂ ರಸೂಲ್–ಎ–ಕರೀಮ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಇಬಾದತ್ ಮಾಡುತ್ತಿದ್ದರು. ಆದ್ದರಿಂದ ಇಲ್ಲಿ ಉದ್ದೇಶವು ಸಾಮಾನ್ಯಕ್ಕಿಂತ ಹೆಚ್ಚು ಇಬಾದತ್ ಮಾಡುವುದು ಮತ್ತು ಹೆಚ್ಚಿನ ಗಮನವನ್ನು ಅಲ್ಲಾಹ್ ತಆಲಾ ಅವರ ಕಡೆಗೆ ಕೇಂದ್ರೀಕರಿಸುವುದಾಗಿದೆ.

ಕೆಲವು ಅಜ್ಞಾನಿ ಬಿದ್‌ಅತಿಗಳು ಈ ಆಯತ್‌ನ ಅರ್ಥವನ್ನು ಹೀಗೆ ಮಾಡುತ್ತಾರೆ: 'ಯಕೀನ್ ದೊರೆಯುವವರೆಗೆ ಇಬಾದತ್ ಫರ್ಜ್ ಆಗಿದೆ; ಆದರೆ ಯಕೀನ್ ದೊರೆತ ನಂತರ ಇಬಾದತ್ ಅಗತ್ಯವಿಲ್ಲ.' ಏಕೆಂದರೆ ಅಲ್ಲಾಹ್ ತಆಲಾ, 'ಯಕೀನ್ ಬರುವವರೆಗೆ ಇಬಾದತ್ ಮಾಡು' ಎಂದು ಹೇಳಿದ್ದಾನೆ.

ಈ ಅಜ್ಞಾನಿಗಳಿಗೆ ತಾವು ಹೀಗೆ ಹೇಳುವ ಮೂಲಕ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರ ಮೇಲೆಯೇ ಆಕ್ಷೇಪ ಮಾಡುತ್ತಿರುವುದನ್ನು ತಿಳಿದಿಲ್ಲ. ಅಂದರೆ, ಅವರು ಈ ಸೂರತ್ ಅವತರಿಸುವವರೆಗೆ ಆಪರವರಿಗೆ ಸಂಪೂರ್ಣ ಯಕೀನ್ ದೊರೆತಿರಲಿಲ್ಲ ಎಂದು ಹೇಳುವಂತಾಗುತ್ತದೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ (ಸ.ಅ.ವ.) ಅವರಿಗೆ ನಬುವ್ವತ್ ದೊರೆತ ನಂತರವೂ ಯಕೀನ್ ದೊರೆತಿರಲಿಲ್ಲವೆಂದಾದರೆ, ಈ ನೀಚ ಜನರಿಗೆ ಯಕೀನ್ ಹೇಗೆ ದೊರೆಯಬಹುದು? **ನಊಝುಬಿಲ್ಲಾಹಿ ಮಿನ್ ಹಾಝಿಹಿಲ್ ಖುರಫಾತ್–** (ನಾವು ಅಲ್ಲಾಹ್‌ನ ಆಶ್ರಯವನ್ನು ಕೋರುತ್ತೇವೆ ಇಂತಹ ಅಸಂಬದ್ಧ ಕಲ್ಪನೆಗಳಿಂದ!) ಒಮ್ಮೆ ಇದೇ ರೀತಿಯ ಒಬ್ಬ ವ್ಯಕ್ತಿಯು ನನ್ನ ಬಳಿಗೆ ಬಂದು ಪ್ರಶ್ನಿಸಿದನು: 'ಒಬ್ಬನು ಒಂದು ದೋಣಿಯಲ್ಲಿ ಪ್ರಯಾಣಿಸುತ್ತಿದ್ದಾನೆ. ದೋಣಿಯು ದಡವನ್ನು ತಲುಪಿದಾಗ ಅವನು ದೋಣಿಯಲ್ಲಿಯೇ ಕುಳಿತಿರಬೇಕೇ ಅಥವಾ ದೋಣಿಯಿಂದ ಇಳಿಯಬೇಕೇ?' ನಾನು ಹೇಳಿದೆ: 'ನದಿಯು ಸೀಮಿತವಾಗಿದ್ದು ಅದಕ್ಕೆ ನಿಜವಾದ ದಡವಿದ್ದರೆ, ಅವನು ದಡಕ್ಕೆ ಇಳಿದುಬಿಡಲಿ. ಆದರೆ ನದಿಯು ದಡವಿಲ್ಲದದ್ದಾಗಿದ್ದರೆ, ಅವನು ದಡವೆಂದು ಭಾವಿಸುವುದು ಅವನ ಸ್ವಂತ ಬುದ್ಧಿಯ ಮೋಸವಾಗಿರಬಹುದು. ಆದ್ದರಿಂದ ಅವನು ಎಲ್ಲೆಲ್ಲಿ ಇಳಿದರೂ, ಅಲ್ಲಿಯೇ ಮುಳುಗುವನು.' ಇದನ್ನು ಕೇಳಿದ ಮೇಲೆ ಅವನು ಬಹಳವಾಗಿ ನಾಚಿಕೆಪಟ್ಟನು."

**(ತಫ್ಸೀರ್–ಎ–ಕಬೀರ್, ಸಂಪುಟ 5, ಪುಟ 375)**

—————————————*****—————————————

**"ಸೌಮ್ಯತೆ ಯಾವ ವಿಷಯದಲ್ಲಿದ್ದರೂ ಅದನ್ನು ಸುಂದರಗೊಳಿಸುತ್ತದೆ."**

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Late S.R Abdur Rauf Saheb & Family, Shimoga, Karnataka**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಹಝ್ರತ್ ಹಕೀಮ್ ನೂರುದ್ದೀನ್ ರಝಿಯಲ್ಲಾಹು ಅನ್‌ಹು ಅವರ ಉದಾಹರಣೆಯನ್ನು ಉಲ್ಲೇಖಿಸಿದರು. ಅವರು ಪ್ರಸಿದ್ಧ ಹಕೀಮ್ (ವೈದ್ಯ)ರಾಗಿದ್ದರು. ತಮ್ಮ ವೃತ್ತಿಯಿಂದ ಗಳಿಸಿದ ಆದಾಯದ ಬಹುಭಾಗವನ್ನು ಇಸ್ಲಾಮಿನ ಸೇವೆಗಾಗಿ ಖರ್ಚು ಮಾಡುತ್ತಿದ್ದರು. ಬಡವರ ಸೇವೆ, ಅವರ ನೋವು-ನಲಿವುಗಳಲ್ಲಿ ಪಾಲ್ಗೊಳ್ಳುವುದು ಮತ್ತು ಮಾನವೀಯ ಸಹಾನುಭೂತಿ ತೋರಿಸುವುದು ಅವರ ಜೀವನದ ಪ್ರಮುಖ ಲಕ್ಷಣಗಳಾಗಿತ್ತು. ಹುಝೂರ್ ಅನ್ವರ್(ಅತಬಿಅ) ಅವರು ಯುವಕರಿಗೆ ಹೀಗೆ ಹೇಳಿದರು: ನೀವೂ ಸಹ ಬಡವರ ಮತ್ತು ಅಗತ್ಯವಂತರ ಸೇವೆ ಮಾಡಿ. ಅದರಿಂದ ಅಲ್ಲಾಹ್ ತಆಲಾ ಸಂತುಷ್ಟನಾಗುತ್ತಾನೆ. ಜೊತೆಗೆ ಇದು ಜಮಾಅತ್‌ನ ಸೇವೆಯೂ ಆಗುತ್ತದೆ.

ಪ್ರಶ್ನೆ: ಪ್ರೀತಿಯ ಹುಝೂರ್! ಜಗತ್ತಿನಲ್ಲಿ ನಡೆಯುತ್ತಿರುವ ರಾಜಕೀಯ ಅನ್ಯಾಯದ ವಿರುದ್ಧ ನಾವು ಹೇಗೆ ಧ್ವನಿ ಎತ್ತಬೇಕು?

ಹಝ್ರತ್ ಅಮೀರುಲ್ ಮೊಮಿನೀನ್, ಹುಝೂರ್ ಅನ್ವರ್(ಅತಬಿಅ) ಅವರು ಉತ್ತರಿಸುತ್ತಾ ಹೀಗೆ ಹೇಳಿದರು:

ನಮ್ಮ ಸಾಮರ್ಥ್ಯ ಎಷ್ಟಿದೆಯೋ ಅಷ್ಟರ ಮಟ್ಟಿಗೆ ನಾವು ಪ್ರಯತ್ನಿಸುತ್ತಿದ್ದೇವೆ. ನನ್ನ ತಲುಪುವಿಕೆಯ ಮಟ್ಟದಲ್ಲಿ ನಾನು ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ನಿಮ್ಮ ತಲುಪುವಿಕೆಯ ಮಟ್ಟದಲ್ಲಿ ನೀವೂ ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತೀರಿ. ಅಮೇರಿಕಾದ ಕ್ಯಾಪಿಟಲ್ ಹಿಲ್‌ನಲ್ಲಿ ಮಾತನಾಡುವ ಅವಕಾಶ ನನಗೆ ದೊರಕಿದಾಗ, ನಾನು ಅಲ್ಲಿನ ಜನಪ್ರತಿನಿಧಿಗಳ ಮುಂದೆ ಶಾಂತಿ, ನ್ಯಾಯ ಮತ್ತು ಮಾನವೀಯತೆಯ ಸಂದೇಶವನ್ನು ಮಂಡಿಸಿದೆ. ನಂತರ ಅಲ್ಲಿನ ಒಬ್ಬ ಸೆನೆಟರ್ ನನಗೆ ಹೀಗೆ ಹೇಳಿದರು: 'ನೀವು ಮಂಡಿಸುತ್ತಿರುವ ತತ್ವಗಳು ಅತ್ಯುತ್ತಮವಾಗಿವೆ. ಇಂದಿನ ಜಗತ್ತಿಗೆ ಅವುಗಳ ಅಗತ್ಯವೂ ಇದೆ. ಆದರೆ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಅವುಗಳನ್ನು ಸಂಪೂರ್ಣವಾಗಿ ಜಾರಿಗೆ ತರುವುದು ನಮಗೆ ಸಾಧ್ಯವಾಗುವುದಿಲ್ಲ.' ಇದು ಇಂದಿನ ರಾಜಕೀಯದ ವಾಸ್ತವಿಕತೆಯನ್ನು ತೋರಿಸುತ್ತದೆ. ರಾಜಕೀಯ ನಾಯಕರು ತಮ್ಮದೇ ಆದ ಹಿತಾಸಕ್ತಿಗಳನ್ನು ಹೊಂದಿರುತ್ತಾರೆ. ಕೆಲವೊಮ್ಮೆ ತಮ್ಮ ಪರವಾಗಿ ಅಭಿಪ್ರಾಯ ರೂಪಿಸಲು ಹಣವನ್ನೂ ಬಳಸಲಾಗುತ್ತದೆ. ಒಂದೇ ವಿಷಯಕ್ಕೆ ತಮ್ಮಿಗಾಗಿ ಒಂದು ರೀತಿಯ ನ್ಯಾಯದ ಮಾನದಂಡ ಮತ್ತು ಇತರರಿಗಾಗಿ ಬೇರೆ ರೀತಿಯ ಮಾನದಂಡವನ್ನು ಅನುಸರಿಸಿದರೆ, ನಿಜವಾದ ನ್ಯಾಯ ಎಂದಿಗೂ ಸ್ಥಾಪನೆಯಾಗುವುದಿಲ್ಲ. ಆದ್ದರಿಂದ, ನಿಮಗೆ ಸಾಧ್ಯವಾಗುವ ಮಟ್ಟಿಗೆ ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನ್ಯಾಯವನ್ನು ಸ್ಥಾಪಿಸಲು, ಸತ್ಯದ ಪರವಾಗಿ ನಿಲ್ಲಲು ಮತ್ತು ಅನ್ಯಾಯದ ವಿರುದ್ಧ ಧ್ವನಿ ಎತ್ತಲು ಪ್ರಯತ್ನಿಸುತ್ತಿರಿ."

ಪ್ರಶ್ನೆ: ಕೆಲವರು ಅಹ್ಲೆ ತಶಯ್ಯು (ಶಿಯಾ) ಅಹ್ಲೆ ಬೈತ್ ಮತ್ತು ಆಲ್-ಎ-ರಸೂಲ್ ಅವರಿಗೆ ಖಿಲಾಫತ್‌ಗಿಂತ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ. ಈ ವಿಷಯದಲ್ಲಿ ಹುಝೂರ್ ಏನು ಮಾರ್ಗದರ್ಶನ ನೀಡುತ್ತಾರೆ?

ಹುಝೂರ್ ಅನ್ವರ್(ಅತಬಿಅ) ಅವರು ಉತ್ತರಿಸುತ್ತಾ ಹೇಳಿದರು:

ಕೆಲವರು ಅತಿರೇಕಕ್ಕೆ ಹೋಗಿ, ಖಿಲಾಫತ್ ಮಾತ್ರವಲ್ಲ, ನುಬುವ್ವತ್‌ನ ವಿಷಯದಲ್ಲಿಯೂ ತಪ್ಪಾದ ನಂಬಿಕೆಗಳನ್ನು ಹೊಂದಿದ್ದಾರೆ. ಕೆಲವರು ಜಿಬ್ರೀಲ್ ಅಲೈಹಿಸ್ಸಲಾಮ್ ಅವರಿಗೆ ತಪ್ಪಾಗಿದೆ; ವಹೀ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಅವರ ಮೇಲೆ ಇಳಿಯಬೇಕಾಗಿದ್ದದ್ದು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರ ಮೇಲೆ ಇಳಿಯಿತು ಎಂದು ಹೇಳುವ ಮಟ್ಟಿಗೆ ಹೋಗುತ್ತಾರೆ.

ಅವರು ಮೊದಲ ಮೂವರು ಖುಲಫಾಏ ರಾಶಿದೀನ್‌ರ ಬಗ್ಗೆ ಸಹ ಅನ್ಯಾಯಕರ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರು 'ನನ್ನ ಅಹ್ಲೆ ಬೈತ್‌ರನ್ನು ಗೌರವಿಸಿ' ಎಂದು ಹೇಳಿದ್ದಾರೆ. ಅದರ ನಿಜವಾದ ಅರ್ಥವೆಂದರೆ, ಹೇಗೆ ಮನುಷ್ಯನು ತನ್ನ ಆಪ್ತರ ಮಾತುಗಳಿಗೆ ಗೌರವ ನೀಡುತ್ತಾನೋ, ಅದೇ ರೀತಿ ರಸೂಲುಲ್ಲಾಹ್ ಅವರ ಕುಟುಂಬದವರಿಗೂ ಗೌರವ ನೀಡಬೇಕು ಎಂಬುದು. ಆದರೆ ಕೆಲವರು ಇದರ ತಪ್ಪು ವ್ಯಾಖ್ಯಾನ ಮಾಡುತ್ತಾರೆ.

ಕೆಲವು ವರ್ಷಗಳ ಹಿಂದೆ ಒಂದು ಶಿಯಾ ಕುಟುಂಬವು ಬೈಅತ್ ಮಾಡಿತು. ಅವರು ಹೀಗೆ ಹೇಳಿದರು: 'ಅಹ್ಮದಿಯಾಗಿದ ನಂತರವೇ ನಮಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರ ಮೇಲಿನ ನಿಜವಾದ ಪ್ರೀತಿ ಮತ್ತು ಗೌರವದ ಅರ್ಥ ತಿಳಿಯಿತು.' ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸ್ಪಷ್ಟವಾಗಿ ನಾಲ್ವರು ಖುಲಫಾಏ ರಾಶಿದೀನ್‌ರನ್ನು ಧರ್ಮಮಾರ್ಗದರ್ಶಕರಾಗಿ ಅಂಗೀಕರಿಸಿದ್ದಾರೆ. ನಾನೂ ಸಹ ನನ್ನ ಖುತ್ಬಾಗಳಲ್ಲಿ ಇದನ್ನು ಪದೇಪದೇ ಉಲ್ಲೇಖಿಸುತ್ತೇನೆ. ಯುದ್ಧಗಳ ಸಂದರ್ಭದಲ್ಲಿ ಹಝ್ರತ್ ಅಬೂಬಕರ್ ಸಿದ್ದೀಕ್ ರಝಿಯಲ್ಲಾಹು ಅನ್‌ಹು ಅವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರೊಂದಿಗೆ ಅತ್ಯಂತ ಅಪಾಯಕಾರಿ ಸ್ಥಳಗಳಲ್ಲೂ ಜೊತೆಯಲ್ಲಿರುತ್ತಿದ್ದರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಸ್ವತಃ ಹೇಳಿರುವಂತೆ, 'ನಾನು ಸಹ ಅಂತಹ ಸ್ಥಳಗಳಲ್ಲಿ ಸದಾ ಇರಲಿಲ್ಲ.' ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಯಝೀದ್‌ನ ಬಗ್ಗೆ ಅತ್ಯಂತ ಕಠಿಣ ಪದಗಳನ್ನು ಬಳಸಿದ್ದಾರೆ ಮತ್ತು ಅವನನ್ನು 'ಪಲೀದ್' ಎಂದು ಕರೆದಿದ್ದಾರೆ. ಈ ವಿಷಯವನ್ನು ಇನ್ನಷ್ಟು ಆಳವಾಗಿ ತಿಳಿದುಕೊಳ್ಳಲು ಹಝ್ರತ್ ಖಲೀಫತುಲ್ ಮಸೀಹ್ ಅಸ್-ಸಾನಿ ರಝಿಯಲ್ಲಾಹು ಅನ್‌ಹು ಅವರ 'ಇಸ್ಲಾಂ ಮೇಂ ಇಖ್ತಿಲಾಫಾತ್ ಕಾ ಆಗಾಝ್' ಎಂಬ ಕೃತಿಯನ್ನು ಹಾಗೂ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಅವರ ಕುರಿತು ಅವರು ಬರೆದಿರುವ ಮತ್ತೊಂದು ಕೃತಿಯನ್ನು ಓದಿರಿ."

ಪ್ರಶ್ನೆ: ಪ್ರೀಯ ಹುಝೂರ್! ನಾವು ಜಮಾಅತ್‌ಗೂ ಹಾಗೂ ಇಡೀ ಜಗತ್ತಿಗೂ ಹೇಗೆ ಆದರ್ಶ ಮಾದರಿಯಾಗಬಹುದು?

ಹುಝೂರ್ ಅನ್ವರ್(ಅತಬಿಅ) ಅವರು ಉತ್ತರಿಸುತ್ತಾ ಹೀಗೆ ಹೇಳಿದರು:

ನಾನು ನಿನ್ನೆ ನಡೆದ ಕಾರ್ಯಕ್ರಮದಲ್ಲಿಯೇ ಅದರ ಉತ್ತರವನ್ನು ನೀಡಿದ್ದೇನೆ. ನೀವು ಬೈಅತ್‌ನ ಷರತ್ತುಗಳನ್ನು ಪ್ರಾಮಾಣಿಕವಾಗಿ ಪಾಲಿಸಿದರೆ, ಅದೇ ನಿಮ್ಮ ಶ್ರೇಷ್ಠ ಮಾದರಿಯಾಗುತ್ತದೆ. ಅನೇಕ ಜಮರು ಹೇಳುತ್ತಾರೆ: ಅಹ್ಮದಿಗಳ ಉನ್ನತ ನಡತೆ ಮತ್ತು ಆದರ್ಶ ಜೀವನವನ್ನು ನೋಡಿ ನಾವು ಬೈಅತ್ ಮಾಡುವ ಭಾಗ್ಯವನ್ನು ಪಡೆದೆವು.

ಕೆಲವು ದಿನಗಳ ಹಿಂದೆ ನಾನು ದಅವತ್ ಇಲಲ್ಲಾಹ್ ಕುರಿತು ಖುತ್ಬಾ ನೀಡಿದ್ದೆ. ಅದರಲ್ಲಿಯೂ ಇದೇ ವಿಷಯವನ್ನು ಒತ್ತಿ ಹೇಳಿದ್ದೇನೆ: ನಾವು ಮಾತಿನಿಂದ ಮಾತ್ರವಲ್ಲ, ನಮ್ಮ ನಡವಳಿಕೆಯ ಮೂಲಕವೂ ಇಸ್ಲಾಮಿನ ನಿಜವಾದ ಸೌಂದರ್ಯವನ್ನು ಜಗತ್ತಿಗೆ ತೋರಿಸಬೇಕು."

ಈ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ವಿವರಿಸಿದ ಒಂದು ಘಟನೆಯನ್ನು ಉಲ್ಲೇಖಿಸಿದರು.

ಒಬ್ಬ ಮೌಲವಿ ಮಸೀದಿಯಲ್ಲಿ ಆರ್ಥಿಕ ತ್ಯಾಗದ ಕುರಿತು ಅತ್ಯಂತ ಭಾವನಾತ್ಮಕ ಭಾಷಣ ಮಾಡಿದರು. ಅವರ ಉಪದೇಶದಿಂದ ಪ್ರಭಾವಿತರಾದ ಅವರ ಪತ್ನಿ ತಮ್ಮ ಚಿನ್ನದ ಬಳೆಗಳನ್ನು ಅಲ್ಲಾಹ್‌ನ ಮಾರ್ಗದಲ್ಲಿ ಅರ್ಪಿಸಲು ಮುಂದಾದರು. ಆದರೆ ಆ ಮೌಲವಿ ಅವರಿಗೆ ಹೀಗೆ ಹೇಳಿದರು: "ನಾನು ಆ ಮಾತುಗಳನ್ನು ಜನರಲ್ಲಿ ಉತ್ಸಾಹ ಮೂಡಿಸಲು ಹೇಳಿದ್ದೆ. ಅದು ನಮ್ಮಿಗಾಗಿ ಅಲ್ಲ."

ಈ ಘಟನೆಯನ್ನು ಉಲ್ಲೇಖಿಸಿದ ನಂತರ ಹುಝೂರ್ ಅನ್ವರ್(ಅತಬಿಅ) ಹೇಳಿದರು: ಉಪದೇಶ ಮಾಡುವವರ ಜೀವನವೇ ಅವರ ಮಾತುಗಳಿಗೆ ವಿರುದ್ಧವಾಗಿದ್ದರೆ, ಅವರ ಮಾತುಗಳು ಜನರ ಮೇಲೆ ಯಾವ ಪರಿಣಾಮ ಬೀರುತ್ತವೆ? ಜಮಾಅತ್ ಅಹ್ಮದೀಯಾದಲ್ಲಿ ಸ್ಥಿತಿ ಭಿನ್ನವಾಗಿದೆ. ಇಲ್ಲಿ ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಆರ್ಥಿಕ ತ್ಯಾಗ ಮಾಡುತ್ತಾರೆ. ನಾನೂ ಸಹ ಆರ್ಥಿಕ ತ್ಯಾಗ ಮಾಡುತ್ತೇನೆ; ನೀವು ಎಲ್ಲರೂ ಸಹ ಮಾಡುತ್ತೀರಿ.

ಆದ್ದರಿಂದ, ನಮ್ಮ ಮಾತು ಮತ್ತು ಕರ್ಮಗಳ ನಡುವೆ ಹೊಂದಾಣಿಕೆ ಇರಬೇಕು. ನಮ್ಮ ಜೀವನವೇ ನಮ್ಮ ಸಂದೇಶವಾಗಬೇಕು."

ಈ ಆನ್‌ಲೈನ್ ಮಜ್ಲಿಸ್-ಎ-ಅರ್ಫಾನ್‌ನ ಸಾರಾಂಶವನ್ನು ಮಂಡಿಸುತ್ತಾ, ಜಮಾಅತ್‌ನ ಎಲ್ಲಾ ಸದಸ್ಯರಿಗೆ, ವಿಶೇಷವಾಗಿ ಖುದ್ದಾಮುಲ್ ಅಹ್ಮದೀಯ್ಯಾ ಸದಸ್ಯರಿಗೆ, ವಿನಮ್ರ ಮನವಿ ಮಾಡಲಾಗುತ್ತದೆ: ಎಂ.ಟಿ.ಎ. ಮೂಲಕ ಪ್ರಸಾರವಾಗುವ "This Week with Huzur Anwar" ಕಾರ್ಯಕ್ರಮವನ್ನು ನಿಯಮಿತವಾಗಿ ವೀಕ್ಷಿಸಿ ಮತ್ತು ಇತರರಿಗೂ ವೀಕ್ಷಿಸಲು ಪ್ರೋತ್ಸಾಹಿಸಿ. ಈ ಕಾರ್ಯಕ್ರಮವು ಕೇವಲ ಪ್ರಶ್ನೋತ್ತರಗಳ ಸಂಕಲನವಲ್ಲ; ಅದು ಆತ್ಮಿಕ, ನೈತಿಕ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕ್ಷೇತ್ರಗಳಲ್ಲಿ ನಿರಂತರ ಮಾರ್ಗದರ್ಶನ ನೀಡುವ ಅಮೂಲ್ಯ ಭಂಡಾರವಾಗಿದೆ.

ಅಲ್ಲಾಹ್ ತಆಲಾ ನಮಗೆಲ್ಲರಿಗೂ ನಮ್ಮ ಪ್ರಿಯ ಇಮಾಮ್, ಹಝ್ರತ್ ಅಮೀರುಲ್ ಮೊಮಿನೀನ್, ಖಲೀಫತುಲ್ ಮಸೀಹ್ ಅಲ್-ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರ ಪವಿತ್ರ ಮಾರ್ಗದರ್ಶನವನ್ನು ಗಮನದಿಂದ ಆಲಿಸಿ, ಅದನ್ನು ಅರ್ಥಮಾಡಿಕೊಂಡು, ನಮ್ಮ ಜೀವನದಲ್ಲಿ ಸಂಪೂರ್ಣ ನಿಷ್ಠೆಯಿಂದ ಅಳವಡಿಸಿಕೊಳ್ಳುವ ತೌಫೀಕ್ ಅನುಗ್ರಹಿಸಲಿ. ಆಮೀನ್. ವಬಿಲ್ಲಾಹಿತ್ ತೌಫೀಕ್.

-------------*****-------------

**131ನೇ ಜಲ್ಸಾ ಸಾಲಾನ ಖಾದಿಯಾನ್**
**25, 26, 27 ಡಿಸೆಂಬರ್ 2026ರಂದು ಆಯೋಜಿಸಲಾಗುವುದು**

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 131ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 25, 26 ಮತ್ತು 27ನೇ ಡಿಸೆಂಬರ್ 2026 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಮರ್ಕಝಿಯ ಖಾದಿಯಾನ್)**

## ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ[ರ]

ಹಝ್ರತ್ ಪೈಗಂಬರರ[ಸ] ಕುರಿತು ಸುದ್ದಿ ಈ ಮೊದಲೇ ತಾಯಿಫ್‌ಗೆ ತಲಪಿತ್ತು. ಹಝ್ರತ್ ಪೈಗಂಬರ್[ಸ] ತಾಯಿಫ್ ತಲಪಿದಾಗ ತಾಯಿಫ್ ನಿವಾಸಿಗಳು ನೋಡಿದರು. ಹಝ್ರತ್ ಪೈಗಂಬರರ[ಸ] ಜೊತೆಗೆ ಸೈನ್ಯ ಅಥವಾ ದಂಡು ಇರುವುದಕ್ಕೆ ಬದಲಾಗಿ ಕೇವಲ ಝೈದ್ ಅವರ ಜೊತೆಗಿದ್ದರು. ಅವರು ತಾಯಿಫ್ ನಗರದ ಪ್ರಸಿದ್ಧ ಸ್ಥಳಗಳಲ್ಲಿ ಧರ್ಮ ಪ್ರಚಾರ ಮಾಡುತ್ತಾ ತಿರುಗುತ್ತಿದ್ದರು. ಆದರೆ ಹೃದಯಾಂಧತೆ ಬಾಧಿಸಿದವರು ತಮ್ಮ ಮುಂದೆ ಅಲ್ಲಾಹನ ಪ್ರವಾದಿ ಬಂದಿರುವುದದನ್ನು ನೋಡಲಿಲ್ಲ. ಅವರು ಒಬ್ಬ ನಿಕೃಷ್ಟ, ತಿರಸ್ಕೃತ ಮನುಷ್ಯನನ್ನಾಗಿ ಅವರನ್ನು ಕಂಡರು. ಪ್ರಾಯಶಃ ಈತನಿಗೆ ಕಷ್ಟಕೊಡುವುದರಿಂದ ಮತ್ತು ಹಿಂಸಿಸುವುದರಿಂದ ತಮ್ಮ ನಾಯಕರ ದೃಷ್ಟಿಯಲ್ಲಿ ತಾವು ಗೌರವಾನ್ವಿತರಾಗುವೆವು ಎಂದು ಆ ಜನರು ಭಾವಿಸಿದರು. ತಾಯಿಫ್ ನಗರದ ಅವಿಶ್ವಾಸಿಗಳು ಒಗ್ಗೂಡಿದರು. ಅವರು ನಾಯಿಗಳನ್ನು ತಮ್ಮ ಜೊತೆ ತೆಗೆದುಕೊಂಡು ಹೋದರು. ಅವರು ಹುಡುಗರಿಗೆ ಹುರಿದುಂಬಿಸಿದರು. ಅವರು ಕಲ್ಲುಗಳಿಂದ ತಮ್ಮ ಚೀಲಗಳನ್ನು ತುಂಬಿಸಿದರು ಮತ್ತು ನಿರ್ದಯವಾಗಿ ಹಝ್ರತ್ ಪೈಗಂಬರರಿಗೆ[ಸ] ಕಲ್ಲೆಸೆಯಲು ತೊಡಗಿದರು. ಅಲ್ಲಿನ ಜನರು ಅವರನ್ನು ನಗರದಿಂದ ತಳ್ಳುತ್ತಾ ನಗರದ ಹೊರಗಡೆಗೆ ನೂಕಿದರು. ಹಝ್ರತ್ ಪೈಗಂಬರರ[ಸ] ಕಾಲುಗಳು ರಕ್ತರಂಜಿತವಾಗಿದ್ದುವು. ಹಝ್ರತ್ ಝೈದ್ ಹಝ್ರತ್ ಪೈಗಂಬರರನ್ನು[ಸ] ರಕ್ಷಿಸುತ್ತಾ ತೀವ್ರವಾಗಿ ಗಾಯಗೊಂಡರು. ಆದರೆ ದೌರ್ಜನ್ಯಗಾರರ ಹೃದಯಗಳು ತಂಪಾಗಲಿಲ್ಲ. ಅವರು ಹಝ್ರತ್ ಪೈಗಂಬರರನ್ನು[ಸ] ಹಿಂಬಾಲಿಸುತ್ತಾ ಹೋದರು. ಹಝ್ರತ್ ಪೈಗಂಬರ್[ಸ] ನಗರದಿಂದ ಅನೇಕ ಮೈಲು ದೂರದಲ್ಲಿ ಗುಡ್ಡಗಳ ತನಕ ತಲಪುವವರೆಗೆ ಆ ಜನರು ಅವರನ್ನು ಬೆಂಬತ್ತದೆ ಬಿಡಲಿಲ್ಲ. ಶತ್ರುಗಳು ಹಝ್ರತ್ ಪೈಗಂಬರರನ್ನು[ಸ] ಬೆನ್ನಟ್ಟುತ್ತಿರುವಾಗ ಅಲ್ಲಾಹನ ಕ್ರೋಧ ಅವರ ಮೇಲೆ ಎರಗುವುದೋ ಎಂಬ ಭಯದಿಂದ ಹಝ್ರತ್ ಪೈಗಂಬರ್[ಸ] ಆಕಾಶದ ಕಡೆಗೆ ದೃಷ್ಟಿಹಾಯಿಸಿ ನೋಡುತ್ತಾ ಹೀಗೆ ಪ್ರಾರ್ಥಿಸುತ್ತಿದ್ದರು: "ಓ ನನ್ನ ಪ್ರಭೂ, ನೀನು ಈ ಜನರನ್ನು ಕ್ಷಮಿಸು. ಈ ಜನರು ತಾವು ಏನು ಮಾಡುತ್ತಿದ್ದೇವೆಂದು ಅರಿತುಕೊಂಡಿಲ್ಲ."

ಗಾಯಗೊಂಡ, ಅತ್ಯಂತ ಬಳಲಿದ ಮತ್ತು ಜನರಿಂದ ಅಟ್ಟಿಯೋಡಿಸಲ್ಪಟ್ಟ ಹಝ್ರತ್ ಪೈಗಂಬರರು[ಸ] ಒಂದು ದ್ರಾಕ್ಷೆಯ ತೋಟದ ನೆರಳಿನಲ್ಲಿ ಆಶ್ರಯಪಡೆದರು. ದ್ರಾಕ್ಷೆಯ ಆ ತೋಟ ಮಕ್ಕದ ಇಬ್ಬರು ಗಣ್ಯರಿಗೆ ಸೇರಿತ್ತು. ಅವರಿಬ್ಬರೂ ಆ ದ್ರಾಕ್ಷೆ ತೋಟದಲ್ಲಿ ಆಗ ಇದ್ದರು. ಹತ್ತು ವರ್ಷಗಳಿಂದ ಹಝ್ರತ್ ಪೈಗಂಬರರನ್ನು[ಸ] ವಿರೋಧಿಸುತ್ತಿದ್ದ ಹಳೆಯ ಮತ್ತು ಕಠಿಣ ಶತ್ರುಗಳಾದ ಅವರು ಪ್ರಾಯಶಃ ಮಕ್ಕದ ಒಬ್ಬ ನಿವಾಸಿಯನ್ನು ತಾಯಿಫ್ ನಗರದ ಜನರು ಗಾಯಗೊಳಿಸಿದರಲ್ಲಾ ಎಂಬ ಭಾವನೆಯಿಂದ ಅಥವಾ ಒಳಿತಿನ ಬೀಜ ಅವರ ಹೃದಯಗಳಲ್ಲಿ ಅಂಕುರಿಸುತ್ತಿದ್ದುದರಿಂದ ಅವರು ಒಂದು ಬಟ್ಟಲನ್ನು ದ್ರಾಕ್ಷೆಯಿಂದ ತುಂಬಿಸಿ ತಮ್ಮ ಗುಲಾಮನಾದ ಸೇವಕನಿಗೆ ಹೀಗೆ ಹೇಳಿದರು: "ಹೋಗಿ ಇದನ್ನು ಆ ಪ್ರಯಾಣಿಕರಿಗೆ ನೀಡು." ಅದಾಸ್ ಎಂಬ ಆ ಸೇವಕನು ನಿನೇವದ ನಿವಾಸಿಯಾಗಿದ್ದನು. ಅವನು ಕ್ರೈಸ್ತ ಧರ್ಮಾವಲಂಬಿಯಾಗಿದ್ದನು. ಅವನು ಆ ದ್ರಾಕ್ಷೆಯನ್ನು ತೆಗೆದುಕೊಂಡು ಹಝ್ರತ್ ಪೈಗಂಬರರ[ಸ] ಮುಂದಿರಿಸಿದಾಗ ಅವರು "ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್" (ಪರಮ ಕರುಣಾಮಯನೂ ಅಪರಿಮಿತ ದಯಾಳುವೂ ಆದ ಅಲ್ಲಾಹನ ನಾಮದಿಂದ) ಎಂದು ಹೇಳಿ ತೆಗೆದುಕೊಂಡಾಗ ಕ್ರೈಸ್ತಧರ್ಮವನ್ನು ಆ ಗುಲಾಮನು ತನ್ನ ಹೃದಯದಲ್ಲಿ ನೆನಪಿಸಿದನು. ತನ್ನ ಮುಂದೆ ಅಲ್ಲಾಹನ ಒಬ್ಬ ಪ್ರವಾದಿ ಕುಳಿತಿರುವರು. ಅವರು ಇಸ್ರಾಈಲ್ ಸಂತತಿಗಳ ಪ್ರವಾದಿಗಳಂತೆ ಮಾತನಾಡುತ್ತಿರುವರೆಂದು ಅವನು ಭಾವಿಸಿದನು. ಅವನೊಂದಿಗೆ ಹಝ್ರತ್ ಪೈಗಂಬರ್[ಸ] "ನೀನು ಎಲ್ಲಿಯ ನಿವಾಸಿ?" ಎಂದು ಕೇಳಿದರು. ಅವನು "ನಾನು ನಿನೇವದ ನಿವಾಸಿ" ಎಂದು ಹೇಳಿದಾಗ, "ಒಳ್ಳೆಯ ಮನುಷ್ಯರಾಗಿದ್ದ ಯೂನುಸ್ ಪ್ರವಾದಿ ನಿನೇವದ ನಿವಾಸಿಯಾಗಿದ್ದು ನನ್ನ ಹಾಗೆ ಏಕದೇವನ ಪ್ರವಾದಿಯಾಗಿದ್ದರು" ಎಂದು ಹೇಳಿ ಅನಂತರ ಇಸ್ಲಾಮ್ ಧರ್ಮದ ಸಂದೇಶವನ್ನು ಅವನಿಗೆ ತಲಪಿಸಲು ತೊಡಗಿದರು. ಅದಾಸನ ಗಾಬರಿ ಕೆಲವೇ ಕ್ಷಣಗಳಲ್ಲಿ ಆಶ್ಚರ್ಯದಲ್ಲಿ ಪರಿವರ್ತಿತವಾಯಿತು. ಆಶ್ಚರ್ಯವು ಸತ್ಯವಿಶ್ವಾಸವಾಗಿ ಬದಲಾವಣೆ ಗೊಂಡಿತು. ಸ್ವಲ್ಪವೇ ಹೊತ್ತಿನಲ್ಲಿ ಆ ಅಪರಿಚಿತ ಗುಲಾಮನು ಅಶ್ರುಭರಿತ ಕಣ್ಣುಗಳಿಂದ ಹಝ್ರತ್ ಪೈಗಂಬರರನ್ನು[ಸ] ತಬ್ಬಿಕೊಂಡನು. ಅವನು ಹಝ್ರತ್ ಪೈಗಂಬರರ[ಸ] ಕೈಗಳಿಗೂ ಕಾಲುಗಳಿಗೂ ಮುತ್ತು ಕೊಡಲು ತೊಡಗಿದನು. ಅದಾಸ್‌ನೊಂದಿಗೆ ಮಾತುಕತೆ ಮುಗಿಸಿದ ನಂತರ ಹಝ್ರತ್ ಪೈಗಂಬರ್[ಸ] ಹೀಗೆ ಪ್ರಾರ್ಥಿಸಿದರು:

"ಓ ನನ್ನ ಅಲ್ಲಾಹ್, ನಾನು ನಿನ್ನ ಮುಂದೆ ನನ್ನ ಬಲಹೀನತೆ, ನನ್ನ ಸಾಧನ ಸಂಪತ್ತುಗಳ ಕೊರತೆ ಮತ್ತು ಜನರಿಂದ ಅವಮಾನಿತನಾಗುವ ಬಗ್ಗೆ ಮೊರೆಯಿಡುತ್ತೇನೆ. ಅತ್ಯಂತ ದಯೆದೋರುವವನೇ, ನೀನೇ ಬಡವರ ಮತ್ತು ಬಲಹೀನರ ಒಡೆಯನಾಗಿರುವೆ. ನೀನು ನನ್ನ ಒಡೆಯನೂ ಆಗಿರುವೆ. ನೀನು ನನ್ನನ್ನು ಯಾರ ವಶಕ್ಕೆ ನೀಡುವೆ? ನನ್ನನ್ನು ಅತ್ತಿತ್ತ ತಳ್ಳುತ್ತಾ ಹೋಗುವ ಅಪರಿಚಿತರ ವಶಕ್ಕೆ ನೀಡುವೆಯೋ ಅಥವಾ ನನ್ನ ರಾಜ್ಯದಲ್ಲಿಯೇ ನನ್ನ ಮೇಲೆ ಜಯಗಳಿಸಿರುವ ವಿರೋಧಿಗಳ ವಶಕ್ಕೆ ನೀಡುವೆಯೋ? ನನ್ನ ಮೇಲೆ ನಿನ್ನ ಕೋಪವಿಲ್ಲದಿದ್ದರೆ ನನಗೆ ಈ ವಿರೋಧಿಗಳ ಬಗ್ಗೆ ಯಾವುದೇ ಕಾಳಜಿಯಿಲ್ಲ. ನಿನ್ನ ದಯೆ ನನ್ನೊಂದಿಗಿದೆ. ನನ್ನ ಬಗ್ಗೆ ನಿನ್ನ ಹಿತಾಕಾಂಕ್ಷೆ ವಿಶಾಲವಾಗಿದೆ. ನಾನು ನಿನ್ನ ವದನದ ಕಾಂತಿಯಲ್ಲಿ ಅಭಯವನ್ನು ಕೋರುತ್ತಿದ್ದೇನೆ. ಅಂಧಕಾರವನ್ನು ಲೋಕದಿಂದ ಹೊಡೆದೋಡಿಸುವುದು ಮತ್ತು ಈ ಲೋಕದಲ್ಲೂ ಪರಲೋಕದಲ್ಲೂ ಶಾಂತಿ ನೀಡುವುದು ನಿನ್ನದೇ ಕೆಲಸವಾಗಿದೆ. ನಿನ್ನ ಕೋಪ ಮತ್ತು ಅತೃಪ್ತಿ ನನ್ನ ಮೇಲೆ ಸುರಿಯದಿರಲಿ. ನೀನು ನನ್ನ ಮೇಲೆ ಕೋಪಾವಿಷ್ಟನಾಗುವುದು ಅನಂತರ ನೀನು ನನ್ನ ಮೇಲೆ ನಿನ್ನ ಸಂಪ್ರೀತಿಯನ್ನು ಸೂಚಿಸುವುದಕ್ಕಾಗಿರಲಿ, ನಿನ್ನ ಹೊರತು ಯಾವುದೇ ನೈಜ ಶಕ್ತಿ ಮತ್ತು ನೈಜ ಆಶ್ರಯಸ್ಥಾನವಿಲ್ಲ."[17]

ಹೀಗೆ ಪ್ರಾರ್ಥನೆ ಮಾಡಿ ಹಝ್ರತ್ ಪೈಗಂಬರ್[ಸ] ಮಕ್ಕದ ಕಡೆಗೆ ಪ್ರಯಾಣಿಸಿದರು. ಅವರು ದಾರಿ ಮಧ್ಯೆ ನಖ್ಲ ಎಂಬಲ್ಲಿ ತಂಗಿದರು. ಅಲ್ಲಿ ಕೆಲವು ದಿನ ವಿಶ್ರಾಂತಿ ಪಡೆದು ಮಕ್ಕದ ಕಡೆಗೆ ಪ್ರಯಾಣ ಮುಂದುವರಿಸಿದರು. ಅರಬಿಗಳ ಸಂಪ್ರದಾಯ ಪ್ರಕಾರ ಜಗಳದ ಕಾರಣದಿಂದ ಮಕ್ಕವನ್ನು ಬಿಟ್ಟು ಹೋದ ನಂತರ ಪುನಃ ಮಕ್ಕದ ಪೌರನಾಗಲು ಸಾಧ್ಯವಿರಲಿಲ್ಲ. ಮಕ್ಕದೊಳಗೆ ಪ್ರವೇಶ ನೀಡುವುದು ಅಥವಾ ಪ್ರವೇಶಿಸಲು ಅನುಮತಿ ನೀಡದಿರುವುದು ಮಕ್ಕದವರ ಅಧಿಕಾರಕ್ಕೊಳಪಟ್ಟಿತ್ತು. ಆದುದರಿಂದ ಅವರು ಮಕ್ಕದ ಒಬ್ಬ ಗಣ್ಯ ಮಹನೀಯನಾದ ಮುತ್‌ಇಮ್ ಬಿನ್ ಅದೀ ಎಂಬವರಿಗೆ ಹೀಗೆ ಹೇಳಿ ಕಳುಹಿಸಿದರು: "ನಾನು ಮಕ್ಕವನ್ನು ಪ್ರವೇಶಿಸಲು ಬಯಸುತ್ತೇನೆ. ನೀವು ಅರಬ್ ಸಂಪ್ರದಾಯದ ಪ್ರಕಾರ ಮರುಪ್ರವೇಶಕ್ಕೆ ಅನುಮತಿ ನೀಡುವಿರೋ?" ಮುತ್‌ಇಮ್ ಕಠಿಣ ಶತ್ರುವಾಗಿದ್ದರೂ ಸೌಜನ್ಯಶೀಲ ವ್ಯಕ್ತಿಯಾಗಿದ್ದನು. ಆತನು ತನ್ನ ಮಕ್ಕಳನ್ನೂ ಸಂಬಂಧಿಕರನ್ನೂ ತನ್ನೊಂದಿಗೆ ಸೇರಿಸಿಕೊಂಡು ಆಯುಧ ಸನ್ನದ್ಧನಾಗಿ ಕಅ್‌ಬದ ಅಂಗಳದಲ್ಲಿ ಹೋಗಿನಿಂತು, ಹಝ್ರತ್ ಪೈಗಂಬರರಿಗೆ[ಸ] ಮಕ್ಕವನ್ನು ಪ್ರವೇಶಿಸಲು ತಾನು ಅನುಮತಿಸುವುದಾಗಿ ತಿಳಿಸಿದನು. ಹಝ್ರತ್ ಪೈಗಂಬರ್[ಸ] ಮಕ್ಕವನ್ನು ಪ್ರವೇಶಿದರು. ಅವರು ಕಅ್‌ಬದ ಪ್ರದಕ್ಷಿಣೆ ಮಾಡಿದರು. ಮುತ್‌ಇಮ್ ತನ್ನ ಮಕ್ಕಳೊಂದಿಗೆ ಮತ್ತು ಸಂಬಂಧಿಕರೊಂದಿಗೆ ತಮ್ಮ ಖಡ್ಗಗಳನ್ನು ಹಿರಿದು ಹಿಡಿದು ಹಝ್ರತ್ ಪೈಗಂಬರ್‌ರವರನ್ನು ಅವರ ಮನೆಗೆ ತಲಪಿಸಿದನು. ಇದು ಮುತ್‌ಇಮ್ ಹಝ್ರತ್ ಪೈಗಂಬರರಿಗೆ[ಸ] ನೀಡಿದ ಸಂರಕ್ಷಣೆಯ ವಾಗ್ದಾನವಾಗಿರಲಿಲ್ಲ. ಅನಂತರ ಅವರ ಮೇಲೆ ದೌರ್ಜನ್ಯಗಳು ನಡೆದಾಗ ಮುತ್‌ಇಮ್ ಅವರಿಗೆ ಯಾವುದೇ ಸಂರಕ್ಷಣೆಯನ್ನು ಒದಗಿಸಲಿಲ್ಲ. ಮುತ್‌ಇಮ್ ಹಝ್ರತ್ ಪೈಗಂಬರ್‌ರವರಿಗೆ[ಸ] ಮಕ್ಕವನ್ನು ಪ್ರವೇಶಿಸುವ ನ್ಯಾಯಬದ್ಧ ಅನುಮತಿಯನ್ನು ಮಾತ್ರ ನೀಡಿದ್ದನು. ಹಝ್ರತ್ ಪೈಗಂಬರರು[ಸ] ತಾಯಿಫ್ ನಗರಕ್ಕೆ ಹೋದ ಬಗ್ಗೆ ಅವರ ಶತ್ರುಗಳು ಸಹ, "ಪೈಗಂಬರರು ಉಪಮೆಯಿಲ್ಲದ ತ್ಯಾಗ ಮತ್ತು ಸ್ಥಿರತೆಯ ಮಾದರಿಯನ್ನು ತೋರಿಸಿದರು" ಎಂದು ಪ್ರಶಂಸಿರುವರು. ಸರ್ ವಿಲ್ಯಮ್ ಮ್ಯೂರ್ ಹೀಗೆ ಹೇಳುತ್ತಾರೆ: "ಮುಹಮ್ಮದ್‌ರ ತಾಯಿಫ್ ಯಾತ್ರೆ ಬಹಳ ಮಹತ್ವಪೂರ್ಣವಾದುದೂ ಶೌರ್ಯಭರಿತವೂ ಆಗಿತ್ತು. ತನ್ನ ಕೋಮಿನ ಜನರಿಂದ ತಾತ್ಸಾರ ದೃಷ್ಟಿಯಿಂದ ವೀಕ್ಷಿಸಲ್ಪಡುವ ಮತ್ತು ಅವರಿಂದ ಧಿಕ್ಕರಿಸಲ್ಪಟ್ಟ ಒಬ್ಬ ವ್ಯಕ್ತಿ ಏಕದೇವನ ಹೆಸರಿನಲ್ಲಿ ಶೌರ್ಯದಿಂದ ಯೋನಾ(ಯೂನುಸ್) ಪ್ರವಾದಿ ನಿನೇವಾಕ್ಕೆ ಹೋದ ಹಾಗೆ ಒಂದು ವಿಗ್ರಹಾರಾಧಕ ನಗರವನ್ನು ಪಶ್ಚಾತ್ತಾಪದ ಕಡೆಗೆ ಮತ್ತು ಏಕದೇವ ವಿಶ್ವಾಸದ ಕಡೆಗೆ ಆಮಂತ್ರಿಸಲು ಯಾತ್ರೆ ಮಾಡಿದುದು ಅವರು ತನ್ನನ್ನು ಏಕದೇವನಿಂದ ನಿಯುಕ್ತನಾದವನು ಎಂದು ಸಂಪೂರ್ಣವಾಗಿ ನಂಬಿದ್ದರು ಎಂಬುದರ ಬಗ್ಗೆ ಇದು ಬಹಳ ಉಜ್ವಲ ಪ್ರಕಾಶ ಬೀರುತ್ತದೆ."

ಮಕ್ಕ ಪುನಃ ಹಿಂಸೆ ಮತ್ತು ಪರಿಹಾಸದ ಬಾಗಿಲನ್ನು ತೆರೆಯಿತು. ಅಲ್ಲಾಹನ ಪ್ರವಾದಿಗೆ ಪುನಃ ತನ್ನ ಊರು ನರಕವಾಗಲು ತೊಡಗಿತು. ಆದರೆ ಹಝ್ರತ್ ಪೈಗಂಬರ್[ಸ] ಧೈರ್ಯದಿಂದ ಜನರಿಗೆ ದೈವಿಕ ಸಂದೇಶವನ್ನು ತಲಪಿಸುತ್ತಾ ಇದ್ದರು. ಮಕ್ಕ ನಗರದ ರಸ್ತೆಗಳಲ್ಲೂ ಓಣಿಗಳಲ್ಲೂ "ದೇವನೊಬ್ಬನೇ, ದೇವನೊಬ್ಬನೇ" ಎಂಬ ಶಬ್ದ ಉಚ್ಚ ಸ್ವರದಲ್ಲಿ ಕೇಳಿಸುತ್ತಿತ್ತು. ಸ್ನೇಹದಿಂದ, ಪ್ರೀತಿಯಿಂದ ಮತ್ತು ಹಿತಾಕಾಂಕ್ಷೆಯಿಂದ ಅವರು ಮಕ್ಕದ ಜನರಿಗೆ ವಿಗ್ರಹಾರಾಧನೆಯ ವಿರುದ್ಧ ಉಪದೇಶಿಸುತ್ತಾ ಇದ್ದರು. ಜನರು ಉಪದೇಶ ಕೇಳದೆ ಓಡಿದರೆ ಅವರನ್ನು ಹಿಂಬಾಲಿಸಿ ಅವರಿಗೆ ಉಪದೇಶ ನೀಡುತ್ತಿದ್ದರು. ಜನರು ಮುಖ ತಿರುಗಿಸಿದರೂ ಹಝ್ರತ್ ಪೈಗಂಬರ್[ಸ] ತನ್ನ ಮಾತನ್ನು ನಿಲ್ಲಿಸದೆ ಉಪದೇಶವನ್ನು ಮುಂದುವರಿಸುತ್ತಾ ಇದ್ದರು. ಸತ್ಯವು ಮೆಲ್ಲ ಮೆಲ್ಲಗೆ ತನ್ನ ಮನೆಯನ್ನು ಕಟ್ಟುತ್ತಿತ್ತು. ಅಬಿಸೀನಿಯಾಕ್ಕೆ ವಲಸೆ ಹೋಗದೆ ಮಕ್ಕದಲ್ಲಿಯೇ ಉಳಿದಿದ್ದ ಮುಸ್ಲಿಮರು ತಮ್ಮ ಸಂಬಂಧಿಕರು, ಸ್ನೇಹಿತರು, ಸಂಗಡಿಗರು, ನೆರೆಹೊರೆಯವರು ಮೊದಲಾದವರಿಗೆ ಧರ್ಮಸಂದೇಶವನ್ನು ತಲಪಿಸುತ್ತಾ ಇದ್ದರು. ಕೆಲವರ ಹೃದಯಗಳು ಸತ್ಯವಿಶ್ವಾಸದಿಂದ ಪ್ರಕಾಶಗೊಳ್ಳುತ್ತಾ ಇದ್ದವು. ಆಗ ಅವರು ಬಹಿರಂಗವಾಗಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದುದನ್ನು ಪ್ರಕಟಿಸುತ್ತಿದ್ದರು. ಅವರು ಇತರ ಮುಸ್ಲಿಮರೊಂದಿಗೆ ಪೆಟ್ಟು ತಿನ್ನುತ್ತಾ ಕಷ್ಟವನ್ನನುಭವಿಸುವುದರಲ್ಲಿ ಪಾಲುಗಾರರು ಆಗುತ್ತಿದ್ದರು. ಆದರೆ ಎಷ್ಟೋ ಜನರು ಪ್ರಕಾಶವನ್ನು ನೋಡಿದರೂ ಅವರಿಗೆ ಸತ್ಯವನ್ನು ಸ್ವೀಕರಿಸುವ ಭಾಗ್ಯ ಲಭಿಸಿರಲಿಲ್ಲ. ಅವರು ಅಲ್ಲಾಹನ ರಾಜ್ಯಭಾರ ಭೂಮಿಯಲ್ಲಿ ಬರಲಿಯೆಂದೂ ಆಗ ಅದರಲ್ಲಿ ಪ್ರವೇಶಿಸುವ ಎಂದೂ ಕಾಯುತ್ತಾ ಇದ್ದರು.

(ಮುಂದುವರಿಯುವುದು)

## ಹಝ್ರತ್ ಮಸೀಹ್ ಮೌಊದರ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

**(38) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಒಂದು ಸಲ ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ಅಝೀಝುಮ್ ಮಿಯಾನ್ ಶರೀಫ್ ಅಹ್ಮದ್ ಅವರ ಮನೆಯೊಂದಿಗೆ ಹೊಂದಿಕೊಂಡಿರುವ ತಮ್ಮ ಹುಜ್ರಾದಲ್ಲಿ ನಿಂತಿದ್ದರು. ವಾಲಿದಾ ಸಾಹಿಬಾರೂ ಬಹುಶಃ ಅಲ್ಲಿ ಇದ್ದರು. ನಾನು ಯಾವುದೋ ವಿಷಯ ಮಾತನಾಡುತ್ತಾ ಮಿರ್ಝಾ ನಝಾಮುದ್ದೀನ್ ಅವರ ಹೆಸರನ್ನು ಕೇವಲ "ನಿಝಾಮುದ್ದೀನ್" ಎಂದು ಉಚ್ಚರಿಸಿದೆ. ಹಝ್ರತ್ ಮಸೀಹ್ ಮೌಊದ್ ಅ.ಸ. ಅವರು ಹೇಳಿದರು: "ಮಿಯಾನ್! ಕೊನೆಗೂ ಅವನು ನಿನ್ನ ಚಿಕ್ಕಪ್ಪನಲ್ಲವೇ? ಹೀಗೆ ಕೇವಲ ಹೆಸರಿನಿಂದ ಕರೆಯಬಾರದು." ಈ ವಿನೀತನು ಹೇಳುತ್ತಾನೆ: ಮಿರ್ಝಾ ಇಮಾಮುದ್ದೀನ್, ಮಿರ್ಝಾ ನಝಾಮುದ್ದೀನ್ ಮತ್ತು ಮಿರ್ಝಾ ಕಮಾಲುದ್ದೀನ್ ಅವರು ಹಝ್ರತ್ ಮಸೀಹ್ ಮೌಊದ್ ಅ.ಸ. ಅವರ ಸ್ವಂತ ಚಿಕ್ಕಪ್ಪ ಮಿರ್ಜಾ ಗುಲಾಮ್ ಮುಹ್ಯುದ್ದೀನ್ ಸಾಹಿಬರ ಪುತ್ರರಾಗಿದ್ದರು. ಅವರ ಸ್ವಂತ ಸಹೋದರಿ (ನಮ್ಮ ತಾಯಿ ಸಾಹಿಬಾ) ನಮ್ಮ ತಂದೆಯ ಸಹೋದರ ಮಿರ್ಜಾ ಗುಲಾಮ್ ಖಾದಿರ್ ಸಾಹಿಬರೊಂದಿಗೆ ವಿವಾಹವಾಗಿದ್ದರು. ಇಷ್ಟೊಂದು ನಿಕಟವಾದ ಕುಟುಂಬ ಸಂಬಂಧವಿದ್ದರೂ ಅವರು ಹಝ್ರತ್ ಅವರ ತೀವ್ರ ವಿರೋಧಿಗಳಾಗಿದ್ದರು. ಅವರ ವಿರೋಧಕ್ಕೆ ಮುಖ್ಯ ಕಾರಣ ಧಾರ್ಮಿಕವಾಗಿತ್ತು. ಅವರು ಅತ್ಯಂತ ಲೌಕಿಕರು ಮತ್ತು ಧರ್ಮವಿಮುಖರಾಗಿದ್ದರು. ವಿಶೇಷವಾಗಿ ಮಿರ್ಝಾ ಇಮಾಮುದ್ದೀನ್, ವಿರೋಧದ ನಾಯಕನಾಗಿದ್ದು, ಇಸ್ಲಾಮಿನ ಕುರಿತು ವ್ಯಂಗ್ಯ ಮಾಡುತ್ತಿದ್ದನು. ಈ ಕಾರಣದಿಂದ ನಮ್ಮೊಂದಿಗೆ ಅವರ ಯಾವುದೇ ಸಂಪರ್ಕವಿರಲಿಲ್ಲ. ಅದೇ ದೂರದ ಪ್ರಭಾವದಿಂದ ನಾನು ಕೇವಲ "ನಿಝಾಮುದ್ದೀನ್" ಎಂದು ಹೇಳಿಬಿಟ್ಟೆ. ಆದರೆ ಹಝ್ರತ್ ಅವರ ಉನ್ನತ ಅಖ್ಲಾಕ್‌ಗೆ ಈ ಮಾತು ಒಪ್ಪಲಿಲ್ಲ.

**(39) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಹಝ್ರತ್ ವಾಲಿದಾ ಸಾಹಿಬಾ ನನಗೆ ವಿವರಿಸಿದರು: ಒಂದು ಸಲ ಮಿರ್ಝಾ ಇಮಾಮುದ್ದೀನ್ ತಮ್ಮ ಮನೆಯಲ್ಲಿ ಯಾರನ್ನೋ ಉದ್ದೇಶಿಸಿ ಜೋರಾಗಿ ಮಾತನಾಡುತ್ತಿದ್ದರು. ಅವರು, "ಭಾಯೀ ಜನರು (ಅಂದರೆ ಹುಝೂರ್(ಅ) ಅವರ ಕಡೆಗೆ ಸೂಚಿಸುತ್ತಾ) ಅಂಗಡಿಗಳನ್ನು ನಡೆಸಿ ಲಾಭ ಪಡೆಯುತ್ತಿದ್ದಾರೆ; ನಾವೂ ಯಾವುದಾದರೂ ಅಂಗಡಿ ನಡೆಸೋಣ" ಎಂದು ಹೇಳುತ್ತಿದ್ದರು. ವಾಲಿದಾ ಸಾಹಿಬಾ ಹೇಳುತ್ತಿದ್ದರು: ನಂತರ ಅವನು ಚೂಹಡಾಗಳ ಪೀರಿಯ ಪರಂಪರೆಯನ್ನು ಪ್ರಾರಂಭಿಸಿದನು. ವಾಲಿದಾ ಸಾಹಿಬಾ ಹೇಳಿದರು: "ನಿಜವಾದ ಮತ್ತು ಪ್ರಮುಖ ವಿರೋಧಿ ಮಿರ್ಝಾ ಇಮಾಮುದ್ದೀನ್‌ನೇ ಆಗಿದ್ದನು. ಅವನ ಮರಣದ ನಂತರ ಮಿರ್ಝಾ ನಝಾಮುದ್ದೀನ್ ಮುಂತಾದವರಿಂದ ಅಷ್ಟೊಂದು ತೀವ್ರವಾದ ವಿರೋಧ ಉಳಿಯಲಿಲ್ಲ." ವಿನೀತನು ಹೇಳುತ್ತಾನೆ: ಮಿರ್ಝಾ ಇಮಾಮುದ್ದೀನ್ ಅವರ ಪುತ್ರಿ, ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬರೊಂದಿಗೆ ವಿವಾಹವಾಗಿರುವವರು, ಈಗ ಬಹಳ ಹಿಂದಿನಿಂದಲೇ ಅಹ್ಮದಿಯಾಗಿದ್ದಾರೆ.

**(40) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಖಾಝಿ ಅಮೀರ್ ಹುಸೈನ್ ಸಾಹಿಬರು ನಮಗೆ ವಿವರಿಸಿದರು: ಒಂದು ಸಲ ಖ್ವಾಜಾ ಕಮಾಲುದ್ದೀನ್ ಸಾಹಿಬರೊಂದಿಗೆ ನನಗೆ ಯಾವುದೋ ವಿಚಾರದಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಖ್ವಾಜಾ ಸಾಹಿಬರು ನನಗೆ, "ಖಾಝಿ ಸಾಹಿಬ್, ಹುಝೂರ್(ಅ) ಅವರು ನನ್ನನ್ನು ಎಷ್ಟು ಗೌರವಿಸುತ್ತಾರೆ ಎಂಬುದು ನಿಮಗೆ ತಿಳಿದಿಲ್ಲವೇ?" ಎಂದು ಹೇಳಿದರು. ನಾನು, "ಹೌದು, ಅವರು ನಿಮ್ಮನ್ನು ಬಹಳ ಗೌರವಿಸುತ್ತಾರೆ ಎಂಬುದು ನನಗೆ ತಿಳಿದಿದೆ. ಆದರೆ ನಾನು ನಿಮಗೆ ಒಂದು ವಿಷಯ ಹೇಳುತ್ತೇನೆ" ಎಂದು ಹೇಳಿದೆ. ಒಮ್ಮೆ ನಾನು ಅಮೃತಸರದಿಂದ ಖಾದಿಯಾನಿಗೆ ಬಂದೆ. ಹುಝೂರ್(ಅ) ಅವರಿಗೆ ಸುದ್ದಿ ನೀಡಿ ಅವರೊಂದಿಗೆ ಭೇಟಿಯಾದೆ. ಖಾಝಿ ಸಾಹಿಬರು ಹೇಳಿದರು: "ಆ ಸಮಯದವರೆಗೆ ನಮಗೆ ಭೇಟಿಯ ಆದಾಬ್ ಸರಿಯಾಗಿ ತಿಳಿದಿರಲಿಲ್ಲ. ಭೇಟಿಯಾಗಬೇಕಾದಾಗ ಹುಝೂರ್(ಅ) ಅವರಿಗೆ ತಿಳಿಸಿ, ಒಳಗಿನಿಂದ ಅವರನ್ನು ಕರೆಯಿಸುತ್ತಿದ್ದೆವು ಅಥವಾ ಹುಝೂರ್(ಅ) ಅವರೇ ಕೇಳಿ ಹೊರಗೆ ಬರುತ್ತಿದ್ದರು. ನಂತರ ಈ ವಿಧಾನ ಬದಲಾಯಿತು ಮತ್ತು ರಸೂಲ್ ಅವರನ್ನು ಈ ರೀತಿಯಾಗಿ ಕರೆಯಬಾರದು ಎಂಬುದು ನಮಗೆ ತಿಳಿಯಿತು." ನಾನು ಹುಝೂರ್(ಅ) ಅವರೊಂದಿಗೆ ಭೇಟಿಯಾದೆ. ಅವರು ಶೈಖ್ ಹಾಮಿದ್ ಅಲಿಯನ್ನು ಕರೆದು, "ಖಾಝಿ ಸಾಹಿಬರಿಗಾಗಿ ಚಹಾ ತಂದುಕೊಡು" ಎಂದು ಆದೇಶಿಸಿದರು. ಆದರೆ ಆ ಸಮಯದಲ್ಲಿ ನನಗೆ ಬಹಳ ಭಯವಾಯಿತು. "ಈ ಆತಿಥ್ಯವು ಮುನಾಫಿಖರು ಮತ್ತು ದುರ್ಬಲ ಈಮಾನ್ ಹೊಂದಿದವರಿಗೆ ಮಾಡುವ ರೀತಿಯದ್ದಾಗಿರಬಹುದೇ?" ಎಂದು ನಾನು ಭಯಪಟ್ಟು ಬಹಳಷ್ಟು ಇಸ್ತಿಗ್ಫಾರ್ ಮಾಡಿದೆ. ಈ ಘಟನೆಯನ್ನು ಹೇಳಿ ನಾನು ಖ್ವಾಜಾ ಸಾಹಿಬರಿಗೆ, "ಖ್ವಾಜಾ ಸಾಹಿಬ್, ನಿಮ್ಮ ಗೌರವವೂ ಇದೇ ರೀತಿಯದ್ದಾಗಿರಬಾರದು" ಎಂದು ಹೇಳಿದೆ. ನಂತರ ಅವರಿಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರ ಒಂದು ಘಟನೆ ತಿಳಿಸಿದೆ. ಹದೀಸಿನಲ್ಲಿ ಬರುತ್ತದೆ: ಒಂದು ಸಲ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರು ಕೆಲವು ಸಂಪತ್ತನ್ನು ಹಂಚಿದರು. ಆದರೆ ಒಬ್ಬ ವ್ಯಕ್ತಿಗೆ ಏನನ್ನೂ ನೀಡಲಿಲ್ಲ. ಸಅದ್ ಬಿನ್ ಅಬೀ ವಕ್ಕಾಸ್ ರ.ಅ. ಅವರ ಅಭಿಪ್ರಾಯದಲ್ಲಿ, ಆ ವ್ಯಕ್ತಿಯು ತಾನು ನೀಡಿದವರಿಗಿಂತ ಹೆಚ್ಚು ಮುಮಿನ್ ಮತ್ತು ಅದಕ್ಕೆ ಹೆಚ್ಚು ಅರ್ಹನಾಗಿದ್ದನು. ಸಅದ್ ರ.ಅ. ಅವರು ಆ ವ್ಯಕ್ತಿಯ ಕಡೆಗೆ ಗಮನ ಹರಿಸುವಂತೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರ ಗಮನ ಸೆಳೆದರು. ಆದರೆ ನೀವು ಮೌನವಾಗಿದ್ದರು. ಮತ್ತೊಮ್ಮೆ ಹೇಳಿದರು; ಆಗಲೂ ನೀವು ಮೌನವಾಗಿದ್ದರು. ಮೂರನೇ ಸಲ ಗಮನ ಸೆಳೆದಾಗ, ನೀವು ಹೇಳಿದರು: "ಸಅದ್! ನೀನು ನಮ್ಮೊಂದಿಗೆ ವಾದ ಮಾಡುತ್ತಿದ್ದೀಯ." ನಂತರ ನೀವು ಪ್ರಮಾಣಪೂರ್ವಕವಾಗಿ ವಿಷಯವನ್ನು ವಿವರಿಸಿ, ಕೆಲವೊಮ್ಮೆ ಒಬ್ಬ ವ್ಯಕ್ತಿ ನನ್ನ ಹೃದಯಕ್ಕೆ ಇನ್ನೊಬ್ಬನಿಗಿಂತ ಹೆಚ್ಚು ಪ್ರಿಯನಾಗಿದ್ದರೂ, ಅವನಿಗೆ ನಾನು ಏನನ್ನಾದರೂ ನೀಡುತ್ತೇನೆ; ಏಕೆಂದರೆ ಅವನು ಮುಖಕೆಳಗಾಗಿ ನರಕಾಗ್ನಿಗೆ ಬೀಳದಿರಲೆಂದು, ಅವನ ಹೃದಯವನ್ನು ಇಸ್ಲಾಮಿನ ಕಡೆಗೆ ಸೆಳೆಯುವ ಉದ್ದೇಶದಿಂದ ನಾನು ಹೀಗೆ ಮಾಡುತ್ತೇನೆ ಎಂದು ತಿಳಿಸಿದರು. ಖಾಝಿ ಸಾಹಿಬರು ಹೇಳಿದರು: ಯಾರ ಈಮಾನ್‌ನ ಸ್ಥಿತಿ ದೃಢ ಮತ್ತು ತೃಪ್ತಿಕರವಾಗಿದೆಯೋ, ಅವರಿಗೆ ಈ ಬಾಹ್ಯ ಗೌರವ ಮತ್ತು ವಿಶೇಷ ಆತಿಥ್ಯದ ಅಗತ್ಯವಿರುವುದಿಲ್ಲ. ಅವರೊಂದಿಗೆ ಇನ್ನೊಂದು ರೀತಿಯಲ್ಲಿ ವರ್ತಿಸಲಾಗುತ್ತದೆ.

(41) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ಹಝ್ರತ್ ವಾಲಿದಾ ಸಾಹಿಬಾ ಅವರು ನನಗೆ ತಿಳಿಸಿದಂತೆ, ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರಿಗೆ ಆರಂಭದಿಂದಲೇ ಮಿರ್ಝಾ ಫಝ್ಲ್ ಅಹ್ಮದ್ ಅವರ ತಾಯಿಯವರೊಂದಿಗೆ, ಅವರನ್ನು ಸಾಮಾನ್ಯವಾಗಿ ಜನರು "ಫಜ್ಜೇ ದೀ ಮಾ?" ಎಂದು ಕರೆಯುತ್ತಿದ್ದರು, ಒಂದು ರೀತಿಯ ದೂರಾವಸ್ಥೆ ಇತ್ತು. ಇದಕ್ಕೆ ಕಾರಣವೇನೆಂದರೆ, ಹಝ್ರತ್ ಸಾಹಿಬ್ ಅವರ ಸಂಬಂಧಿಕರಿಗೆ ದೀನ್‌ನ ಬಗ್ಗೆ ಬಹಳ ನಿರಾಸಕ್ತಿ ಇತ್ತು ಮತ್ತು ಅವರ ಒಲವು ಅವರ ಕಡೆಗಿತ್ತು. ಅವರೂ ಸಹ ಅದೇ ರೀತಿಯ ಮನೋಭಾವದಿಂದ ಪ್ರಭಾವಿತರಾಗಿದ್ದರು. ಆದ್ದರಿಂದ ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಅವರೊಂದಿಗೆ ದಾಂಪತ್ಯ ಸಂಬಂಧವನ್ನು ತ್ಯಜಿಸಿದ್ದರು. ಆದರೆ ಅವರಿಗೆ ಜೀವನ ನಿರ್ವಹಣೆಯ ಖರ್ಚು ಇತ್ಯಾದಿಗಳನ್ನು ನಿಯಮಿತವಾಗಿ ನೀಡುತ್ತಿದ್ದರು. ವಾಲಿದಾ ಸಾಹಿಬಾ ಅವರು ಹೇಳಿದರು: ನನ್ನ ವಿವಾಹವಾದ ನಂತರ ಹಝ್ರತ್ ಸಾಹಿಬ್ ಅವರು ಅವರ ಬಳಿಗೆ ಈ ಸಂದೇಶವನ್ನು ಕಳುಹಿಸಿದರು: "ಇಲ್ಲಿಯವರೆಗೆ ಹೇಗೆ ನಡೆಯುತ್ತಿತ್ತೋ ಹಾಗೆಯೇ ನಡೆಯಿತು. ಆದರೆ ಈಗ ನಾನು ಮತ್ತೊಂದು ವಿವಾಹ ಮಾಡಿಕೊಂಡಿದ್ದೇನೆ. ಆದ್ದರಿಂದ ಈಗ ನಾನು ಇಬ್ಬರು ಪತ್ನಿಯರ ನಡುವೆ ಸಮಾನತೆಯನ್ನು ಕಾಪಾಡದಿದ್ದರೆ ನಾನು ಪಾಪಿಯಾಗುತ್ತೇನೆ. ಹೀಗಾಗಿ ಈಗ ಎರಡು ವಿಷಯಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕು: ನೀನು ನನ್ನಿಂದ ವಿಚ್ಛೇದನವನ್ನು ತೆಗೆದುಕೋ, ಅಥವಾ ನಿನ್ನ ದಾಂಪತ್ಯ ಹಕ್ಕುಗಳನ್ನು ನನಗೆ ಬಿಟ್ಟುಬಿಡು. ನಾನು ನಿನಗೆ ಖರ್ಚನ್ನು ನೀಡುತ್ತಲೇ ಇರುತ್ತೇನೆ." ಅವರು ಉತ್ತರ ಕಳುಹಿಸಿದರು: "ಈಗ ನಾನು ವೃದ್ಧಾಪ್ಯದಲ್ಲಿ ವಿಚ್ಛೇದನವನ್ನು ಹೇಗೆ ತೆಗೆದುಕೊಳ್ಳಲಿ? ನನಗೆ ಖರ್ಚು ದೊರೆಯುತ್ತಿರಲಿ; ನನ್ನ ಉಳಿದ ಹಕ್ಕುಗಳನ್ನು ನಾನು ಬಿಟ್ಟುಬಿಡುತ್ತೇನೆ." ವಾಲಿದಾ ಸಾಹಿಬಾ ಅವರು ಹೇಳುತ್ತಿದ್ದರು: ಅದರಂತೆ ಮುಂದೆಯೂ ನಡೆಯುತ್ತಿತ್ತು. ಕೊನೆಗೆ ಮುಹಮ್ಮದಿ ಬೇಗಂ ಅವರ ವಿವಾಹದ ವಿಷಯ ಉದ್ಭವಿಸಿತು. ಹಝ್ರತ್ ಸಾಹಿಬ್ ಅವರ ಸಂಬಂಧಿಕರು ವಿರೋಧಿಸಿ ಮುಹಮ್ಮದಿ ಬೇಗಂ ಅವರ ವಿವಾಹವನ್ನು ಬೇರೆ ಸ್ಥಳದಲ್ಲಿ ಮಾಡಿಸಿದರು. ಆದರೆ ಫಝ್ಲ್ ಅಹ್ಮದ್ ಅವರ ತಾಯಿಯವರು ಅವರೊಂದಿಗೆ ಸಂಬಂಧವನ್ನು ಕಡಿದುಕೊಳ್ಳಲಿಲ್ಲ; ಬದಲಾಗಿ ಅವರೊಂದಿಗೇ ಇದ್ದರು. ಆಗ ಹಝ್ರತ್ ಸಾಹಿಬ್ ಅವರು ಅವರಿಗೆ ವಿಚ್ಛೇದನ ನೀಡಿದರು.

ನಾನು ವಿನಮ್ರವಾಗಿ ಹೇಳುವುದೇನೆಂದರೆ, ಹಝ್ರತ್ ಸಾಹಿಬ್ ಅವರು ಈ ವಿಚ್ಛೇದನ ನೀಡಿದ್ದು ಅವರು 2 ಮೇ 1891 ರಂದು ಪ್ರಕಟಿಸಿದ ಆ ಇಶ್ತಿಹಾರ್‌ಗೆ ಅನುಗುಣವಾಗಿತ್ತು. ಅದರ ಶೀರ್ಷಿಕೆ: **"ಇಶ್ತಿಹಾರ್ ನುಸ್ರತ್–ಎ–ದೀನ್ ವ ಕತಅ ತಅಲ್ಲುಕ್ ಅಝ್ ಅಕಾರಿಬ್–ಎ–ಮುಖಾಲಿಫ್–ಎ–ದೀನ್"** ಅದರಲ್ಲವರು ಹೀಗೆ ಪ್ರಕಟಿಸಿದ್ದರು: ಮಿರ್ಜಾ ಸುಲ್ತಾನ್ ಅಹ್ಮದ್ ಮತ್ತು ಅವರ ತಾಯಿಯವರು ಈ ವಿಷಯದಲ್ಲಿ ವಿರೋಧಾತ್ಮಕ ಪ್ರಯತ್ನಗಳಿಂದ ಹಿಂದೆ ಸರಿಯದಿದ್ದರೆ, ಹಝ್ರತ್ ಸಾಹಿಬ್ ಅವರ ಕಡೆಯಿಂದ ಮಿರ್ಜಾ ಸುಲ್ತಾನ್ ಅಹ್ಮದ್ ಆಖ್ (ಸಂಬಂಧವಿಚ್ಛೇದಿತ) ಮತ್ತು ಮಹ್ರೂಮ್–ಉಲ್–ಇರ್ಸ್ (ಪಿತ್ರಾರ್ಜಿತ ಆಸ್ತಿಯ ವಾರಸುದಾರಿಕೆಯಿಂದ ವಂಚಿತ) ಎಂದು ಪರಿಗಣಿಸಲ್ಪಡುವರು ಮತ್ತು ಅವರ ತಾಯಿಗೆ ಹಝ್ರತ್ ಸಾಹಿಬ್ ಅವರ ಕಡೆಯಿಂದ ವಿಚ್ಛೇದನ ನೀಡಲಾಗುವುದು. ವಾಲಿದಾ ಸಾಹಿಬಾ ಅವರು ಹೇಳುತ್ತಿದ್ದರು: ಆ ಸಮಯದಲ್ಲಿ ಫಝ್ಲ್ ಅಹ್ಮದ್ ಅವರು ತಮ್ಮನ್ನು ಆಖ್ ಎಂದು ಘೋಷಿಸಲ್ಪಡುವುದರಿಂದ ರಕ್ಷಿಸಿಕೊಂಡರು. ಇದಲ್ಲದೆ ವಾಲಿದಾ ಸಾಹಿಬಾ ಅವರು ಹೇಳಿದರು: ಈ ಘಟನೆ ನಡೆದ ನಂತರ ಒಮ್ಮೆ ಸುಲ್ತಾನ್ ಅಹ್ಮದ್ ಅವರ ತಾಯಿ ಅಸ್ವಸ್ಥರಾದರು. ಹಝ್ರತ್ ಸಾಹಿಬ್ ಅವರ ಕಡೆಯಿಂದ ನನಗೆ ಅನುಮತಿ ಇದ್ದುದರಿಂದ, ಅವರನ್ನು ನೋಡಲು ನಾನು ಹೋದೆ. ಹಿಂದಿರುಗಿ ಬಂದು ಹಝ್ರತ್ ಸಾಹಿಬ್ ಅವರಿಗೆ, "ಫಜ್ಜೇ ದೀ ಮಾ? ಅಸ್ವಸ್ಥರಾಗಿದ್ದಾರೆ ಮತ್ತು ಅವರಿಗೆ ಈ ತೊಂದರೆ ಇದೆ" ಎಂದು ತಿಳಿಸಿದೆ. ಅವರು ಮೌನವಾಗಿದ್ದರು. ನಾನು ಎರಡನೇ ಬಾರಿ ಹೇಳಿದಾಗ, ಅವರು ಹೇಳಿದರು: "ನಾನು ನಿನಗೆ ಎರಡು ಮಾತ್ರೆಗಳನ್ನು ಕೊಡುತ್ತೇನೆ. ಇವುಗಳನ್ನು ಅವರಿಗೆ ಕೊಟ್ಟುಬಾ; ಆದರೆ ನಿನ್ನ ಕಡೆಯಿಂದ ಕೊಡು, ನನ್ನ ಹೆಸರನ್ನು ಹೇಳಬೇಡ." ವಾಲಿದಾ ಸಾಹಿಬಾ ಅವರು ಹೇಳುತ್ತಿದ್ದರು: ಇನ್ನೂ ಕೆಲವು ಸಂದರ್ಭಗಳಲ್ಲಿ ಹಝ್ರತ್ ಸಾಹಿಬ್ ಅವರು ಸೂಚನೆ ಮತ್ತು ಪರೋಕ್ಷವಾಗಿ, ಅವರ ಹೆಸರು ಮಧ್ಯೆ ಬರದ ರೀತಿಯಲ್ಲಿ, ನನ್ನ ಕಡೆಯಿಂದ ಅವರಿಗೆ ಕೆಲವೊಮ್ಮೆ ಸಹಾಯ ಮಾಡಬಹುದು ಎಂಬುದನ್ನು ನನಗೆ ತಿಳಿಸುತ್ತಿದ್ದರು. ಹೀಗಾಗಿ ನಾನು ಸಹಾಯ ಮಾಡುತ್ತಿದ್ದೆ.

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 24 September 2026, Issue No. 39

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/-) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

### ಅಲ್ಬೇನಿಯಾದ ನಿಯೋಗದ ಭೇಟಿ

ತದನಂತರ, ಬೆಳಿಗ್ಗೆ 11:58 ಕ್ಕೆ, ಅಲ್ಬೇನಿಯಾದ ನಿಯೋಗವು ಹುಝೂರ್ ಅನ್ವರ್(ಅತಬಿಅ) ಅವರನ್ನು ಭೇಟಿ ಮಾಡುವ ಗೌರವವನ್ನು ಹೊಂದಿತ್ತು. ಅಲ್ಬೇನಿಯಾದ 20 ಜನರ ನಿಯೋಗವು ಸಭೆಗೆ ಸೇರಿತ್ತು.

ಹುಝೂರ್ ಅನ್ವರ್(ಅತಬಿಅ) ವಿಚಾರಿಸಿದಾಗ, ಮೊದಲ ಬಾರಿಗೆ ಐದು ಜನರು ಬಂದಿದ್ದಾರೆಂದು ಹೇಳಲಾಯಿತು. ಹುಝೂರ್ ಅನ್ವರ್(ಅತಬಿಅ) ಅವರನ್ನು ನೀವು ಜಲ್ಸವನ್ನು ಹೇಗೆ ಇಷ್ಟಪಟ್ಟಿದ್ದೀರಿ ಎಂದು ಕೇಳಿದರು. ಜಲ್ಸವು ತುಂಬಾ ಅದ್ಭುತ ಮತ್ತು ಉತ್ತಮವಾಗಿ ಸಂಘಟಿತವಾಗಿದೆ ಎಂದು ಎಲ್ಲರೂ ವ್ಯಕ್ತಪಡಿಸಿದರು.

ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರು ತಾವು ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ ಬೋಧಿಸುತ್ತಿದ್ದೇವೆ ಮತ್ತು ಸಂಶೋಧನೆಯನ್ನೂ ಮಾಡುತ್ತಿದ್ದೇವೆ ಎಂದು ಹೇಳಿದರು. ಹುಝೂರ್ ಅನ್ವರ್(ಅತಬಿಅ) ಅವರು ಯಾವ ರೀತಿಯ ಸಂಶೋಧನೆ ಮಾಡುತ್ತಿದ್ದಾರೆ ಎಂದು ವಿಚಾರಿಸಿದಾಗ, ವಿಶೇಷವಾಗಿ ಮಕ್ಕಳ ಕಾಯಿಲೆಗಳಿಗೆ ಸಂಬಂಧಿಸಿದ ಸಂಶೋಧನೆ ಇದೆ ಮತ್ತು ಗರ್ಭಾವಸ್ಥೆಯಲ್ಲಿ ಮಕ್ಕಳಿಗೆ ಬರುವ ಕಾಯಿಲೆಗಳು ಸಹ ನನ್ನ ಸಂಶೋಧನೆಯಲ್ಲಿ ಸೇರಿವೆ ಎಂದು ಹೇಳಿದರು.

ನಮ್ಮ ಆಧ್ಯಾತ್ಮಿಕ ಸ್ಥಿತಿ ಕ್ಷೀಣಿಸುತ್ತಿದೆ ಎಂದು ಅಹ್ಮದಿ ಸ್ನೇಹಿತರೊಬ್ಬರು ಹೇಳಿದರು. ಕಳೆದ ಕೆಲವು ವರ್ಷಗಳಿಂದ ಯಾವುದೇ ಜಲ್ಸ ನಡೆದಿಲ್ಲ. ಜಲ್ಸಕ್ಕೆ ಬರುವುದು ತುಂಬಾ ಸಂತೋಷ ತಂದಿದೆ. ನಾವು ಇಲ್ಲಿಂದ ವರ್ಷಪೂರ್ತಿ ನಮ್ಮ ಬ್ಯಾಟರಿಗಳನ್ನು ಚಾರ್ಜ್ ಮಾಡಲು ಹೋಗುತ್ತೇವೆ. ನಮಗೆ ಹುಝೂರ್ ಅನ್ವರ್(ಅತಬಿಅ) ರ ಮೇಲೆ ಅಪಾರ ಪ್ರೀತಿ ಇದೆ. ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ.

ಒಬ್ಬ ಅತಿಥಿ ನಮಾಝಿನ ಸಮಯದಲ್ಲಿ ವಿವಿಧ ಆಲೋಚನೆಗಳು ಮನಸ್ಸಿಗೆ ಬರುತ್ತವೆಯೇ ಎಂದು ಕೇಳಿದಾಗ, ಹುಝೂರ್ ಅನ್ವರ್(ಅತಬಿಅ) ಹೇಳಿದರು: **ಆವುದು ಬಿಲ್ಲಾಹಿ** ಮತ್ತು **ಲಾಹೌಲ್ ವಲಾ ಖುವತಾ ಇಲ್ಲಾ ಬಿಲ್ಲಾಹಿ ಅಲ್-'ಅಲಿ ಅಲ್-'ಅಜೀಮ್** ಪಠಿಸಿ ನಂತರ ನಮಾಝಿನ ಮೇಲೆ ಗಮನಹರಿಸಿ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮಾಝಿನ ಸಮಯದಲ್ಲಿ ನಮಾಝ್ ತಪ್ಪಿಸಲಾಗುತ್ತಿದೆ ಎಂಬ ಆಲೋಚನೆಗಳು ಪದೇ ಪದೇ ಮನಸ್ಸಿಗೆ ಬಂದರೆ, ಸರ್ವಶಕ್ತ ಅಲ್ಲಾಹನ ಕಡೆಗೆ ಸುಆವಿನೊಂದಿಗೆ ಪ್ರಾರ್ಥನೆಯ ಮೇಲೆ ಗಮನಹರಿಸಿರಿ. **ಲಾಹೌಲ್ ವಲಾ ಖುವತಾ, ಆವುದು ಬಿಲ್ಲಾಹ್** ಅನ್ನು ಪಠಿಸಿರಿ.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಇದು ನಿರಂತರ ಹೋರಾಟ ಮತ್ತು ಪ್ರಯತ್ನವಾಗಿದೆ. ಇದನ್ನು ಒಮ್ಮೆಯಾದರೂ ಬರುವುದರಿಂದ ಗುಣಪಡಿಸಬಹುದು.

ಅಲ್ಬೇನಿಯನ್ ಜಮಾಅತ್‌ನ ಉಪಾಧ್ಯಕ್ಷರು ತಾವು ಹಲವು ಬಾರಿ ಸಭೆಗೆ ಬಂದಿರುವುದಾಗಿ ಹೇಳಿದರು. ಹುಝೂರ್ ಅನ್ವರ್(ಅತಬಿಅ) ಪದಾಧಿಕಾರಿಗಳ ಬಗ್ಗೆ ಧರ್ಮೋಪದೇಶ ನೀಡಿದ್ದರು. ಹುಝೂರ್ ಅನ್ವರ್(ಅತಬಿಅ) ಹೇಳಿದರು: ನಿನ್ನೆ ನನ್ನ ಭಾಷಣದಲ್ಲಿ ನಾನು ನಿಮಗೆ ಹೇಳಿದ್ದೆ, ನಿಜವಾದ ಇಸ್ಲಾಂ ಧರ್ಮವನ್ನು ಬೋಧಿಸುವ ನಿಮ್ಮ ಸ್ವಂತ ಉದಾಹರಣೆಯನ್ನು ನೀವು ಪ್ರಸ್ತುತಪಡಿಸಬೇಕು. ನಿಮ್ಮ ಈ ಪ್ರಾಯೋಗಿಕ ಉದಾಹರಣೆ ಮೌನ ಧರ್ಮೋಪದೇಶ. ಹುಝೂರ್ ಅನ್ವರ್(ಅತಬಿಅ) ಹೇಳಿದರು: ಪದಾಧಿಕಾರಿಗಳ ಬಗ್ಗೆ ಧರ್ಮೋಪದೇಶವು ನಿಮಗಾಗಿಯೂ ಆಗಿದೆ.

ನಾವು ಮಸೀದಿಯ ಆವರಣದಲ್ಲಿ 220 ಆಲಿವ್ ಮರಗಳನ್ನು ನೆಟ್ಟಿದ್ದೇವೆ, ನಾವು ನಮ್ಮದೇ ಆದ ಎಣ್ಣೆಯನ್ನು ತಂದಿದ್ದೇವೆ ಎಂದು ಸ್ನೇಹಿತರೊಬ್ಬರು ಹೇಳಿದರು. ಹುಝೂರ್ ಅನ್ವರ್(ಅತಬಿಅ) ಅವರನ್ನು ವಿಚಾರಿಸಿದಾಗ, ನಾವೇ ಹೋಗಿ ನಮ್ಮ ಮುಂದೆ ಈ ಎಣ್ಣೆಯನ್ನು ಹೊರತೆಗೆದಿದ್ದೇವೆ ಎಂದು ಅವರು ಹೇಳಿದರು.

* ಅಲ್ಬೇನಿಯನ್ ಅಹ್ಮದಿ, ಗೆಜಿಮ್ ಮುಝಾಕಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ ಹೇಳಿದರು: ಈ ಜಲ್ಸವು ಅವರಿಗೆ ಅಸಾಮಾನ್ಯವಾಗಿ ಭವ್ಯವಾಗಿ ಕಾಣುತ್ತಿತ್ತು. ವ್ಯವಸ್ಥೆಗಳು ತುಂಬಾ ಹೆಚ್ಚಾಗಿದ್ದವು. ಮತ್ತು ಅವರು ಕಣ್ಣೀರಿನ ಕಣ್ಣುಗಳಿಂದ ಹೇಳಿದರು: ಕೊರೊನಾದಿಂದಾಗಿ ವರ್ಷಗಳ ಅಂತರದಿಂದಾಗಿ, ನಮ್ಮ ಆತ್ಮವು ಅಗತ್ಯವಾಗಿತ್ತು. ಜಲ್ಸ ಮತ್ತು ಹುಝೂರ್ ಅವರೊಂದಿಗಿನ ಭೇಟಿಯಿಂದಾಗಿ, ಆತ್ಮವು ಒಂದು ವರ್ಷದವರೆಗೆ ಚಾರ್ಜ್ ಆಗುತ್ತಿದ್ದಂತೆ.

* ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಮತ್ತು ನಾಲ್ಕು ವರ್ಷಗಳ ಸಂಶೋಧನೆಯ ನಂತರ 2020 ರಲ್ಲಿ ಬೈಅತ್ ಮಾಡಿದ್ದ ಅಲ್ಬೇನಿಯಾದ ಅತಿಥಿ ಕ್ಲಾಫರ್ ಕೂಸಿ ಹೇಳಿದರು: ಜಲ್ಸ ಸಾಲಾನವು ಅವರಿಗೆ ತುಂಬಾ ಸ್ಫೂರ್ತಿದಾಯಕವಾಗಿತ್ತು ಮತ್ತು ಅವರಿಗೆ ಬಹಳಷ್ಟು ಸಕಾರಾತ್ಮಕ ಶಕ್ತಿಯನ್ನು ನೀಡಿತು. ಜಲ್ಸದ ಸ್ಥಳದಲ್ಲಿ ಹುಝೂರ್ ಅವರೊಂದಿಗೆ ನಮಾಝ್ ನಿರ್ವಹಿಸುವಾಗ ನನ್ನ ಕಣ್ಣೀರನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ನಾನು ಹುಝೂರ್ ಅನ್ನು ಮೊದಲ ಬಾರಿಗೆ ನೋಡಿದೆ. ಅದೇ ರೀತಿ, ಬೈಅತ್ ಸಮಾರಂಭವು ತುಂಬಾ ಭಾವನಾತ್ಮಕವಾಗಿತ್ತು. ಜಲ್ಸದಲ್ಲಿ ಹುಝೂರ್ ಅನ್ವರ್(ಅತಬಿಅ) ಅನ್ನು ನೋಡುವಾಗ, ಹಝೂರ್ ನನಗೆ ಭದ್ರತೆಯ ಭಾವನೆಯನ್ನು ನೀಡುತ್ತಿದ್ದಾರೆ ಎಂದು ನನಗೆ ಅನಿಸಿತು ಮತ್ತು ಇವರು ನನಗೆ ಮತ್ತು ನನ್ನ ಅನುಯಾಯಿಗೆ ಪ್ರಿಯವಾದ ವ್ಯಕ್ತಿ ಎಂದು ನನಗೆ ಮನವರಿಕೆಯಾಗುತ್ತಿದೆ. ಹುಝೂರ್ ಅನ್ವರ್(ಅತಬಿಅ) ಅವರು ಜಮಾಅತಿನ ಸದಸ್ಯರನ್ನು ತುಂಬಾ ಪ್ರೀತಿಸುವ ದಯಾಳು ತಂದೆ ಎಂದು ತೋರುತ್ತದೆ. ಇದರ ಹೊರತಾಗಿ, ನನಗೆ ಇಷ್ಟವಾಗದ ಒಂದು ವಿಷಯವೆಂದರೆ ಜಲ್ಸದಲ್ಲಿ ಹಲವು ಬಾರಿ ಕೆಲವರು ಭಾಷಣ ಮುಗಿಯುವ ಮೊದಲು ಎದ್ದು ಹೋಗುತ್ತಿದ್ದರು.

* ಅಲ್ಬೇನಿಯಾದ ಅತಿಥಿ ಡಾ. ಬುಜರ್ ರಾಮಾಜ್ ಹೇಳಿದರು: ಹೊಸ ಸ್ಥಳದ ಹೊರತಾಗಿಯೂ ಜಲ್ಸದ ವ್ಯವಸ್ಥೆಗಳು ತುಂಬಾ ಚೆನ್ನಾಗಿದ್ದವು, ಎಲ್ಲವನ್ನೂ ದೃಶ್ಯಾವಳಿಯಲ್ಲಿ ಜೋಡಿಸಲಾಗಿದೆಯಂತೆ. ಪರದೆಯ ಸಹಾಯದಿಂದ ತೋರಿಸಲಾದ ಸಾಕ್ಷ್ಯಚಿತ್ರಗಳು ಮತ್ತು ಇತರ ವಿಷಯಗಳು ಬಹಳ ಪ್ರಯೋಜನಕಾರಿಯಾಗಿದ್ದವು. ವಾಸ್ತವವಾಗಿ, ಹೊಸ ಪರಿಸ್ಥಿತಿಗಳಲ್ಲಿಯೂ ವ್ಯವಸ್ಥೆಗಳು ಉತ್ತಮವಾಗಿದ್ದವು. ಭಾಷಣಗಳು ತುಂಬಾ ಚೆನ್ನಾಗಿದ್ದವು. ಹಿಂದಿನ ಭಾಷಣಗಳನ್ನು ಒಳಗೊಂಡಂತೆ ಹುಝೂರ್ ಅನ್ವರ್(ಅತಬಿಅ) ಅವರ ಸಮಾರೋಪ ಭಾಷಣವು ಮಾರ್ಗದರ್ಶಿ ಮಾದರಿ ಸಮಾಜವನ್ನು ರಚಿಸುವತ್ತ ನಮ್ಮ ಗಮನವನ್ನು ಸೆಳೆಯುತ್ತದೆ.

* ಅಲ್ಬೇನಿಯಾದ ಅತಿಥಿ ಸಿಲ್ವಿ, ಹಲವು ವರ್ಷಗಳ ನಂತರ ಎರಡನೇ ಬಾರಿಗೆ ಜಲ್ಸಕ್ಕೆ ಬಂದರು. ಅವರು ಹೇಳಿದರು: ಇವು ನನಗೆ ನನ್ನ ಜೀವನದ ಅತ್ಯುತ್ತಮ ಕ್ಷಣಗಳು. ಜಲ್ಸದ ವ್ಯವಸ್ಥೆಗಳು ತುಂಬಾ ಚೆನ್ನಾಗಿದ್ದವು. ಜಲ್ಸದ ಬಳಿ ನನ್ನ ನಿವಾಸದಿಂದಾಗಿ, ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಮೊದಲ ಬಾರಿಗೆ ಫಜ್ರ್, ಮಗ್ರಿಬ್ ಮತ್ತು ಇಶಾ ನಮಾಝ್‌ಗಳನ್ನು ನಿರ್ವಹಿಸಲು ನನಗೆ ಅವಕಾಶ ಸಿಕ್ಕಿತು. ಆಹಾರವು ತುಂಬಾ ಚೆನ್ನಾಗಿತ್ತು ಮತ್ತು ಶುಚಿತ್ವದ ಗುಣಮಟ್ಟವೂ ತುಂಬಾ ಚೆನ್ನಾಗಿತ್ತು.

* ಅಲ್ಬೇನಿಯಾದಿಂದ ಬಂದ ಅತಿಥಿ, ತಿರಾನಾ ವಿಶ್ವವಿದ್ಯಾಲಯದ ನೈಸರ್ಗಿಕ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ. ಡಾ. ರೆಕೈಪ್ ಶ್ಕುರ್ತಿ, ಅವರು ತಮ್ಮ ಪತ್ನಿಯೊಂದಿಗೆ ಬಂದರು. ಅವರು ಹೇಳಿದರು: ಸಭೆ ತುಂಬಾ ಭವ್ಯವಾಗಿತ್ತು. ನಾನು ಹತ್ತು ವರ್ಷಗಳಿಂದ ಉಪವಾಸ ಮಾಡುತ್ತಿದ್ದೇನೆ ಮತ್ತು ಇಸ್ಲಾಂನ ಇತರ ನಿಯಮಗಳನ್ನು ಪಾಲಿಸಲು ಪ್ರಯತ್ನಿಸುತ್ತೇನೆ, ಆದರೆ ಅವೆಲ್ಲವೂ ಅಲ್ಲ. ಇಲ್ಲಿ ನಾನು ಇಸ್ಲಾಂ ಅನ್ನು ನೋಡಿದ್ದೇನೆ. ನೀವು ಇತರ ಮುಸ್ಲಿಮರಾದ ಖಲೀಫತ್‌ಗಿಂತ ಸ್ಪಷ್ಟ ವ್ಯತ್ಯಾಸವನ್ನು ಹೊಂದಿದ್ದೀರಿ ಮತ್ತು ಅದಕ್ಕಾಗಿಯೇ ನಿಮ್ಮಲ್ಲಿ ಏಕತೆಯೂ ಇದೆ.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.